ಪುಸ್ತಕ ಪ್ರಪಂಚ

ಡಿಸೆಂಬರ್—೧೯೯೮



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

ಪುಸ್ತಕ ಪ್ರಪಂಚ

ಸಂಪುಟ ೪೯   ಸಂಚಿಕೆ ೩   ಡಿಸೆಂಬರ್ ೧೯೯೮

ಪರಿವಿಡಿ

ರಕ್ಷಾಪುಟ
ಅಮರ್ತ್ಯಸೇನ್

PUSTAKA PRAPANCHA : Monthly

Published and printed by Karnataka State Adult Education Council, Mysore-6. Price : Rupees Six

ಬಿಡಿಪ್ರತಿ : ರೂ. ೬

ವಾರ್ಷಿಕ ಚಂದಾ : ರೂ ೬೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೪೦೦

ಸಂಸ್ಥೆಗೆ : ರೂ. ೬೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು–೫೭೦ ೦೦೬

ಭಾರತಕ್ಕೆ ಗೌರವವನ್ನು ತಂದ ಅಮರ್ತ್ಯಸೇನ್

ಶತಶತಮಾನಗಳಿಂದ ಜಗತ್ತಿನಲ್ಲಿ ಆರ್ಥಿಕ ಚಿಂತನೆ ನಿರಂತರವಾಗಿ ನಡೆಯುತ್ತಿದೆ: ಅರ್ಥ ವಿಜ್ಞಾನ ಶಾಖೋಪಶಾಖೆಗಳಾಗಿ ಬೆಳೆಯುತ್ತಿದೆ. ಉತ್ಪನ್ನ, ಉತ್ಪನ್ನ ವಿಧಾನ ಮಾಧ್ಯಮಗಳು, ಬೇಡಿಕೆ ಪೂರೈಕೆ ಹಂಚಿಕೆ, ವ್ಯಾಪಾರ ವಾಣಿಜ್ಯ, ಸಾಲಸೋಲ, ಬ್ಯಾಂಕಿಂಗ್, ನಾಣ್ಯ ಚಲಾವಣೆ, ಆಮದು ರಫ್ತುಗಳು, ಬೆಲೆ ಖರ್ಚುವೆಚ್ಚಗಳು, ವಿನಿಮಯ, ಜೀವನಮಟ್ಟ ಇತ್ಯಾದಿ ಹಲವು ವಿಷಯಗಳ ಬಗ್ಗೆ ವ್ಯಾಸಸೂತರಿಗೂ ಬೇಸರವಾಗುವಷ್ಟು ಚರ್ಚೆ ನಡೆದಿದೆ, ಫಣಿರಾಯ ತಿಣುಕುವಷ್ಟು ಗ್ರಂಥಗಳು ಹೊರ ಬಿದ್ದಿವೆ. ಆದರೂ ಕ್ಷಾಮಡಾಮರಗಳ ಬಗ್ಗೆ, ಸಮಾಜದ ದುರ್ಬಲರ ಬಗ್ಗೆ, ಶ್ರಮಜೀವಿಗಳ ಬಗ್ಗೆ, ಬಡತನದಬಗ್ಗೆ ಸಮಂಜಸವಾದ ಪರಿಹಾರೋಪಾಯಗಳನ್ನು ಸೂಚಿಸಿದ ಅರ್ಥಶಾಸ್ತ್ರಜ್ಞ ಜಗತ್ತಿಗೊಬ್ಬರೇ ! ಅವರೂ ಭಾರತೀಯರೆಂದರೆ, ಭಾರತೀಯರು ಹೆಮ್ಮೆಯಿಂದ ಸಂತೋಷಪಡಬೇಕಾದ ಸಂಗತಿಯೆಂದೇ ಹೇಳಬೇಕು. ಯೋಗಕ್ಷೇಮ ಅರ್ಥಶಾಸ್ತ್ರದ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ಮೂಲಕ ಅವರು ಆರ್ಥಿಕ ಚಿಂತನೆಯ ದಾರಿಯನ್ನೆ ಬದಲಿಸಿದ್ದಾರೆ. ವಿನೂತನ ಆರ್ಥಿಕ ಸಿದ್ಧಾಂತಗಳನ್ನು ರೂಪಿಸಿದ್ದಾರೆ. ಪ್ರಾಯೋಗಿಕವಲ್ಲದ ಸಿದ್ಧಾಂತಗಳಾಗಲಿ, ಲೋಕ ಕಲ್ಯಾಣಕರವಲ್ಲದ ಸಾಮಾಜಿಕ ಬದ್ಧತೆಯಿಲ್ಲದ ಸಾಹಿತ್ಯ ವಿಜ್ಞಾನ ತಂತ್ರಜ್ಞಾನ ಸಮಾಜ ವಿಜ್ಞಾನವಾಗಲೀ ಯಾವುದೇ ಜ್ಞಾನಶಾಖೆಯಾಗಲಿ ಗೊಡ್ಡಾಕಳೆಂದು, ತ್ಯಾಜ್ಯವೆಂದವರು ಬಲ್ಲರು. ಈ ಹಿಂದೆ ಅರ್ಥಶಾಸ್ತ್ರಜ್ಞರು ಅನೇಕ ಸಿದ್ಧಾಂತಗಳನ್ನು ರೂಪಿಸಿದ್ದುಂಟು; ಗಣಿತೀಯವಾಗಿ ಆಲೋಚಿಸಿದ್ದುಂಟು; ಅನೇಕ ಸಮೀಕರಣಗಳನ್ನು ಮಂಡಿಸಿದ್ದುಂಟು ; ತಮ್ಮ ಪ್ರಮೇಯಗಳನ್ನು ಸಮರ್ಥಿಸಿಕೊಳ್ಳಲು ರೇಖಾಗಣಿತ ಬೀಜಗಣಿತಗಳನ್ನು ಸೂರೆಗೊಂಡದ್ದುಂಟು. ಬಂಡವಾಳವಾದ, ಸಮಾಜವಾದ, ಸಾಮ್ಯವಾದಗಳನ್ನು ಆಶ್ರಯಿಸಿದ್ದುಂಟು. ಈಗ ಜಾಗತಿಕ ಮಾರುಕಟ್ಟೆಯ ಸಿದ್ಧಾಂತದವರೆಗೆ ಬಂದು ನಿಂತದ್ದುಂಟು. ಇಷ್ಟಾದರೂ ಸಾಮಾಜಿಕ, ಆರ್ಥಿಕ ತಾರತಮ್ಯಗಳು ಕೊನೆಗೊಂಡು ಜಗತ್ತಿನಲ್ಲಿ ಶಾಂತಿ ನೆಲಸಿಲ್ಲ. ಅರ್ಥಶಾಸ್ತ್ರಜ್ಞರ ತಂತ್ರವಿಧಾನಗಳನ್ನು ಬಳಸಿಕೊಂಡೇ ವಿನೂತನ ಪ್ರಾಯೋಗಿಕ ಅರ್ಥಶಾಸ್ತ್ರವನ್ನು ಜಗತ್ತಿಗೆ ಬೋಧಿಸಿದ ಕೀರ್ತಿ ಭಾರತೀಯ ಸಂಜಾತ ಅಮರ್ತ್ಯಕುಮಾರಸೇನ್‌ರಿಗೆ ಸಲ್ಲುತ್ತದೆ.

'ಶ್ರೀಮಂತರನ್ನು ಮಾತ್ರವೇ ಲಕ್ಷ್ಯದಲ್ಲಿಟ್ಟುಕೊಂಡು, ಸಮಾಜದ ಬಡವರನ್ನು ಮತ್ತು ದುರ್ಬಲರನ್ನು ಮರೆತು, ಸಮಾಜದಲ್ಲಿ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ನಡೆಯುವ ಘಟನೆಗಳನ್ನು ಮೌಲ್ಯೀಕರಿಸಲಾಗದು. ಬಡತನದ ನಿವಾರಣೆಗೆ ಶಿಕ್ಷಣ ಮತ್ತು ಆರೋಗ್ಯ ಮುಖ್ಯ. ಆರೋಗ್ಯವಿದ್ದರೆ ಮಾತ್ರ ದುಡಿಮೆ ಸಾಧ್ಯ. ದುಡಿಮೆಯಿಂದ ಉತ್ಪತ್ತಿ

ಕೈಗೂಡುತ್ತದೆ. ಒಳ್ಳೆಯ ಶಿಕ್ಷಣದಿಂದ ಬೌದ್ಧಿಕ ಶಕ್ತಿಯೂ, ಬೌದ್ಧಿಕ ಶಕ್ತಿಯಿಂದ ಆರ್ಥಿಕಶಕ್ತಿಯೂ ಅಧಿಕವಾಗುವುದಲ್ಲದೆ, ನೈತಿಕ ಶಕ್ತಿಯೂ ಹೆಚ್ಚುತ್ತದೆ. ಕ್ಷಾಮಕ್ಕೆ ಭಾಗಾಂಶ ನಿಸರ್ಗ ಕಾರಣವಾದರೆ, ಭಾಗಾಂಶ ಮಾನವ ಕಾರಣ. ಆಹಾರಾಭಾವವಿರದಿದ್ದರೂ, ಕ್ಷಾಮ ಅಸಂಖ್ಯ ಜನರನ್ನು ಆಹುತಿ ತೆಗೆದುಕೊಳ್ಳುತ್ತದೆ. ಇದಕ್ಕೆ ಕಾರಣವೇನು? ಬಡವರಲ್ಲಿ ಕೊಳ್ಳಲು ಹಣವಿಲ್ಲ. ಹಣವನ್ನಾಗಲಿ, ಧಾನ್ಯವನ್ನಾಗಲಿ ಭಿಕ್ಷೆಯ ರೂಪದಲ್ಲಿ ವಿತರಿಸಬಾರದು; ಮುಫತ್ತಾಗಿ ಹಂಚಬಾರದು. ಅವರಿಗೆ ಕೆಲಸ ಒದಗಿಸಬೇಕು. ತಾವು ದುಡಿದು ಗಳಿಸಿದ ಹಣದಿಂದ ಆಹಾರ ಸಾಮಗ್ರಿಗಳನ್ನು ಕೊಳ್ಳುವಂತಾಗಬೇಕು—ಇದು ಅಮರ್ತ್ಯಸೇನ್‌ರ ವಾದ. ಈ ವಾದ ಸಾಂಪ್ರದಾಯಿಕ ಆರ್ಥಿಕ ಜಿಜ್ಞಾಸೆಯಿಂದ ವಿಭಿನ್ನವಾಗಿರುವುದರಿಂದ, ಜಗತ್ತಿನ ಬಹುಪಾಲು ಬಡತನಕ್ಕೆ ಇದು ದಾರಿದೀಪವಾಗಲಿದೆಯಾದ್ದರಿಂದ ಅವರಿಗೆ ನೊಬೆಲ್ ಪ್ರಶಸ್ತಿ ದೊರಕಿದೆ; ಅವರಿಂದ ಭಾರತಕ್ಕೆ ಅಪೂರ್ವ ಗೌರವ ಲಭಿಸಿದೆ.

ಉಪನಿಷತ್ಕಾರರ, ಬುದ್ಧ ಬಸವ ಗಾಂಧೀಜಿಯರ ಬದುಕು ಬಲ್ಲವರಿಗೆ, ಅವರ ಸಂದೇಶವನ್ನು ಕೇಳಿದವರಿಗೆ ಈ ವಿಚಾರಗಳು ಹೊಸವಲ್ಲ. ಆಸ್ತಿಯೊಂದು ಚೌರ್ಯ, ದುಡಿಮೆಯಿಲ್ಲದ ಬದುಕು ಪಾಪ ಹಾಗೂ ವಂಚನೆ, ಧನ ಸಂಗ್ರಹ ದೈವ ದ್ರೋಹ ಹಾಗೂ ದೇಶದ್ರೋಹವೆಂದು ಅವರು ಘೋಷಿಸಿದ್ದಾರೆ. ಶಿವನ ಸೊಮ್ಮು ಶಿವನವರಿಗೆ ವ್ಯಯಿಸದೆ ಹಣ ಕೂಡಿಟ್ಟವರು ಕಾಗೆ ಕೋಳಿಗಳಿಗಿಂತ ಹೀನರು, ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ, ಅನ್ನದೊಳಗೊಂದಗುಳ, ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ ನಿಮ್ಮಾಣೆಯೆಂದು ಬಸವೇಶ್ವರರು ನುಡಿಯುತ್ತಾರೆ. ಚಿತ್ತ ಶುದ್ಧದಲ್ಲಿ ಕಾಯಕವ ಮಾಡುವಲ್ಲಿ ಸದ್‌ಭಕ್ತರಿಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು ಎಂದು ಲಕ್ಕಮ್ಮ ಸ್ಪಷ್ಟಪಡಿಸುತ್ತಾರೆ. 'ಕ್ರಿಯೆಯನರಿದವರಿಗೆ ಗುರುವಿಲ್ಲ, ಎಂಬುದು ಅಂಬಿಗರ ಚೌಡಯ್ಯನ ಮಾತು. ಬೃಹದ್ಯಂತ್ರ ಕೈಗಾರಿಕೆಗಳಿಗೆ ಬದಲಾಗಿ ಗುಡಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸಬೇಕೆಂಬ ಗಾಂಧಿವಾದವಾಗಲಿ, ಸಣ್ಣದೇ ಸುಂದರ ಎಂಬ ಷುಮೇಕರ್‌ನ ಹೇಳಿಕೆಯಾಗಲಿ ಬಡತನ ಹಸಿವು ನಿರುದ್ಯೋಗಗಳ ಸಮಸ್ಯೆಯನ್ನು ಬಗೆಹರಿಸುವ ಮಾರ್ಗಗಳೆಂದೇ ಹೇಳಬೇಕು. ಈ ದೃಷ್ಟಿಯಿಂದ ಯೋಗಕ್ಷೇಮ ಅರ್ಥಶಾಸ್ತ್ರದ ಕಲ್ಪನೆ ಭಾರತೀಯರಿಗೆ ಹೊಸದಲ್ಲವಾದರೂ, ಅದಕ್ಕೊಂದು ವಿಜ್ಞಾನದ ಚೌಕಟ್ಟನ್ನು ನಿರ್ಮಿಸಿದ ಕೀರ್ತಿ ಅಮರ್ತ್ಯಸೇನ್‌ರಿಗೆ ಸಲ್ಲಬೇಕು. ಆದರೆ ಗಾಂಧೀಜಿ ಮಾತನ್ನೇ ನಡಸದ ಜನ ಅಮರ್ತ್ಯಸೇನ್‌ರ ಮಾತನ್ನು ನಡಸುತ್ತಾರೆಯೆ? ನೊಬೆಲ್ ಪ್ರಶಸ್ತಿ ದೊರೆತದ್ದಕ್ಕಾಗಿ ಅವರನ್ನು ಎರಡು ದಿನ ಹೊಗಳಿ ಮರೆಯುತ್ತಾರೆ.

ಹುಟ್ಟು ಬೆಳವಣಿಗೆ ಕಲಿಕೆಗಳ ದೃಷ್ಟಿಯಿಂದ ಅಮರ್ತ್ಯಸೇನ್ ಪುಣ್ಯವಂತರು. ತಾಯಿತಂದೆಯರಿಬ್ಬರ ಕಡೆಯಿಂದಲೂ ಅವರ ಹಿರಿಯರು ಸುಸಂಸ್ಕೃತ ಪಂಡಿತ ವಂಶಕ್ಕೆ ಸೇರಿದವರು. ಅಶುತೋಷ್ ಅಮಿತ ತಂದೆ ತಾಯಿಯರ ಮಗನಾಗಿ, ೧೯೩೩ರ ನವಂಬರ್

ಮೂರರಂದು ಶಾಂತಿ ನಿಕೇತನದಲ್ಲಿ ಹುಟ್ಟಿದ್ದು, ಗುರುದೇವ ರವೀಂದ್ರರೇ ಮಗುವಿಗೆ ನಾಮಕರಣ ಮಾಡಿದ್ದು ಯೋಗಾಯೋಗವೇ ಸರಿ. ಅವರು ೧೯೪೪ರ ತನಕ ತಮ್ಮ ಬಾಲ್ಯವನ್ನು ಢಾಕಾದಲ್ಲಿ ತಮ್ಮ ತಂದೆ ತಾಯಿಯರೊಂದಿಗೆ ಕಳೆದು, ಕಲ್ಕತ್ತೆಗೆ ಹಿಂದಿರುಗುತ್ತಾರೆ ಎರಡನೆಯ ಮಹಾಯುದ್ಧದ ಸಮಯದಲ್ಲಿ ಬಂಗಾಳದಲ್ಲಿ ಪ್ರಾಪ್ತವಾದ ಭೀಕರ ಕ್ಷಾಮ, ರೋಗರುಜಿನ, ಸಾವುನೋವುಗಳು ಅವರ ಎಳೆಯ ಮನಸ್ಸಿನ ಮೇಲೆ ಅಪಾರ ಪರಿಣಾಮವನ್ನುಂಟು ಮಾಡಿದ್ದಲ್ಲದೆ, ಬಾಳಿನುದ್ದಕ್ಕೂ ಅವರ ಸ್ಮೃತಿ ಪಟಲದಲ್ಲಿ ನೆಲೆಗೊಳ್ಳುತ್ತವೆ. ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರದಲ್ಲಿ ಸ್ನಾತಕ ಪದವಿಯನ್ನು ಪಡೆಯುವ ಹೊತ್ತಿಗೆ, ಅವರು ಕ್ಯಾನ್ಸರ್ ರೋಗಿಯೆಂದು ವೈದ್ಯರು ತೀರ್ಪು ಕೊಡುತ್ತಾರೆ. ಆ ತೀರ್ಪಿನಿಂದ ನೊಂದ ತಾಯಿ ಮಗನನ್ನು ಮುಂದಿನ ಓದಿಗೆಂದು ಕೇಂಬ್ರಿಜ್‌ಗೆ ಕಳಿಸುತ್ತಾರೆ. ಅಲ್ಲಿಗೆ ಹೋದನಂತರ ಅರ್ಥಶಾಸ್ತ್ರದ ಪಾಂಡಿತ್ಯದಲ್ಲಿ ಕ್ಯಾನ್ಸರ್ ಮರೆಯಾಗುತ್ತದೆ. ಉನ್ನತ ದರ್ಜೆಯಲ್ಲಿ ಎಂ.ಎ. ಮತ್ತು ಡಾಕ್ಟೊರೇಟ್ ಪದವಿಗಳನ್ನು ಪಡೆದು ಇಂಡಿಯಾಕ್ಕೆ ಹಿಂದಿರುಗಿದಾಗ ಅವರಿಗಿನ್ನು ಇಪ್ಪತ್ತಮೂರು ವರ್ಷ ವಯಸ್ಸು. ಜಾಧವ್‌ಪುರ ವಿಶ್ವವಿದ್ಯಾನಿಲಯದ ಕುಲಪತಿ ತ್ರಿಗುಣಸೇನ್ ಅವರನ್ನು ಪ್ರಾಧ್ಯಾಪಕರನ್ನಾಗಿ ನೇಮಿಸಿಕೊಳ್ಳಲಾಗಿ, ಅವರ ಮೇಲೆ ಸ್ವಜಾತಿಪಕ್ಷಪಾತದ ಆಪಾದನೆಯನ್ನು ಹೊರಿಸಲಾಗುತ್ತದೆ. ಇಂಡಿಯಾದಲ್ಲಿ ಇದು ಇದ್ದದ್ದೇ. ಆಪಾದನೆ ಹೊರಿಸಿದವರು ಈಗ ಬದುಕಿದ್ದರೆ ಏನು ಹೇಳುತ್ತಾರೆಯೋ ಗೊತ್ತಿಲ್ಲ. ಆಮೇಲೆ ಅವರ ಜೀವನದ ಆರೋಹಣಪರ್ವ ಪ್ರಾರಂಭವಾಗುತ್ತದೆ. ದೆಹಲಿಯ ಅರ್ಥವಿಜ್ಞಾನ ಶಾಲೆ, ಲಂಡನ್ ಅರ್ಥಶಾಸ್ತ್ರ ಶಾಲೆ, ಕ್ಯಾಲಿಫೋರ್ನಿಯಾ ಹಾಗೂ ಹಾರ್ವರ್ಡ್ ವಿಶ್ವವಿದ್ಯಾನಿಲಯಗಳು, ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ, ಹೀಗೆ ಅವರು ಎಲ್ಲಿ ಹೋದರೂ ತಮ್ಮ ಛಾಪನ್ನೊತ್ತಿದ್ದಾರೆ. ಈಗಂತು ಟ್ರಿನಿಟಿ ಕಾಲೇಜಿನ ಮುಖ್ಯಸ್ಥರು. ಪ್ರಪಂಚ ಸಂಸ್ಥೆಗೆ ಅವರ ನೆರವು ಅನಿವಾರ್ಯ. ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿಯೂ ಹೆಸರು ಮಾಡಿರುವ ಅವರು ನೀತಿ ಶಾಸ್ತ್ರದ ತಳಹದಿಯ ಮೇಲೆ, ತತ್ವಶಾಸ್ತ್ರದ ಬೆಳಕಿನಲ್ಲಿ ಅರ್ಥಶಾಸ್ತ್ರದ ಸೌಧವನ್ನು ನಿರ್ಮಿಸಬೇಕೆನ್ನುತ್ತಾರೆ. ಹಾಗೆ ಹೇಳುವವರು ಅವರೊಬ್ಬರೇ.

ಬೋಧನೆಯ ಜತೆಜತೆಗೆ ಜಗತ್ಕಲ್ಯಾಣಕ್ಕಾಗಿ ಸಂಶೋಧನೆಯನ್ನು ಮುಂದುವರಿಸಿದ ಅಪರೂಪದ ವಿದ್ವಾಂಸರವರು. ಬೋಧನೆ ಸಾಕು, ಶೋಧನೆ ಬೇಡ ಎಂದು ತಾರಸ್ವರದಿಂದ ಬಗುಳುವ ವಿಧ್ವಂಸಕ ಕುಲಪತಿಗಳಿಗೆ ಅವರು ಸವಾಲಾಗಿದ್ದಾರೆ. ಚೀನಾ ಬಂಗ್ಲಾದೇಶ ಇಥಿಯೋಪಿಯಾ ಸಹಾರಾನ್ ಮೊದಲಾದ ಪ್ರದೇಶಗಳಲ್ಲಿ ಸಂಭವಿಸಿದ ಕ್ಷಾಮಗಳನ್ನು ಆಳವಾಗಿ ಅಧ್ಯಯನ ಮಾಡಿದ ನಂತರ ದಾರಿದ್ರ್ಯ ಮತ್ತು ಕ್ಷಾಮಗಳ ಬಗ್ಗೆ ಅಪೂರ್ವವಾದ ಸಿದ್ಧಾಂತಗಳನ್ನು ಮಂಡಿಸುತ್ತಾರೆ. ಅವೆಲ್ಲವೂ ಭಾರತೀಯ ತತ್ವಶಾಸ್ತ್ರದ ನೆಲೆಗಟ್ಟಿನಮೇಲೆ ನಿಂತಿವೆ, ಕವಿಋಷಿ ಸಂತರ ಆಲೋಚನಾ ಧಾಟಿಯನ್ನನುಸರಿಸಿವೆ ಎಂದೇ ಹೇಳಬೇಕು. ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ದೇವಾಂಶ

ಇದೆ, ಪ್ರತಿಭೆಯಿದೆ, ಮಾನಸಿಕ ಬೌದ್ಧಿಕ ಶಕ್ತಿಯಿದೆ; ಅವುಗಳ ವಿಕಾಸಕ್ಕೆ ತಕ್ಕ ವಾತಾವರಣಾವಕಾಶಗಳು ಇಂಡಿಯಾದಲ್ಲಿ ಐದು ಸಾವಿರ ವರ್ಷದಿಂದಲೂ ಇಲ್ಲ; ಅದರಿಂದಾಗಿ ಇಂಡಿಯಾದೇಶ ಅನ್ಯಾಕ್ರಮಣಕ್ಕೆ ಗುರಿಯಾಗುತ್ತದೆ; ಸ್ವಾತಂತ್ರ್ಯ ನಂತರವೂ ಅದು ಹಳೆಯ ಜಾಡಿನಲ್ಲಿ ಮುಂದುವರಿಯುತ್ತಿದೆಯೆಂಬುದನ್ನು ಅಮರ್ತ್ಯಸೇನ್‌ರ ಆವಿಷ್ಕಾರಗಳಿಂದರಿಯಬಹುದಾಗಿದೆ. ೧೯೬೮ ರಲ್ಲಿಯೇ ಪ್ರಕಟಗೊಂಡ ದಾರಿದ್ರ್ಯ ಮತ್ತು ಕ್ಷಾಮ ಎಂಬ ಗ್ರಂಥ ಶಿಕ್ಷಣ ಮತ್ತು ಆರೋಗ್ಯಗಳು ಜನಕಲ್ಯಾಣಕ್ಕೆ ಮೊದಲು ಎಂಬುದನ್ನು ಪ್ರತಿಪಾದಿಸುತ್ತದೆ. ನ್ಯಾಯವಾಗಿ ಅದು ಪ್ರಕಟವಾದಾಗಲೇ ನೊಬೆಲ್ ಪ್ರಶಸ್ತಿ ಬರಬೇಕಾಗಿತ್ತು. ಈ ಪ್ರಶಸ್ತಿ ಅಮರ್ತ್ಯಸೇನರಿಗೆಂತೊ, ಭಾರತೀಯ ತತ್ತ್ವಶಾಸ್ತ್ರಕ್ಕ ಸಂದ ಗೌರವವೆಂದೇ ಹೇಳಬೇಕು.

ಒಬ್ಬನ ಏಳ್ಗೆ ಮತ್ತೊಬ್ಬನ ಈರ್ಷ್ಯೆಗೆ ಕಾರಣವಾಗುತ್ತದಷ್ಟೆ. ಅಮರ್ತ್ಯರ ವಿರುದ್ಧವಾಗಿ ಪ್ರಚಾರಮಾಡಿದ ಜನ ಪಾಶ್ಚಾತ್ಯವಿದ್ವತ್ ಕ್ಷೇತ್ರದಲ್ಲಿಯೇ ಹಲವರಿದ್ದರು. ಆದರೆ ಕೊನೆಗೆ ಸತ್ಯಕ್ಕೆ ಜಯ ಲಭಿಸುತ್ತದೆ. ಕಾಶ್ಮೀರ ಪಾಕಿಸ್ತಾನಕ್ಕೆ ಸೇರಬೇಕೆಂದು ಅಮರ್ತ್ಯರು ಎಂದೋ ಹೇಳಿದ್ದರಂತೆ (ಹಿಂದೂ: ೩-೧೧-೯೮) ಅದಕ್ಕಾಗಿ ಅವರಿಗೆ ಮರಣಭಯವಿರುವುದಾಗಿ, ಇನ್ನೂ ಬದುಕಿದ್ದು, ಆನಂದದ ಅಲೆಯ ಮೇಲೆ ತೂಗುಯ್ಯಾಲೆಯಾಡುತ್ತಿರುವ ಅವರ ತಾಯಿ ಸರ್ಕಾರದ ಸಹಾಯ ಕೇಳಿದ್ದಾರೆ. ಕಾಶ್ಮೀರದ ಬಗ್ಗೆ ಅಮರ್ತ್ಯರು ಹಾಗೆ ಹೇಳಿದ್ದು ದುರ್ದೈವ. ಜಮ್ಮುವನ್ನುಳಿದ ಕಾಶ್ಮೀರ ವಾದರೆ ವಿಚಾರವೇ ಬೇರೆಯಾಗುತ್ತದೆ. ಆದರೂ ಅವರು ಅಮೆರಿಕೆಯಲ್ಲಿದ್ದು ಅಮೆರಿಕೆಯಂತೆ ಆಲೋಚಿಸುತ್ತಿದ್ದಾರೆಯೇ ಹೊರತು ಇಂಡಿಯಾದ ನೈಜ ಪರಿಸ್ಥಿತಿಯನ್ನರಿತುಕೊಂಡು ಮಾತಾಡುವಂತೆ ತೋರುವುದಿಲ್ಲ. ಅದರೂ ಇಂಥ ಸಂತೋಷದ ಸಮಯಲ್ಲಿ ಅವರ ಅನುಚಿತ ರಾಜಕೀಯಾಭಿಪ್ರಾಯಗಳನ್ನು ಮರೆತು, ಅವರಿಗೆ ಅಭಿನಂದನೆ ಸಲ್ಲಿಸುವುದು ಎಲ್ಲ ಭಾರತೀಯರ ಕರ್ತವ್ಯವಾಗಿದೆ.

ಅಮರ್ತ್ಯರು ಭಾರತೀಯ ಪ್ರಜೆಯಾದರೂ ಈಗ ಜಗತ್ತಿನ ಎಲ್ಲ ಹಿಂದುಳಿದ ರಾಷ್ಟ್ರಗಳಿಗೆ ಸೇರಿದವರಾಗಿದ್ದಾರೆ. ಅವರು ಜಗತ್ತಿಗೆ ನೀಡಿರುವ ಕಾಣಿಕೆಯೆಂದರೆ, ಈತನಕ ಯಾರೂ ನೀಡಲಾರದಿದ್ದ ಮಾನವೀಯ ಅರ್ಥಶಾಸ್ತ್ರ. ಆಜನ್ಮ ಶ್ರೇಷ್ಠ ಬೋಧಕರಾದ ಅವರ ಮೊದಲ ಹೆಂಡತಿ ನವನೀತಾ, ಬಂಗಾಳಿ ಸಾಹಿತಿ. ಪತ್ರಿಕೋದ್ಯಮಿ ಅಂತರಾ ಮತ್ತು ನಟಿನಂದನಾ ಅವರ ಇಬ್ಬರು ಹೆಣ್ಣುಮಕ್ಕಳು. ಅಮರ್ತ್ಯರ ಎರಡನೆಯ ಹೆಂಡತಿ ಇಟಲಿಯಾಕೆ. ಕಬೀರ್ ಮತ್ತು ಇಂದ್ರಾಣಿ ಅವಳ ಹೊಟ್ಟೆಯಲ್ಲಿ ಹುಟ್ಟಿದವರು. ಅವಳು ಸತ್ತನಂತರ ಎಮ್ಮ ರಾತ್ಸ್‌ಚೈಲ್ಡ್‌ಳನ್ನು ಮದುವೆಯಾಗಿ, ಅವಳ ಒಡನಾಟದಲ್ಲಿ ಸುಖವಾಗಿದ್ದಾರೆ.

ಶಿಕ್ಷಣ ಮಂತ್ರಿಗಳ ಸಮಾವೇಶ

ಸ್ವಾತಂತ್ರ್ಯೋತ್ತರ ಕೇಂದ್ರ ಸರ್ಕಾರದ ಇತಿಹಾಸದಲ್ಲಿ ಹಿಂದೆಂದೂ ನಡೆಯದ, ಎಂದೂ ನಡೆಯಬಾರದ ರಾದ್ಧಾಂತವೊಂದು ೨೨-೧೦-೯೮ರಂದು ದೆಹಲಿಯಲ್ಲಿ ನಡೆದದ್ದು ದುರ್ದೈವ ಹಾಗೂ ದುಶ್ಯಕುನ ಸೂಚಕ. ಶೈಕ್ಷಣಿಕ ಸಮಸ್ಯೆಗಳನ್ನು ಚರ್ಚಿಸುವ ಸಲುವಾಗಿ ಮಾನವ ಸಂಪನ್ಮೂಲ ಸಚಿವ ಶಾಖೆ ದೇಶದ ವಿದ್ಯಾಮಂತ್ರಿಗಳ ಸಮಾವೇಶವನ್ನು ಸಂಘಟನೆಗೊಳಿಸಿತ್ತು. ಪ್ರಧಾನಿ ವಾಜಪೇಯಿಯವರು ಸಮಾವೇಶವನ್ನುದ್ಘಾಟಿಸಲು ಮೇಲೇಳುತ್ತಿದ್ದಂತೆ, ಸರ್ಕಾರ ತಯಾರಿಸಿದ್ದ ಚರ್ಚಾವಿಷಯಗಳ ವಿರೋಧವಾಗಿ ಘೋಷಣೆ ಕೂಗುತ್ತ, ಹಲವು ಮಂದಿ ವಿದ್ಯಾಮಂತ್ರಿಗಳು ಸಭಾತ್ಯಾಗ ಮಾಡುತ್ತಾರೆ. ಭಾರತೀಕರಣ ಹಾಗೂ ಅಧ್ಯಾತ್ಮೀಕರಣದ ನೆಪದಲ್ಲಿ ಭಾಜಪ ಸರ್ಕಾರ ಕೇಸರೀಕರಣಮಾಡುತ್ತಿದೆಯೆಂಬುದೇ, ರಾಜ್ಯಾಂಗದತ್ತ ಅಲ್ಪಸಂಖ್ಯಾತರ ಹಕ್ಕುಗಳನ್ನು ಕಸಿದುಕೊಳ್ಳುವ ಪ್ರಯತ್ನ ನಡೆಯುತ್ತಿದೆಯೆಂಬುದೇ ಸಭಾತ್ಯಾಗಕ್ಕೆ ಕಾರಣ. ಮಧ್ಯಪ್ರದೇಶದ ಆರ್‌ಎಸ್‌ಎಸ್ ಆಶ್ರಯದ ವಿದ್ಯಾಭಾರತಿ ಟ್ರಸ್ಟ್ ಸಮಾವೇಶದ ಕಾರ್ಯಸೂಚಿಯನ್ನು ತಯಾರಿಸಿತ್ತೆಂಬುದೂ, ಆ ಟ್ರಸ್ಟ್‌ನ ಮುಖಂಡನೂ ವಾಣಿಜ್ಯೋದ್ಯಮಿಯೂ ಆದ ಪಿ. ಡಿ. ಚಿಟಿಯಾಂಗ್ಲ ಎಂಬುವರು ಆಶಯ ಭಾಷಣ ಮಾಡುತ್ತಾರೆಂಬುದೂ ವಿದ್ಯಾಮಂತ್ರಿಗಳ ಅಸಮಾಧಾನಕ್ಕೆ ಪ್ರಮುಖ ಕಾರಣವೆಂದು ಹೇಳಲಾಗಿದೆ. ಪ್ರಾರಂಭದ ಸರಸ್ವತೀವಂದನ ಕಾರ್ಯಕ್ರಮವೂ ಅವರ ಸಹನೆಗೆ ಸವಾಲಾಗಿತ್ತಂತೆ. ಕೊನೆಗೂ ಸಚಿವಶಾಖೆ ಟ್ರಸ್ಟ್ ತಯಾರಿಸಿದ ಕಾರ್ಯಸೂಚಿಯನ್ನು ಆಶಯ ಭಾಷಣ ಕಾರ್ಯಕ್ರಮವನ್ನು ಕೈಬಿಟ್ಟು ಸೋಲೊಪ್ಪಿಕೊಳ್ಳಬೇಕಾಗುತ್ತದೆ. ನಿರ್ದಿಷ್ಟ ಸಭಾಮರ್ಯಾದೆಯ ದೃಷ್ಟಿಯಿಂದ ನಡೆದದ್ದೆಲ್ಲ ಸರಿಯೇ ಸರಿ.

ಸ್ವಾತಂತ್ರ್ಯ ಪೂರ್ವದಲ್ಲಿ ಮಾತ್ರವಲ್ಲ, ಸ್ವಾತಂತ್ರ್ಯಾನಂತರವೂ ಅನೇಕ ಅಮೂಲ್ಯ ಶೈಕ್ಷಣಿಕ ವರದಿಗಳು ಪ್ರಕಟಗೊಂಡಿವೆ. ಮೇಲಿಂದಮೇಲೆ ಬಂದ ಸರ್ಕಾರಗಳು ಮತ್ತು ವಿದ್ಯಾತಜ್ಞರು ತಮ್ಮ ಅಹಂಭಾವವನ್ನು ಮೆರೆಸುವ ಸಲುವಾಗಿ ಅವನ್ನು ಬೆಳ್ಳಿಮಾನು ರಜಗಳಿಗೊಪ್ಪಿಸಿ, ಹಿಂದಿನವರು ತಯಾರಿಸಿದ ಮದ್ಯವನ್ನೆ ಹೊಸ ಬಾಟಲಿಗಳಲ್ಲಿ ಕೊಡುತ್ತಾರೆ. ಇಂದಿಗೂ ಬ್ರಿಟಿಷ್ ಶಿಕ್ಷಣ ಪದ್ಧತಿ ಜಾರಿಯಲ್ಲಿದೆಯೆಂದು ಐವತ್ತು ವರ್ಷಗಳಿಂದ ಅವರು ಒಂದೇ ಸಮನೆ ಅರಚುತ್ತಿದ್ದಾರೆ. ಜನೋಪಯುಕ್ತವಾದ ಜ್ಞಾನದಾಯಕವಾದ ಪದ್ಧತಿ ಯಾವುದಾದರೇನು ? ಒಳ್ಳೆಯದು ಎಲ್ಲಿಂದ ಬಂದರೂ ಅದನ್ನು ಸ್ವೀಕರಿಸಬೇಕೆಂದು ಗಾಂಧೀಜಿ ಹೇಳಲಿಲ್ಲವೆ ? ಹದಿನಾಲ್ಕು ವಯಸ್ಸಿನ ಎಲ್ಲ ಮಕ್ಕಳಿಗೆ ಶಿಕ್ಷಣ ಸೌಲಭ್ಯಗಳನ್ನು ಸೃಷ್ಟಿಸಬೇಕಾಗಿರುವಾಗ, ತಾರತಮ್ಯವನ್ನು ಉತ್ತೇಜಿಸುವ ನವೋದಯ ಶಾಲೆಗಳ ಸ್ಥಾಪನೆ ಏಕೆ ಬೇಕಿತ್ತು ? ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ಸಾಧನೆಯಾಗಿದೆಯೆಂದು ಅಧಿಕಾರಿಗಳು ನೀಡುವ ಸುಳ್ಳು ಅಂಕಿಗಳ ಮೂಲಕ ಸರ್ಕಾರ ಸಮರ್ಥಿಸಿಕೊಳ್ಳುತ್ತಿದೆ. ಹಳ್ಳಿಗಾಡಿನಲ್ಲಿ ಶಿಶುವಿಹಾರಗಳಿಗೆ

ಪ್ರೋತ್ಸಾಹ ನೀಡದಿದ್ದರೆ, ಅಲ್ಲಿ ಶಿಕ್ಷಣದ ಮಟ್ಟವನ್ನು ಎತ್ತರಿಸುವುದು ಸಾಧ್ಯವಾಗದು. ಸಂಸ್ಕೃತವನ್ನು ಶಾಲೆಗಳಲ್ಲಿ ಕಡ್ಡಾಯಗೊಳಿಸುವುದರ ಉದ್ದೇಶವೇನು ? ಅದರಿಂದ ಮನು ಮಹರ್ಷಿಗೆ ದ್ರೋಹ ಬಗೆದಂತಾಗುವುದಿಲ್ಲವೆ? ಪ್ರಾದೇಶಿಕ ಭಾಷೆಗಳಿಗೆ ಪ್ರಥಮ ಭಾಷೆಯ ಸ್ಥಾನವಿದ್ದು, ದ್ವಿತೀಯ ಮತ್ತು ತೃತೀಯ ಭಾಷೆಗಳನ್ನು ಐಚ್ಛಿಕಗೊಳಿಸಿ, ಇತರ ಭಾಷೆಗಳ ಪಟ್ಟಿಯಲ್ಲಿ ಸಂಸ್ಕೃತವನ್ನು ಸೇರಿಸಬಹುದು. ತೌಡು ಕುಟ್ಟುವ ಚರ್ಚೆ ಯಲ್ಲಿ ಹಣ ಪೋಲುಮಾಡದಿರುವುದು ಮೇಲು.

ಉನ್ನತ ಶಿಕ್ಷಣದ ಮಟ್ಟವಂತು ದಿನೇದಿನೇ ಇಳಿಯುತ್ತಿದೆ. ರಾಜಕಾರಣಾಸಕ್ತ ರಾದ ಅಧ್ಯಾಪಕರ ಕರ್ತವ್ಯಚ್ಯುತಿಯೇ ಈ ಇಳಿತಕ್ಕೆ ಮುಖ್ಯಕಾರಣ. ಪಿಎಚ್‌ಡಿ ಪದವಿಗಳು ನಗುಪಾಟಲಾಗಿವೆ; ಅವು ಮಾರಾಟಕ್ಕಿವೆ. ಸಂಶೋಧನೆಗಂತು ಪುರಸ್ಕಾರ ವಿಲ್ಲ. ಪ್ರಾಧ್ಯಾಪಕ ಜ್ಞಾನ ಪ್ರಸಾರಕ ಮಾತ್ರವಲ್ಲ, ಜ್ಞಾನಸೃಷ್ಟಿಕರ್ತನೂ ಆಗಬೇಕು. ಅಂಥವನನ್ನು ವಿದ್ಯಾರ್ಥಿಗಳು ಗೌರವಿಸುತ್ತಾರೆ; ಗೌರವಾರ್ಹನಲ್ಲದ ಪ್ರಾಧ್ಯಾಪಕ ಖಜಾನೆಗೆ ಹೊರೆಯಾಗುತ್ತಾನೆ. ಬೋಧನೆ ಸಾಕು ಸಂಶೋಧನೆ ಬೇಡವೆಂದು ಕುಲಪತಿಗಳೇ ಉಗ್ಗಡಿಸುತ್ತಾರಂತೆ. ಗಟ್ಟಿಯಾದ ತಜ್ಞತೆಯಿಲ್ಲದ ಜನರನ್ನು ಕುಲಪತಿಗಳನ್ನಾಗಿ ಆರಿಸಿಕೊಂಡರೆ ಆಗುವುದೇ ಹೀಗೆ. ಕುಲಪತಿ ಹುದ್ದೆಗಳು ಸಹ ಮಾರಾಟಕ್ಕಿವೆಯೆಂಬ ಸುದ್ದಿಯೂ ದಟ್ಟವಾಗಿದೆ. ಫಲಿತಾಂಶಗಳನ್ನು ತಜ್ಞ ಸಮಿತಿಗಳ ವರದಿಗಳನ್ನು ಆಧರಿಸಿ, ಸರ್ಕಾರ ಶಾಲಾಕಾಲೇಜುಗಳಿಗೆ ಅನುದಾನವನ್ನು ಹಿಗ್ಗಿಸ ಬಹುದು, ಇಲ್ಲವೆ ಕುಗ್ಗಿಸಬಹುದು.

ಎಲ್ಲ ಮಕ್ಕಳಿಗೂ ಉತ್ತಮ ಶಿಕ್ಷಣವನ್ನು ನೀಡುವ, ನಿರಕ್ಷರಿಗಳನ್ನು ಸಾಕ್ಷರಗೊಳಿ ಸುವ, ಉಚಿತ ವಸತಿ ವಿದ್ಯಾರ್ಥಿನಿಲಯಗಳ ಮೂಲಕ ಬಡಮಕ್ಕಳಿಗೆ ಶೈಕ್ಷಣಿಕ ಸೌಲಭ್ಯಗಳನ್ನೊದಗಿಸುವ, ಪ್ರಾದೇಶಿಕ ಭೇದವಿಲ್ಲದೆ ಎಲ್ಲ ದರ್ಜೆಗಳಲ್ಲಿಯೂ ಶೈಕ್ಷಣಿಕ ವಾತಾವರಣವನ್ನು ಸೃಷ್ಟಿಸುವ ಕಾರ್ಯಕ್ರಮಗಳನ್ನು ರೂಪಿಸಿ, ಪಕ್ಷೀಯ ಪೂರ್ವ ಗ್ರಹವನ್ನು ತೊರೆದು, ಬಹುತ್ವ ಪ್ರಧಾನವಾದ ರಾಷ್ಟ್ರದ ಎಲ್ಲ ಜನರಲ್ಲಿ ಭಾವೈಕ್ಯವನ್ನು ಮೂಡಿಸಲು ವಿವೇಕವುಳ್ಳ ಸರ್ಕಾರ ಯೋಚಿಸಬೇಕು. ಹಿಂದುತ್ವವೊಂದು ಜೀವನ ಮಾರ್ಗವೆಂಬ ತೀರ್ಪು ವಿಚಾರಣೀಯ. ಅಂಥ ತೀರ್ಪನ್ನು ನೀಡಿದ ನ್ಯಾಯಮೂರ್ತಿ ಗಳೇನು ಸರ್ವಜ್ಞರಲ್ಲ. ಅದೊಂದು ಜೀವನ ಮಾರ್ಗವೆನ್ನುವುದಾದರೆ ಅದು ಶೂದ್ರರಿಗೆ ಹಾಗೂ ಅಂತ್ಯಜರಿಗೆ ಅನ್ವಯವಾಗುತ್ತದೆಯೇ ? ಈ ಬಗ್ಗೆ ಚರ್ಚೆ ನಡೆಯಬೇಕಾಗಿದೆ. ಸದ್ಯಕ್ಕೆ ಸರ್ಕಾರ ವಿದ್ಯಾಮಟ್ಟವನ್ನು ಹೆಚ್ಚಿಸುವಲ್ಲಿ, ಮಾನವಶಕ್ತಿ ವಿಕಸನದ ಕಡೆಗೆ ಪ್ರಾಮಾಣಿಕ ಗಮನಹರಿಸಿದರೆ ಸಾಕು. ದೇಶದ ಸುಭದ್ರತೆಗೆ ಸರ್ವಶಿಕ್ಷಣ ಮತ್ತು ಆರೋಗ್ಯಪಾಲನೆ ಮೂಲವೆಂಬ ವಿಚಾರವನ್ನು ನೊಬೆಲ್ ಪ್ರಶಸ್ತಿ ವಿಜೇತ ಅಮರ್ತ್ಯಸೇನ್‌ರಿಂದ ರಾಜಕಾರಣಿಗಳು ಮತ್ತು ಶಿಕ್ಷಣ ತಜ್ಞರು ಕಲಿಯಬೇಕಾಗಿದೆ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮೃತ್ಯು ನೃತ್ಯ

ಕಳೆದ ಮೂರು ತಿಂಗಳಿಂದೀಚೆಗೆ (೧೯೬೮ ರ ಆಗಸ್ಟ್ ತಿಂಗಳಿಂದ) ಕನ್ನಡ ಭಾಷಾ ಸಾಹಿತ್ಯಗಳನ್ನು ಅಪೂರ್ವ ರೀತಿಯಲ್ಲಿ ಬೆಳೆಸಿದ, ಕರ್ನಾಟಕದಲ್ಲಿ ಬಹು ಜನ ಪ್ರಿಯರಾಗಿದ್ದ ಏಳು ಮಂದಿ ಶ್ರೇಷ್ಠ ಸಾಹಿತಿಗಳು ನಿಧನರಾದದ್ದು ನಾಡಿನ ದುರ್ದೈವ. ಬೆಸಗರಹಳ್ಳಿ ರಾಮಣ್ಣನವರು ಕಥಾಕ್ಷೇತ್ರಕ್ಕೆ, ಡಿ. ಆರ್. ನಾಗರಾಜರು ವಿಮರ್ಶಾ ಕ್ಷೇತ್ರಕ್ಕೆ, ತ. ಸು. ಶಾಮರಾಯರು ವಿದ್ವತ್ ಕ್ಷೇತ್ರಕ್ಕೆ, ಪುತಿನ ಅವರು ಕಾವ್ಯಕ್ಷೇತ್ರಕ್ಕೆ, ಚದುರಂಗ, ಸತ್ಯಕಾಮರು ಕಾದಂಬರಿ ಕ್ಷೇತ್ರಕ್ಕೆ ಮತ್ತು ಹಿರೇಮಠರು ಸಂಶೋಧನಾ ಕ್ಷೇತ್ರಕ್ಕೆ ನೀಡಿರುವ ವಿಶಿಷ್ಟ ಕಾಣಿಕೆಯನ್ನು ಕನ್ನಡಿಗರು ಸದಾ ನೆನೆಯುತ್ತಾರೆ. ಸದ್ಯದಲ್ಲಿ ನಿನ್ನೆಮೊನ್ನೆ ತಾನೆ ಇಹಲೋಕದಿಂದ ಕಣ್ಮರೆಯಾದ ಮೂವರು ಸಾಹಿತಿಗಳನ್ನು ಕುರಿತು ಕೆಲವೇ ಕೆಲವು ಸಂಗತಿಗಳನ್ನು ಪ್ರಸ್ತಾಪಿಸಬಹುದಾಗಿದೆ.

೧. **ಚದುರಂಗರ** ಜನ್ಮನಾಮ ಸುಬ್ರಹ್ಮಣ್ಯರಾಜೇಅರಸು; ಕಲ್ಲಹಳ್ಳಿಯ ಮಂಗರಸರ ಮನೆತನಕ್ಕೆ ಸೇರಿದವರು. ಅವರಣ್ಣ ಸರ್ದಾರ್ ಬಸವರಾಜೇ ಅರಸು ಮೈಸೂರು ರಾಜರ ಮನೆತನದ ಅಳಿಯಂದಿರು. ಚದುರಂಗ ಎಂಬುದು ಕುಲನಾಮವೂ ಹೌದು, ಸಾಹಿತ್ಯ ನಾಮವೂ ಹೌದು. ಅವರ ಪೂರ್ವಿಕರೊಬ್ಬರು ಚದುರಂಗದಾಟದಲ್ಲಿ ಖ್ಯಾತಿವಂತರಾಗಿದ್ದರಂತೆ. ಅವರಿಂದಾಗಿ ಆ ವಂಶೀಕರಿಗೆ ಆ ಹೆಸರು ಬಂತು. ಆ ಹೆಸರೀಗ ಕೇವಲ ಸಾಹಿತ್ಯಲೋಕದ ಆಸ್ತಿಯಾಗಿ, ಕೀರ್ತಿಯಾಗಿ ಉಳಿದಿದೆ.

ರಾಜವಂಶದವರೆಂದು ಹೇಳಿಕೊಳ್ಳುವಂತಿದ್ದರೂ ಚದುರಂಗರು ಶ್ರೀಮಂತರಾಗಿ ಜನಿಸಲಿಲ್ಲ. ಸಾಹಿತ್ಯಲೋಕದಲ್ಲಿ ಅಪಾರ ಶ್ರೀಮಂತರೆಂದು ಹೆಸರು ಪಡೆದಿದ್ದರೂ ಸಂಸಾರದಲ್ಲಿ ಬಡತನದ ಜಂಜಾಟವಿದ್ದೇ ಇತ್ತು. ಒಂದು ಕಡೆ ಸಾಹಿತ್ಯ ಕೃಷಿಯಿಂದಾಗಿ, ಮತ್ತೊಂದು ಕಡೆ ತ್ಯಾಗಶೀಲೆಯೂ ಕಷ್ಟಸಹಿಷ್ಣುವೂ ಆದ ಸಹಧರ್ಮಿಣಿಯ ಪ್ರೇಮ ತಪಸ್ಸಿನಿಂದಾಗಿ ಅವರ ಸಂಸಾರ ಹಾಲು ಜೇನುಗಳ ಮಧುರಮಿಲನವಾಗಿತ್ತು. ಅವರು ನಿಸರ್ಗ ಸಹಜ ಕಾದಂಬರಿಕಾರರು ನಿಜ. ಅವರ ಸಾಂಸಾರಿಕ ಜೀವನವೇ ಒಂದು ಮಹಾ ಕಾದಂಬರಿಯ ವಸ್ತುವಾಗುವಷ್ಟು ವಿಸ್ತಾರವಾಗಿದೆ, ಘನವಾಗಿದೆ. ಅಣ್ಣಂದಿರ ಸಲಹೆಯ ಮೇರೆಗೆ ವಕೀಲರಾಗುವ ಉದ್ದೇಶದಿಂದ ಪೂನಾಕ್ಕೆ ಹೋಗುತ್ತಾರೆ. ಒಂದು ವರ್ಷದ ವ್ಯಾಸಂಗ ಮುಗಿಯುತ್ತಿದ್ದಂತೆ, ಕನ್ನಡ ಸರಸ್ವತಿ ತನ್ನ ಸೇವೆಗೆಂದೇ ಅವರನ್ನು ಬಳಸಿಕೊಳ್ಳುವ ಸಲುವಾಗಿ, ಅವರನ್ನು ಪೂನಾದಿಂದ ಪಾರುಮಾಡುತ್ತಾಳೆ. ತಮಗಿಷ್ಟವಿಲ್ಲದ ಮದುವೆಯಿಂದ ಆತ್ಮಹತ್ಯೆಗೂ ಸಿದ್ಧವಾಗಿದ್ದ ದೊಡ್ಡಮ್ಮಣ್ಣಿಯವರ ಪ್ರೀತಿ ಅವರನ್ನು ತಾಯ್ನೆಲದಲ್ಲಿ ಬಂಧಿಸುತ್ತದೆ. ಹೊಗೆಸೊಪ್ಪು ಬೆಳೆದು, ಕೈಗೆ ಕಾಸು ಬಂದಾಗ, ದೊಡ್ಡಮ್ಮಣ್ಣಿಯವರೊಡನೆ ಮದ್ರಾಸಿಗೆ ಹೋಗಿ, ಸಂಪ್ರದಾಯವಿರುದ್ಧವಾಗಿ, ನೋಂದಣಿಯ ಮೂಲಕ ಮದುವೆ ಮಾಡಿಕೊಂಡ ಧೈರ್ಯ ಅವರದು. ಪುರೋಹಿತ ಸಂಸ್ಕೃತಿಗೆ ವಿರುದ್ಧವಾಗಿ ನಡೆದ ಆ ಮದುವೆಯಿಂದಾಗಿ ಚದುರಂಗರ ಸಂಸಾರಕ್ಕೆ

ಯಾವ ಮುಟ್ಟು ಚಿಟ್ಟೂ ತಗುಲಲಿಲ್ಲನೆಂಬುದನ್ನು ಸಂಪ್ರದಾಯಮೂರ್ಖರು ಅರಿಯಬೇಕಾಗಿದೆ.

ಚದುರಂಗರನ್ನೂ ಅವರ ಕುಟುಂಬವನ್ನೂ ನಾನು ಮೊದಲು ಕಂಡದ್ದು ೧೯೫೮ ರಲ್ಲಿ. ನಾನಾಗ ವಿಶ್ವವಿದ್ಯಾನಿಲಯದ ಪರೀಕ್ಷಾಧಿಕಾರಿಯಾಗಿದ್ದೆ. ಅವರು ತಮ್ಮ ಪತ್ನೀಪುತ್ರರನ್ನು ಕರೆದುಕೊಂಡು ನನ್ನ ಕಚೇರಿಗೆ ಆಗಾಗ್ಗೆ ಬರುತ್ತಿದ್ದರು. ವಿಕ್ರಮ ಎರಡು ಮೂರು ವರ್ಷದವನಿರಬಹುದು. ಕುರ್ಚಿಯಲ್ಲಿ ಕೂತರೆ ಸುತ್ತಮುತ್ತಣ ಸಂಗತಿಗಳು ಕಾಣುತ್ತಿರಲಿಲ್ಲವಾದ್ದರಿಂದ ಅವನು ಮೇಜಿನ ಮೇಲೆಯೇ ಕೂರಬೇಕು. ಕುಡಿತ ಸೇದಿಕೆ ಮೊದಲಾದ ಯಾವ ಚಟಗಳೂ ಇಲ್ಲದ ಚದುರಂಗರಂಥ ಸಾಹಿತಿಯ ತಾಪತ್ರಯಗಳನ್ನು ಪ್ರತ್ಯಕ್ಷವಾಗಿ ಕಂಡಾಗ ನನಗೆ ತುಂಬ ವ್ಯಸನವಾಗುತ್ತಿತ್ತು. ಆದರೆ ಅವರು ತಮ್ಮ ಕಷ್ಟ ಕಾರ್ಪಣ್ಯಗಳನ್ನು ಯಾರೊಡನೆಯೂ ಮನಬಿಚ್ಚಿ ಹೇಳಿಕೊಳ್ಳುತ್ತಿರಲಿಲ್ಲ.

ಕೆಲವು ದಿನಗಳ ನಂತರ ಅವರು ತಮ್ಮ ಸಂಸಾರವನ್ನು ಕಲ್ಲಹಳ್ಳಿಯಿಂದ ಮೈಸೂರಿಗೆ ವರ್ಗಾಯಿಸುತ್ತಾರೆ. ಕೃಷ್ಣರಾಜಸಾಗರ ಮಾರ್ಗದಲ್ಲಿದ್ದ ತಮ್ಮ ಅಣ್ಣಂದಿರ ಚದುರಂಗಭವನದಲ್ಲಿ ಸಂಸಾರ ಹೂಡುತ್ತಾರೆ. ಅನಂತರ ಒಂಟಿಕೊಪ್ಪಲಿನ ಎಂಟನೆಯ ಅಡ್ಡರಸ್ತೆಯಲ್ಲಿ ಅಣ್ಣಂದಿರ ನೆರವಿನಿಂದಾಗಿ ಒಂದು ಮನೆಯನ್ನು ಕೊಳ್ಳುತ್ತಾರೆ. ನಮ್ಮ ಮನೆ ೯ ನೆಯ ಅಡ್ಡರಸ್ತೆಯಲ್ಲಿತ್ತು. ನಮ್ಮ ಮತ್ತು ಅವರ ಕುಟುಂಬಗಳು ಹೆಚ್ಚು ಕಡಿಮೆ ಪ್ರತಿದಿನವೂ ಸಂಜೆ ನಮ್ಮ ಅಥವಾ ಅವರ ಮನೆಯಲ್ಲಿ ಸೇರುತ್ತಿದ್ದುವು. ಆಕಾಶದ ಕೆಳಗಿನ ಎಲ್ಲ ಸಂಗತಿಗಳು ನಮ್ಮ ಚರ್ಚೆಯ ವಸ್ತುವಾಗುತ್ತಿದ್ದುವು. ವ್ಯಕ್ತಿಗಳ ವಿಚಾರವೂ ಚರ್ಚೆಯಲ್ಲಿ ನುಸುಳುತ್ತಿತ್ತು. ದುರ್ಜನರ ಅವಗುಣವನ್ನು ಸಹ ಅವರು ಟೀಕಿಸುತ್ತಿರಲಿಲ್ಲ. ಲೋಕಜೀವನವೇ ಸಂಕೀರ್ಣ. ಕಾಡಿನಲ್ಲಿ ಕುರಿ ಕೋಣ ಜಿಂಕೆಗಳಿಗವಕಾಶವಿರುವಂತೆ ಹುಲಿ ಸಿಂಹ ಕಿರುಬಗಳಿಗೂ ಅವಕಾಶವಿದೆ, ಎಂದು ತೇಲಿಸಿ ನಗುತ್ತಿದ್ದರು. ದೌಷ್ಟ್ಯವನ್ನು ದೌಷ್ಟ್ಯವೆಂದು ಹೇಳುವಷ್ಟು ಗಟ್ಟಿತನ ಅವರಲ್ಲಿರಲಿಲ್ಲ. ದೌರ್ಬಲ್ಯವೆನ್ನುವಷ್ಟರ ಮಟ್ಟಿಗೆ ಅವರು ಸಾತ್ವಿಕರೆ ಹೊರತು ಕ್ಷಾತ್ರಗುಣ ಅವರಲ್ಲಿರಲಿಲ್ಲ. ಸ್ನೇಹಗುಣ ದಾಕ್ಷಿಣ್ಯಪ್ರವೃತ್ತಿ ಅವರ ಸ್ವಭಾವದ ಅಣಿಭಾಗ.

ಸರ್ಕಾರದ ಪಿಂಚಣಿ ಬಂದರೂ, ಸರಳ ಜೀವನ ನಡೆಸಿದರೂ, ಸಂಸಾರಯಾಪನೆ ಕಷ್ಟವಾಗುತ್ತಿತ್ತು. ಜೀವವಿಮಾ ಏಜೆಂಟರಾಗಿ ಅಲೆದಾಡಿದ್ದೂ ಉಂಟು. ಸರ್ವಮಂಗಳ ಉಯ್ಯಾಲೆ ರಜತಪರದೆಯನ್ನು ಕಂಡಾಗ ಅಷ್ಟೋ ಇಷ್ಟೋ ಹಣ ಕೈಗೆ ಬಂತು. ಚಾಲಕನನ್ನಿಟ್ಟುಕೊಂಡು ಟ್ಯಾಕ್ಸಿ ಉದ್ಯಮ ನಡೆಸಿದರು. ಎರಡು ವರ್ಷಗಳ ನಂತರ ಅದಕ್ಕೆ ಅಪಘಾತವೊದಗಿದಾಗ ಆ ದಂಧೆಯನ್ನು ತೊರೆದರು. ಕೆಲವೊಮ್ಮೆ ಅವರ ಕತೆ ಕಾದಂಬರಿಗಳು ಶಾಲಾ ಕಾಲೇಜುಗಳಲ್ಲಿ ಪಠ್ಯಗಳಾದಾಗ, ಪ್ರಕಾಶಕರ ಹೊಟ್ಟೆಬಾಕತನದಿಂದಾಗಿ ನ್ಯಾಯವಾಗಿ ಗ್ರಂಥಕರ್ತನಿಗೆ ಸಲ್ಲಬೇಕಾದ ರಾಯಧನ ಅವರಿಗೆ ಸಲ್ಲು

ತ್ತಿರಲಿಲ್ಲ. ಆದರೆ ಅವರು ಎಲ್ಲಿಯೂ ಯಾವಾಗಲೂ ಆ ಬಗ್ಗೆ ಬಾಯಿ ಬಿಡುತ್ತಿರಲಿಲ್ಲ. ಲೇಖನವನ್ನೆ ವೃತ್ತಿಯಾಗಿ ಆಶ್ರಯಿಸಿದ ಸಾಹಿತಿಗಳ ಜೀವನ ಯಾಪನೆಗಾಗಿ ಸರ್ಕಾರ ಅಥವಾ ಸಮಾಜ ಸೂಕ್ತ ವ್ಯವಸ್ಥೆ ಮಾಡಬೇಕಾದ್ದು ಧರ್ಮ.

ಚದುರಂಗರು ಹೆಚ್ಚು ಬರೆಯಲಿಲ್ಲ ; ಬರೆದ ನಾಲ್ಕು ಕಾದಂಬರಿಗಳನ್ನು ಮತ್ತು ನಾಲ್ಕೈದು ಕಥಾ ಸಂಕಲನಗಳನ್ನು ಕನ್ನಡದ ಜನರು, ವಿಮರ್ಶಕರು ಮತ್ತು ಸಾಹಿತಿಗಳು ಹೃತ್ಪೂರ್ವಕವಾಗಿ ಮೆಚ್ಚಿಕೊಂಡಿದ್ದಾರೆ. ತಾವು ನಿರ್ದಿಷ್ಟ ಪಂಥಕ್ಕೆ ಸೇರಿದವರೆಂದು ಹಣೆಪಟ್ಟಿ ಅಂಟಿಸಿಕೊಳ್ಳಲಿಲ್ಲ ; ನವೋದಯ, ನವ್ಯ, ಪ್ರಗತಿಶೀಲ ಮತ್ತು ಬಂಡಾಯ ಪಂಥಗಳಲ್ಲಿ ಅವರು ಏಕರೀತಿಯ ಗೌರವಾದರಗಳನ್ನು ಪಡೆದುಕೊಂಡಿದ್ದಾರೆ. ಸಾತ್ವಿಕತೆ, ಸ್ನೇಹಪರತೆ, ದಾಕ್ಷಿಣ್ಯ ಪ್ರವೃತ್ತಿ ಮತ್ತು ರಾಜೀ ಮನೋಭಾವದಿಂದಾಗಿ, ಜತೆಗೆ ಹಳ್ಳಿಯ ಜೀವನವನ್ನು ಯಥಾವತ್ತಾಗಿ ಚಿತ್ರಿಸುವ ಕಲೆಗಾರಿಕೆಯಿಂದಾಗಿ ಅವರು ನಾಡಿನ ವಿಶಿಷ್ಟ ವ್ಯಕ್ತಿಯಾಗಿದ್ದಾರೆ ; ಚದುರಂಗರಿಗೆ ಚದುರಂಗರೇ ಹೋಲಿಕೆ.

೨. ತಲಾ ಒಬ್ಬೊಬ್ಬರು ಸಾಹಿತಿಯನ್ನು ನೀಡಿದ ಶ್ರೇಯಸ್ಸು ಕಲ್ಲಹಳ್ಳಿ ಎಂಬ ಹೆಸರಿನ ಎರಡು ಊರುಗಳಿಗೆ ಒದಗಿದೆ. ಒಂದು, ಮೈಸೂರು ಜಿಲ್ಲೆಯಲ್ಲೂ, ಮತ್ತೊಂದು ಬಿಜಾಪುರ ಜಿಲ್ಲೆಯಲ್ಲೂ ಇವೆ. ಮೈಸೂರು ಕಲ್ಲಹಳ್ಳಿ, ಚದುರಂಗರಿಗೆ ಜನ್ಮವಿತ್ತ ಊರಾದರೆ, ಬಿಜಾಪುರ–ಕಲ್ಲಹಳ್ಳಿ **ಸತ್ಯಕಾಮರನ್ನು** ಪೋಷಿಸಿದ ಊರು. ೧೯೨೦ರಲ್ಲಿ ಗಲಗಲಿಯಲ್ಲಿ ಜನಿಸಿದ ಅನಂತಕೃಷ್ಣ ಶಹಾಪೂರರಿಗೆ ಆಕಸ್ಮಿಕ ಸನ್ನಿವೇಶದಲ್ಲಿ ಬಂದ ಸತ್ಯಕಾಮ ಎಂಬ ಹೆಸರು ಅವರ ಮನೋಧರ್ಮವನ್ನು ಪ್ರತಿಬಿಂಬಿಸುತ್ತದಲ್ಲದೆ, ಅವರ ಸಾಹಸ ಜೀವನ ಸಿದ್ಧಿಗಳಿಗೆ ಸಂಕೇತವಾಗಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ ಅವರು ಜೈಲುವಾಸವನ್ನನುಭವಿಸುತ್ತಾರೆ. ಬಯಲು ಹೋರಾಟಕ್ಕಿಂತ ಭೂಗತ ಚಟುವಟಿಕೆಗಳ ಮೂಲಕ ಶೀಘ್ರವಾಗಿ ಸ್ವಾತಂತ್ರ್ಯ ಸಂಪಾದಿಸಬಹುದೆಂಬ ಅವರ ಛಲ ಅವರನ್ನು ಉಡುಪಿಗೆ ಕೊಂಡೊಯ್ಯುತ್ತದೆ. ನಾಲ್ಕೈದು ವರ್ಷ ಅಲ್ಲಿದ್ದು ಅನಂತಪದ್ಮನಾಭ ಎಂಬ ಹೆಸರಿಟ್ಟುಕೊಂಡು, ಸಂಸ್ಕೃತವನ್ನು ಕಲಿಯುತ್ತಾರೆ ; ಆಗಮ ಪುರಾಣ ತಂತ್ರಶಾಸ್ತ್ರಗಳಲ್ಲಿ ಪರಿಣತಿ ಸಂಪಾದಿಸುತ್ತಾರೆ ; ಸತ್ಯಕಾಮ ಎಂಬ ಹೆಸರಿನಲ್ಲಿ ಲೇಖನಿ ಹಿಡಿಯುತ್ತಾರೆ ; ತಂತ್ರಶಾಸ್ತ್ರದ ಅನೇಕ ನಿಗೂಢಗಳನ್ನು ಶೋಧಿಸಿ, ಅವುಗಳ ಹಿಂದಿರುವ ಸತ್ಯಗಳನ್ನು ಅಭಿವ್ಯಕ್ತಗೊಳಿಸುತ್ತಾರೆ.

ಅವರು ಮಾನವ ನಿರ್ಮಿಸಿದ ಶಾಲೆಯಲ್ಲಿ ಓದಿದ್ದು ಅತ್ಯಲ್ಪ ; ಏಳನೆಯ ಇಯತ್ತೆಯಿಂದ ಮುಂದಕ್ಕೆ ಏಗಲೇ ಇಲ್ಲ. ಅವರ ಜ್ಞಾನವೆಲ್ಲ ವಿಶೇಷವಾಗಿ ಲೋಕದ ಶಾಲೆಯಲ್ಲಿ ಅನುಭವದ ಮೂಲಕ ಬಂದದ್ದು. ಯಾವ ಕನ್ನಡ ಸಾಹಿತಿಯೂ ಗಮನ ಹರಿಸದ, ಕೈಹಾಕದ ಪುರಾಣ ತಂತ್ರ ಶಾಸ್ತ್ರಗಳಿಂದ ವಸ್ತುವನ್ನಾರಿಸಿಕೊಂಡು, ಸಾಂಪ್ರತ ಯುಗ ಧರ್ಮಕ್ಕನುಗುಣವಾಗಿ ವಿಶ್ಲೇಷಿಸಿ, ವೈಜ್ಞಾನಿಕ ವೈಚಾರಿಕ ಸಂಗತಿಗಳೊಡನೆ ಸಮನ್ವಯ-

ಗೊಳಿಸಿ, ಐವತ್ತಕ್ಕೂ ಹೆಚ್ಚು ಕಥೆ ಕಾದಂಬರಿ ಪ್ರಬಂಧಗಳನ್ನು ರಚಿಸಿ, ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮವನ್ನು ಜೋಡಿಸಿದ ಕೀರ್ತಿ ಸತ್ಯಕಾಮರಿಗೆ ಸಲ್ಲತಕ್ಕದ್ದು. ಶಾಕ್ತಪಂಥ ಮತ್ತು ಶಕ್ತಿಪೂಜೆ ಅವರು ಒಪ್ಪಿಕೊಂಡ ಧರ್ಮವಾದ್ದರಿಂದಲೇ ಅವರ ಸಾಹಿತ್ಯ ಮಾರ್ಗ ಸವೆದ ಜಾಡಿನಿಂದ ದೂರ ಸರಿಯುತ್ತದೆ. ಉತ್ತರಾಯಣ, ಚಕ್ರಾಯಣ, ಆಹುತಿ, ಬೆಂಕಿಯ ಮಗಳು, ಮನ್ವಂತರ, ಒಡೆದ ಕನ್ನಡಿ ಇವೇ ಮೊದಲಾದುವುಗಳಲ್ಲಿ ತಂತ್ರಶಾಸ್ತ್ರ ವಾಮಾಚಾರ ಕೂಟ ತಂತ್ರಗಳಿಗೆ ಸಂಬಂಧಿಸಿದ ವಿಷಯಗಳು ಉಲ್ಲೇಖಗೊಳ್ಳುತ್ತವೆ; ಅವು ಅಗ್ರಾಹ್ಯ ಸಂಗತಿಗಳಲ್ಲ, ಅಧ್ಯಾತ್ಮ ಸಾಧನೆಗೆ ನೆರವಾಗುವಂಥ ಪಥ್ಯಗಳೆಂದು ಅವರು ತೋರಿಸಿದ್ದಾರೆ;

ಸತ್ಯಕಾಮರ ಸಾಧನೆ ಬಹುಮುಖವಾದುದು. ಅವರ ಸಾಮರ್ಥ್ಯ ಹಲವು ದಿಕ್ಕುಗಳಲ್ಲಿ ಹಂಚಿಹೋಗಿದೆ. ಸ್ವಾತಂತ್ರ್ಯ ಚಳುವಳಿ, ಪತ್ರಿಕೋದ್ಯಮ, ಭೂಕೃಷಿ ಹಾಗೂ ಸಾಹಿತ್ಯಕೃಷಿ ಅವುಗಳಲ್ಲಿ ಮುಖ್ಯವಾದುವು. ಎಲ್ಲ ದೃಷ್ಟಿಗಳಿಂದ ಅವರದು ತುಂಬು ಬದುಕು ; ಆ ತುಂಬು ಬದುಕಿನಿಂದಾಗಿ ಕನ್ನಡ ಸಾಹಿತ್ಯವೂ ತುಂಬಿದೆ ; ಅವರ ಬದುಕಿಗೆ ಸಾರ್ಥಕತೆಯನ್ನೂ ಒದಗಿಸಿವೆ.

೩. ಸಾಹಿತ್ಯಲೋಕದ ದೃಷ್ಟಿಯಿಂದ ೧೯೯೮ನೆಯ ಸಂವತ್ಸರ ದುರಂತ ವರ್ಷವಾಗಿದೆ. ನೈಸರ್ಗಿಕಪ್ರಕೋಪದಪರಿಣಾಮವೋ ಎನ್ನುವಂತೆ, ಜವರಾಯನ ಕುಡುಗೋಲಿನ ರಭಸಕ್ಕೆ ಸಾಹಿತಿಗಳು ಸಾಲುಸಾಲಾಗಿ ಮಲಗಲಾಗಿ ಸಾಹಿತ್ಯ ಲೋಕಕ್ಕೆ ತುಂಬಲಾಗದ ನಷ್ಟವುಂಟಾಗಿದೆ. ಅಂಥ ಗಣ್ಯಸಾಹಿತಿಗಳಲ್ಲಿ ರುದ್ರಯ್ಯ ಚಂದ್ರಯ್ಯ ಹಿರೇಮಠರೊಬ್ಬರು. ವಿದ್ವತ್ತಿನಲ್ಲಿ ಸಂಶೋಧನೆಯಲ್ಲಿ, ಪಾಠ ಪ್ರವಚನಗಳಲ್ಲಿ ಪ್ರಪಂಚದ ಯಾವ ಮ್ಯಾಕ್ಸ್‌ಮುಲರ್ ಒಡನೆಯಾದರೂ ಹೋಲಿಸಬಹುದಾದ ಪ್ರಾಧ್ಯಾಪಕರವರು. ತಮ್ಮ ಪಾಂಡಿತ್ಯದಿಂದ, ಗ್ರಂಥ ಸಂಪಾದನೆಯಿಂದ, ವಿಮರ್ಶೆಗಳಿಂದ, ಬರಹಗಳಿಂದ ಕನ್ನಡಕ್ಕೆ ಸಮೃದ್ಧಿಯನ್ನೊದಗಿಸಿದ ಮಹಾನುಭಾವರವರು. ಪಂಪ ಹರಿಹರ ರಾಘವಾಂಕ ವಚನಕಾರರೆಂದರೆ ಅವರಿಗೆ ಪಂಚಪ್ರಾಣ. ಗಂಟೆಗಟ್ಟಳೆ ನಿರಾಯಾಸವಾಗಿ ಅವರನ್ನು ಕುರಿತು ಉಪನ್ಯಾಸಮಾಡಬಲ್ಲ ಸಾಮರ್ಥ್ಯ ಅವರದು. ಭಾಷಣಕ್ಕೆ ನಿಂತರೆಂದರೆ ಸಂಸ್ಕೃತ ಕನ್ನಡ ಕಾವ್ಯಗಳ ಉದ್ಧರಣೆಗಳು ಲೀಲಾಜಾಲವಾಗಿ ಅವರ ಬಾಯಿಂದ ಉದುರುತ್ತಿದ್ದುವು. ಭಾಷಾವಿಜ್ಞಾನದಲ್ಲಿ ಅವರಿಗೆ ಅತೀವ ಆಸಕ್ತಿ. ಕರ್ನಾಟಕದಲ್ಲಿ ಮಾತ್ರವಲ್ಲ ದಕ್ಷಿಣ ಭಾರತದಲ್ಲಿ ಭಾಷಾವಿಜ್ಞಾನಕ್ಕೆ ಗೌರವಗಳಿಸಿಕೊಟ್ಟ ಯಶಸ್ಸು ಮೀನಾಕ್ಷಿಸುಂದರಂ, ಸುಬ್ರಹ್ಮಣ್ಯಂ ಮತ್ತು ತೀನಂಶ್ರೀಗಳನಂತರ ಹಿರೇಮಠರಿಗೆ ಸಲ್ಲಬೇಕು.

ಆರ್ಸಿಯವರು ಕವಿತಾರಚನೆಯ ಮೂಲಕವೇ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸುತ್ತಾರೆ. ಅವರು ಅದೇ ನಿಟ್ಟಿನಲ್ಲಿ ಮುಂದುವರಿದಿದ್ದರೆ, ಉದ್ದಾಮ ಕವಿಯಾಗಬಹುದಿತ್ತೆಂದು ಮೌನಸ್ಪಂದನ ಮೊದಲಾದ ಅವರ ಕವಿತಾ ಸಂಕಲನಗಳನ್ನೋದಿದವರಿಗೆ ಸ್ಪಷ್ಟವಾಗುತ್ತದೆ. ಅದರೆ ಕಾವ್ಯ ಕ್ಷೇತ್ರಕ್ಕಾದ ನಷ್ಟ ಸಂಶೋಧನಾಕ್ಷೇತ್ರಕ್ಕೆ ವರವಾಗುತ್ತದೆ.

ಡಿಎಲ್ಎನ್ ಹಿರೇಮಠರಂಥವರಿಂದಾಗಿ ಸಂಶೋಧನ ಸಂಪಾದನಾ ವಿದ್ವತ್ ಕ್ಷೇತ್ರಗಳಿಗೆ ಗೌರವವೊದಗುತ್ತದೆ. ವಚನಗಳನ್ನು ಮೊತ್ತಮೊದಲು ವೈಜ್ಞಾನಿಕವಾಗಿ ಸಂಪಾದಿಸಿದ ಕೀರ್ತಿ ಅವರಿಗೆ ಸಲ್ಲಬೇಕು. ಕನ್ನಡನಾಡಿಗೆ ಅವರು ನೀಡಿದ ಮಹತ್ತರವಾದ ಮತ್ತೊಂದು ಕೊಡುಗೆ ಎಂದರೆ ಕಲಬುರ್ಗಿಯವರಂಥ ಗುರುವರ್ಗ. ಅಂಥ ಗುರುಗಳನ್ನು ಸೃಷ್ಟಿಸಿದ ಗುರು ಸಾಮಾನ್ಯರಲ್ಲ.

ಅವರು ಪ್ರಾಧ್ಯಾಪಕರಾಗಿ, ಕುಲಪತಿಯಾಗಿ, ಅಂತರರಾಷ್ಟ್ರೀಯ ದ್ರಾವಿಡಭಾಷಾ ಸಂಸ್ಥೆಯ ನಿರ್ದೇಶಕರಾಗಿ ತಮ್ಮ ಮುದ್ರೆಯನ್ನೊತ್ತಿದ್ದಾರೆ. ಅವರಿಗೆ ಅನೇಕ ಪ್ರಶಸ್ತಿ ಸನ್ಮಾನಗಳು ಬಂದಿವೆ. ಅವೆಲ್ಲವುಗಳಿಗಿಂತ ಅವರು ದೊಡ್ಡವರೆಂಬುದು ನಿಜ. ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ ಅವರನ್ನು ರಾಷ್ಟ್ರೀಯ ಪ್ರಾಧ್ಯಾಪಕರನ್ನಾಗಿಯೂ ನೇಮಿಸಿತ್ತು. ಅವರವರಲ್ಲಿದ್ದುದು ಕೆಲವು ತಿಂಗಳು ಮಾತ್ರ. ಏನು ಕಾರಣವೋ ಅವರ ದಕ್ಕೆ ರಾಜೀನಾಮೆ ನೀಡುತ್ತಾರೆ. ಪ್ರಾಯಶಃ ದ್ರಾವಿಡಭಾಷಾ ಸಂಸ್ಥೆಯ ಆಕರ್ಷಣೆಯೆ ಅದಕ್ಕೆ ಕಾರಣವಾಗಿರಬೇಕೇನೊ !

ಹಿರೇಮಠರು ಜ್ಞಾನದಾಗರವೆಂತೊ ಅಂತೆಯೇ ಶೀಲನಿಧಿಯೂ ಆಗಿದ್ದರು. ಅತಿ ಅವರ ಜಾಯಮಾನಕ್ಕೊಗ್ಗಿದ್ದಲ್ಲ. ಸುವರ್ಣಮಾಧ್ಯಮ ಮಾರ್ಗವೇ ಅವರ ಯಶಸ್ಸಿನ ಜೀವಾಳ. ಹುಟ್ಟಿನಿಂದ ಜಂಗಮರಾದರೂ, ಜಾತಿಭೇದ ಅವರ ಮಟ್ಟಿಗೆ ಸೋಂಕಾಗಿರಲಿಲ್ಲ. ನಾನೂ ಇದ್ದ ಅನೇಕ ನೇಮಕ ಸಮಿತಿಗಳಲ್ಲಿ ಅವರು ಅರ್ಹತೆಗೆ ಬೆಂಬಲ ನೀಡುತ್ತಿದ್ದರೇ ಹೊರತು ಜಾತೀಯತೆಗಲ್ಲ.ನಾನು ತಿಳಿದಂತೆ ಮಾಳವಾಡ ದಂಪತಿಗಳನ್ನು ಮತ್ತು ಕಟ್ಟೀಮನಿಯವರನ್ನು ಬಿಟ್ಟರೆ, ಉತ್ತರ ದಕ್ಷಿಣ ಕರ್ನಾಟಕಗಳ ಸ್ನೇಹ ಸೇತುವೆ ಯಂತಿದ್ದವರು, ದಕ್ಷಿಣ ಕರ್ನಾಟಕದಲ್ಲಿಯೂ ತುಂಬ ಜನಪ್ರಿಯತೆ ಗಳಿಸಿದ್ದವರು ಡಾ॥ ಹಿರೇಮಠರು. ತೀನಂಶ್ರೀಯವರ ದೃಷ್ಟಿಯಲ್ಲಿ ಅವರು ಪ್ರಾಮಾಣಿಕ ಶ್ರಮ ಸಾಧನೆಯ ವಿದ್ವಾಂಸರಾದರೆ, ಹಾಮಾನಾ ಅವರ ದೃಷ್ಟಿಯಲ್ಲಿ ಸ್ಮೃತಿಸಂಪತ್ತಿನ ಆಗರ, ಕಲಬುರ್ಗಿಯವರ ದೃಷ್ಟಿಯಲ್ಲಿ ಶ್ರೇಷ್ಠ ಪ್ರಾಧ್ಯಾಪಕ; ನನ್ನ ಪಾಲಿಗವರು ಮಾತ್ಸರ್ಯರಹಿತ ಹಿತಚಿಂತಕರು ಹಾಗೂ ಸ್ನೇಹಿತರು. ಅವರ ಹೆಸರು ಚಿರಾಯುವಾಗಲಿ !

ದೇಜಗೌ

ಭಾರತದ ಹೆಮ್ಮೆಯ ಪುತ್ರ : ಅಮರ್ತ್ಯಸೇನ್

ಸಿ. ನಾಗಣ್ಣ

ಇಂಗ್ಲಿಷ್ ಪ್ರಾಧ್ಯಾಪಕ
ಮಹಾರಾಜ ಕಾಲೇಜು
ಮೈಸೂರು

"ಇದುವರೆಗೆ ಆರು ಮಂದಿ ಭಾರತಕ್ಕೆ ನೊಬೆಲ್ ಬಹುಮಾನವನ್ನು ಗೆದ್ದುಕೊಟ್ಟಿದ್ದಾರೆ. ಅವರ ಪೈಕಿ ನಾಲ್ವರು—ರವೀಂದ್ರನಾಥ ಠಾಕೂರ್, ಸಿ. ವಿ. ರಾಮನ್, ತಾಯಿ ಥೆರೇಸಾ ಹಾಗೂ ಅಮರ್ತ್ಯಸೇನ್—ಕಲ್ಕತ್ತಾ ನಗರದ ಜೊತೆ ನಿಕಟವಾದ ಸಂಬಂಧವನ್ನು ಹೊಂದಿದವರು. ಸಾಹಿತ್ಯ, ಭೌತಶಾಸ್ತ್ರ, ಮಾನವೀಯ ಸೇವೆ, ಹಾಗೂ ಅರ್ಥಶಾಸ್ತ್ರ—ಹೀಗೆ ವಿಭಿನ್ನವಾದ ಕ್ಷೇತ್ರಗಳಲ್ಲಿ ಅತ್ಯುನ್ನತ ಮಟ್ಟದ ಬುದ್ಧಿಜೀವಿಗಳನ್ನು ತಯಾರು ಮಾಡುವ ನಿನ್ನ ರಹಸ್ಯವನ್ನು ರಾಷ್ಟ್ರದ ಉಳಿದ ನಗರಗಳ ಜೊತೆ ನೀನು ಹಂಚಿಕೊಳ್ಳಬಾರದೆ?" ಹಾಗೆಂದು ಸುದ್ದಿಪತ್ರಿಕೆಯ ಸಂಪಾದಕರಿಗೆ ಬರೆದಿರುವ ಪತ್ರದಲ್ಲಿ ಓದುಗರೊಬ್ಬರು ಕೇಳುತ್ತಾರೆ. ರಾಷ್ಟ್ರದಲ್ಲೇ ಅತ್ಯಂತ ದಟ್ಟವಾದ ಜನಸಂದಣಿಯ ನಗರವಾಗಿರುವ ಕಲ್ಕತ್ತಾ ಬಡತನ ಹಾಗೂ ಕೊಳಚೆ ಪ್ರದೇಶಗಳಿಗೂ ಕುಪ್ರಸಿದ್ಧಿಯನ್ನು ಹೊಂದಿದೆ. ಈ ಬಡತನದ ರಹಸ್ಯವನ್ನು ವಿಶ್ಲೇಷಿಸುವಂಥ ಪ್ರಖಾಂಡ ಚಿಂತಕ ಸತ್ಯಜಿತ್ ರೇ ಅಂಥವರಿಗೂ ಕಲ್ಕತ್ತಾ ಜನ್ಮಕೊಡುತ್ತದೆ. ಹಸಿವು, ರೋಗರುಜಿನಗಳಿಂದ ಬಳಲುತ್ತಿರುವವರ ಸಂಖ್ಯೆ ಹೆಚ್ಚಿದಷ್ಟೂ 'ನಿಮ್ಮ ಕ್ಷೇಮ ನನಗಿರಲಿ' ಎಂದು ಮಡಿಲಿಗೆ ಹಾಕಿಕೊಳ್ಳುವ ತಾಯಿ ಥೆರೇಸಾ ಅವರೂ ಇಲ್ಲೇ ನೆಲೆ ನಿಲ್ಲುತ್ತಾರೆ.

ಸ್ವೀಡನ್ನಿನ ಕೈಗಾರಿಕೋದ್ಯಮಿ ಹಾಗೂ ಡೈನಮೈಟ್‌ನ ಆವಿಷ್ಕಾರಕ ಆಲ್‌ಫ್ರೆಡ್ ನೊಬೆಲ್ ಐದು ನೊಬೆಲ್ ಪಾರಿತೋಷಕಗಳನ್ನು ಸ್ಥಾಪಿಸಿದ. ೧೯೦೧ರಿಂದ ಸಾಹಿತ್ಯ, ರಸಾಯನಶಾಸ್ತ್ರ, ಭೌತಶಾಸ್ತ್ರ, ಔಷಧಶಾಸ್ತ್ರ ಹಾಗೂ ಶಾಂತಿಗಾಗಿ ಪಾರಿತೋಷಕಗಳನ್ನು ಕೊಡುತ್ತಾ ಬಂದಿದ್ದಾರೆ. ಅರ್ಥಶಾಸ್ತ್ರಕ್ಕೆ ನೊಬೆಲ್ ಪ್ರಶಸ್ತಿ ಸ್ಥಾಪಿತವಾದದ್ದು ೧೯೬೮ರಲ್ಲಿ. ಇದು ಆಲ್‌ಫ್ರೆಡ್ ನೊಬೆಲ್ ಅವರ ಹೆಸರಿನಲ್ಲಿ ಸ್ವೀಡನ್ನಿನ ಸೆಂಟ್ರಲ್ ಬ್ಯಾಂಕ್ ಸ್ಥಾಪಿಸಿದ ಪ್ರಶಸ್ತಿಯಾಗಿದೆ.

ಈ ಬಾರಿ ಅರ್ಥಶಾಸ್ತ್ರಕ್ಕಾಗಿ ನೊಬೆಲ್ ಪ್ರಶಸ್ತಿ ಗಳಿಸಿರುವ ೬೪ ವಸಂತಗಳ ಅಮರ್ತ್ಯಸೇನ್ "ಬಡತನ ಹಾಗೂ ಕ್ಷಾಮವನ್ನು ಕುರಿತು ನಡೆಸಿರುವ ಚಿಂತನೆಗಾಗಿ. ಒಂದರ್ಥದಲ್ಲಿ ಅಮರ್ತ್ಯಸೇನ್ ಹುಟ್ಟಿನಿಂದಲೇ ಪುಣ್ಯವಂತ. ೧೯೩೩ರ ಮೇ ೩ನೇ ತಾರೀಖು ಶಾಂತಿನಿಕೇತನದಲ್ಲಿ ಹುಟ್ಟಿದ ಅಮರ್ತ್ಯ

ಸೇನ್‌ರನ್ನು ಗುರುದೇವ ರವೀಂದ್ರನಾಥ ಠಾಕೂರರು ಆಶೀರ್ವದಿಸಿದರು. ಮಗುವಿನ ಕಳೆಯನ್ನು ಕಂಡು ಕೂಡಲೇ ಅವನಿಗೆ ಅಮರ್ತ್ಯನೆಂದು ನಾಮಕರಣ ಮಾಡಿದರು. ಆದರೆ ಆಕ್ಷಣದಲ್ಲಿ ಈ ಮಗು ಒಂದು ದಿನ ತಮ್ಮಂತೆಯೇ ನೊಬೆಲ್ ಬಹುಮಾನ ಗೆಲ್ಲುವುದೆಂದು ಠಾಕೂರರಿಗೆ ಅನ್ನಿಸಿರಲಾರದು. ಠಾಕೂರರು ೧೯೧೩ರಲ್ಲಿ ಸಾಹಿತ್ಯಕ್ಕಾಗಿ ಬಹುಮಾನ ಗೆದ್ದರೆ ೮೫ ವರ್ಷಗಳ ತರುವಾಯ ಅಮರ್ತ್ಯಸೇನ್ ಅರ್ಥಶಾಸ್ತ್ರಕ್ಕಾಗಿ ಆ ಪಾರಿತೋಷಕವನ್ನು ತಮ್ಮದಾಗಿಸಿಕೊಂಡಿದ್ದಾರೆ. ಹೊಳೆಯುವ ಧೃವತಾರೆಯೊಂದು ಕ್ಷಿತಿಜದಲ್ಲಿ ಕಣ್ಣೊಡೆಯುತ್ತಿದ್ದ ಇನ್ನೊಂದು ನಕ್ಷತ್ರವನ್ನು ಸಂದಿಸಿತು—ಈ ಮಿಲನದಿಂದ ಇತಿಹಾಸ ಸೃಷ್ಟಿಯಾಗುವುದೆಂದು ಆಗ ಯಾರು ಮನಗಂಡಿದ್ದರು?

ಬಹುಮಾನದ ಸುದ್ದಿ ತಿಳಿದು ಅಮರ್ತ್ಯಸೇನ್ ಶಾಂತಿನಿಕೇತನದಲ್ಲಿದ್ದ ತಮ್ಮ ತಾಯಿ ೮೭ ವರ್ಷದ ಅಮಿತಾ ಸೇನ್ ಅವರಿಗೆ ದೂರವಾಣಿ ಮೂಲಕ ತಿಳಿಸಿದಾಗ "ನಾನಿದನ್ನು ನಂಬೋದಿಲ್ಲ; ಬಿಲ್‌ಕುಲ್ ನಾನು ನಿನ್ನನ್ನು ನಂಬೋದಿಲ್ಲ" ಎಂದುಬಿಟ್ಟರು. ಆ ತುದಿಯಿಂದ ವಿನಮ್ರತೆಯೇ ಮೂರ್ತಿವೆತ್ತಂತೆ ಮಗ ಮತ್ತೆ ಮನದಟ್ಟು ಮಾಡಲು ಹೋಗಿದರು: "ಅಮ್ಮಾ ನೀನು ನನ್ನನ್ನ ನಂಬಬೇಕು; ಈ ವರ್ಷದ ಪಾರಿತೋಷಕ್ಕೆ ನನ್ನನ್ನ ಆಯ್ಕೆ ಮಾಡಿದ್ದಾರೆ." ಅಪರಾಹ್ನ ಸಂಜೆಯಾಗಿ ಮಾಗುವಾಗ ದೇಶ ವಿದೇಶಗಳಿಂದ ಶುಭಾಶಯದ ಕರೆಗಳು ಬರತೊಡಗಿದವು; ಮಗನ ಸಾಧನೆಯ ಬಗ್ಗೆ ಏನನ್ನಿಸುತ್ತದೆ ಎಂದು ಎಲ್ಲರೂ ಕೇಳತೊಡಗಿದರು. "ಆ ದಿನ ಮಧ್ಯಾಹ್ನ ದೂರವಾಣಿಯಲ್ಲಿ ತಿಳಿಸಿದ್ದದ್ದು ಜನರ ದೂರವಾಣಿ ಕರೆಯಿಂದ ನಿಜವೆಂದು ಖಾತ್ರಿಯಾಯಿತು. ನನ್ನ ಮಗ ಹುಟ್ಟಿದ ಕೂಡಲೇ ಗುರುದೇವ್ ರವೀಂದ್ರನಾಥ ಠಾಕೂರರು ಆಶೀರ್ವದಿಸಿದ್ದು ನೆನಪಾಗುತ್ತೆ.

ಅಮರ್ತ್ಯಸೇನ್ ಠಾಕೂರರು ಹಾಗೂ ಶಾಂತಿನಿಕೇತನದ ನಿಕಟವಲಯದಲ್ಲಿ ಬೆಳೆದಿದ್ದ ಕ್ಷಿತಿಮೋಹನ್ ಸೇನ್‌ರ ಮೊಮ್ಮಗ. ಈ ಹಿನ್ನೆಲೆಯಿರುವುದರಿಂದ ಕ್ಷಾಮ ಹಾಗೂ ಲಿಂಗಾಧಾರಿತ ತಾರತಮ್ಯಗಳನ್ನು ಕುರಿತು ಸೇನ್ ಮುಂದೆ ಚಿಂತನೆ ನಡೆಸಿದುದು ಸಹಜ ಬೆಳವಣಿಗೆಯಾಗಿದೆ. ಶಾಂತಿನಿಕೇತನದ ಗಾಳಿಗಂಧ ಕುಡಿದು ಬೆಳೆದ ಸೇನ್ ಈವತ್ತಿಗೂ ಶಾಂತಿನಿಕೇತನದ ಸರಹದ್ದಿನಲ್ಲಿ ತಿರುಗಾಡುವಾಗ ತಮ್ಮ ೪೩ ವರ್ಷದಷ್ಟು ಹಳೆಯದಾದ ಸೈಕಲ್ ಏರುತ್ತಾರೆ. ಸ್ಥಳೀಯ ಸ್ನೇಹಿತರೊಡನೆ ಬೆರೆತು ಹರಟೆ ಕೊಚ್ಚುವುದೆಂದರೆ ಅವರಿಗೆ ಎಲ್ಲಿಲ್ಲದ ಪ್ರೀತಿ.

ಪ್ರೊ|| ಸೇನ್ ೧೯೫೩ರಲ್ಲಿ ಕಲ್ಕತ್ತೆಯ ಪ್ರೆಸಿಡೆನ್ಸಿ ಕಾಲೇಜಿನಿಂದ ಅರ್ಥಶಾಸ್ತ್ರ ವಿಷಯದಲ್ಲಿ ಪದವೀಧರರಾದರು; ೧೯೫೫ರಲ್ಲಿ ಸ್ನಾತಕೋತ್ತರ ಅಧ್ಯಯನಕ್ಕಾಗಿ ಲಂಡನ್‌ನ ಟ್ರಿನಿಟಿ ಕಾಲೇಜಿಗೆ ಸೇರಿದರು. ಮರುವರ್ಷ ಅರ್ಥಶಾಸ್ತ್ರವನ್ನು ಬೋಧಿಸಲು ಜಾದವ್‌ಪುರ ವಿಶ್ವವಿದ್ಯಾನಿಲಯಕ್ಕೆ ಬಂದರು; ಆದರೆ ೧೯೫೮ರಲ್ಲಿ ಮತ್ತೆ ಅಧ್ಯಾಪನಕ್ಕಾಗಿ ಟ್ರಿನಿಟಿ ಕಾಲೇಜಿಗೇ ವಾಪಸ್ಸಾದರು. ಅವರೆ ಕೇಂಬ್ರಿಜ್‌ಗೆ ಪ್ರಯಾಣ ಬೆಳೆಸುವ ಮೊದಲು ೧೯೬೩ರಿಂದ ಸುಮಾರು ಎಂಟು ವರ್ಷಗಳ ಕಾಲ 'ದೆಹಲಿ ಸ್ಕೂಲ್ ಆಫ್ ಎಕನಾಮಿಕ್ಸ್'ನಲ್ಲಿ ಬೋಧಕರಾಗಿ ಸೇವೆಸಲ್ಲಿಸಿದರು. "ಆರಂಭ

ದಲ್ಲಿ ಸೇನ್ ಉತ್ಪಾದನಾ ತಂತ್ರಗಳ ಮೇಲೆ ಹೆಚ್ಚುಗಮನ ಕೇಂದ್ರೀಕರಿಸಿದರು ; ಇದೂ ಕೂಡ ಮುಖ್ಯವಾಗಿತ್ತು. ಅದಾದ ನಂತರ ಅವರು ಯೋಗಕ್ಷೇಮ ಅರ್ಥಶಾಸ್ತ್ರ ಹಾಗೂ ಸಮಾನತಾ ಪರಿಕಲ್ಪನೆಯನ್ನು ಕುರಿತು ಅಧ್ಯಯನ ಮಾಡತೊಡಗಿದರು. ಆದರೆ ಕಳೆದ ೧೫ ವರ್ಷಗಳಿಂದ ಅವರು ಕ್ಷಾಮ ಹಾಗೂ ಲಿಂಗಾಧಾರಿತ ತಾರತಮ್ಯವನ್ನು ಕುರಿತು ಚಿಂತನೆ ನಡೆಸಿದ್ದಾರೆ—ಈ ಕುರಿತು ಅವರು ನಡೆಸಿರುವ ಸಂಶೋಧನೆಯ ಫಲವಾಗಿ ಅವರಿಗೆ ವಿಶ್ವಮಟ್ಟದ ಮನ್ನಣೆ ದೊರೆತಿದೆ", ಹಾಗೆಂದು ವಿಶ್ವಭಾರತಿ ವಿಶ್ವವಿದ್ಯಾನಿಲಯದ ಮಾಜಿ ಕುಲಪತಿ ಪ್ರೊ|| ಅಮ್ಲದತ್ತಾ ಹೇಳುತ್ತಾರೆ. ವಾಸ್ತವವಾಗಿ ಮೂರನೇ ಜಗತ್ತಿನ ಕ್ಷಾಮಗಳ ಕುರಿತು ಪ್ರಚಲಿತವಿರುವ ಚಿಂತನ ಕ್ರಮದಲ್ಲಿರುವ ತರ್ಕರಾಹಿತ್ಯವನ್ನು ಸೇನ್ ಗಮನಕ್ಕೆ ತೆಗೆದುಕೊಂಡಿದ್ದಾರೆ. ಜಾದವ್‌ಪುರ ವಿಶ್ವವಿದ್ಯಾನಿಲಯದಲ್ಲಿ ಸೇನರ ಗುರುವಾಗಿದ್ದ ಪ್ರೊ|| ಧೀರೇಶ್ ಭಟ್ಟಾಚಾರ್ಯ ಅವರು ನೊಬೆಲ್ ಪಾರಿತೋಷಕ ಅಮರ್ತ್ಯರಿಗೆ ಬಹಳ ಹಿಂದೆಯೇ ಬರಬೇಕಾಗಿತ್ತೆಂದು ತಿಳಿಸುತ್ತಾರೆ. ಸೇನರ ವಿದ್ಯಾರ್ಥಿಗಳೂ ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. "ಅಧಿಕಾರ ವಿಕೇಂದ್ರೀಕರಣ ಕುರಿತು ನಗರದಲ್ಲಿ ಡಿಸೆಂಬರ್ ತಿಂಗಳಿನಲ್ಲಿ ನಡೆಯುವ ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾಗವಹಿಸಲು ಸೇನ್ ಬರುವಾಗ ಅವರನ್ನು ಅಭಿನಂದಿಸಬೇಕೆಂದು" ಅವರು ಯೋಚಿಸಿಕೊಂಡಿದ್ದಾರೆ.

ನೋಬೆಲ್ ಬಹುಮಾನ ಘೋಷಣೆಯಾಗುತ್ತಿದ್ದಂತೆಯೇ, "ನನ್ನನ್ನು ಗುರ್ತಿಸಿದರು ಎಂಬುದು ಒಂದು ಬಗೆಯಾದರೆ ಎಲ್ಲ ಜನರನ್ನು ಮುಟ್ಟುವಂಥ ವಿಷಯವೊಂದಕ್ಕೆ ಜನಮನ್ನಣೆ ದೊರೆಯಿತೆಂಬುದು ಸಂತೋಷದ ಸಂಗತಿ" ಎನ್ನುತ್ತಾರೆ ಸೇನ್. "ಈ ವಲಯದಲ್ಲಿ ಬಹಳ ಮಂದಿ ಕೆಲಸ ಮಾಡುತ್ತಿದ್ದಾರೆ, ಆದರೆ ಎಲ್ಲರಿಗೂ ಬಹುಮಾನ ದೊರೆಯದ್ದು ಒಂದು ದುರಂತ", ಎನ್ನುವಾಗ ಸೇನ್ ಬರಿ ಬಾಯಿ ಉಪಚಾರಕ್ಕೆ ಹಾಗೆ ನುಡಿದಿರಬೇಕು ಎನ್ನಿಸುವುದಿಲ್ಲ. ಅಮರ್ತ್ಯರ ತಂದೆ ೧೯೭೧ರಲ್ಲಿ ಕಾಲವಾಗುವಾಗಲೇ ತಮ್ಮ ಮಗ ನೊಬೆಲ್ ಪಾರಿತೋಷಕಗಳಿಸುತ್ತಾನೆಂದು ತಿಳಿದಿದ್ದರು. ಅಂಥ ಸುದಿನವನ್ನು ಕಾಣುವಷ್ಟು ದೀರ್ಘವಾದ ಆಯಸ್ಸು ತನ್ನದಲ್ಲವಲ್ಲ ಎಂದು ಅವರು ಮರುಗಿದ್ದರಂತೆ.

ಅರ್ಥಶಾಸ್ತ್ರಕ್ಕಾಗಿ ಅಮರ್ತ್ಯರು ಜಗತ್ತಿನ ಅತ್ಯುನ್ನತ ಬಹುಮಾನವನ್ನು ಗಳಿಸಿರುವ ಹಿನ್ನೆಲೆಯಲ್ಲಿ ಇನ್ನು ಮುಂದೆ ಅದನ್ನು 'ವಿಷಾದ ವಿಜ್ಞಾನ'ವೆಂದು ಕರೆಯಲಾಗದು. "ನಮ್ಮ ವೃತ್ತಿಯ ಅಂತಃಸಾಕ್ಷಿ" ಎಂದು ಮೆಸ್ಯಾಚುಸೆಟ್ಸ್ ತಾಂತ್ರಿಕ ಸಂಸ್ಥೆಯ ನೊಬೆಲ್ ವಿಜೇತ ರಾಬರ್ಟ್ ಸೋಲೊರವರು ಸೇನ್‌ರನ್ನು ಕರೆದಿರುವುದು ಗಮನಾರ್ಹವಾಗಿದೆ. ಮಾರುಕಟ್ಟೆ ಉತ್ತಮಿಕೆಯನ್ನು ಗಮನದಲ್ಲಿರಿಸಿಕೊಂಡು ನಡೆಸುವ ಸಂಶೋಧನೆಗಳಿಗೆ ಸಾಮಾನ್ಯವಾಗಿ ಅರ್ಥಶಾಸ್ತ್ರದಲ್ಲಿ ಇದುವರೆಗೆ ನೊಬೆಲ್ ಪ್ರಶಸ್ತಿ ನೀಡಿರುವ ಹಿನ್ನೆಲೆಯಲ್ಲಿ ಸೇನರ ಚಿಂತನೆ ಹೆಚ್ಚು ಸಮಾಜಶಾಸ್ತ್ರೀಯವೂ, ತಾತ್ವಿಕವೂ ಆಗಿದೆ. "ಅರ್ಥಶಾಸ್ತ್ರ ಹಾಗೂ ತತ್ವಜ್ಞಾನದ ಉಪಕರಣಗಳನ್ನು ಸಂಯೋಜನೆಗೊಳಿಸುವುದರ ಮೂಲಕ

್ರಮುಖವಾದ ಅರ್ಥಶಾಸ್ತ್ರದ ಸಮಸ್ಯೆ
ಳಲ್ಲಿನ ನೈತಿಕ ಆಯಾಮವನ್ನು ಅನಾವರಣ
ೂಳಿಸಿದ್ದಾರೆ."

ಅರ್ಥಶಾಸ್ತ್ರದ ಜಟಿಲ ಸಮಸ್ಯೆಗಳನ್ನು
ಲ್ಲ ಅಮರ್ತ್ಯರ ವಿದ್ಯಾರ್ಥಿಗಳು ಹಾಗೂ
ಹೋದ್ಯೋಗಿಗಳು "ತಂತ್ರಗಳ ಆಯ್ಕೆ"
ುತ್ತಿತರ ವಿಷಯಗಳ ಕುರಿತು ದೀರ್ಘ
ಾಗಿ ಚರ್ಚೆಯಲ್ಲಿ ತೊಡಗಬಹುದು, ಆದರೆ
ೇನರು ಮಾತ್ರ ಜನಸಾಮಾನ್ಯರಿಗೆ ಸಂಬಂಧಿ
ದ ವಿಷಯಗಳ ಮೇಲೂ ಗಮನವನ್ನು
ೇಂದ್ರೀಕರಿಸಿದ್ದಾರೆ. ಬಡತನ ಹಾಗೂ
ಮೂಹ ಸಂಕಷ್ಟಗಳನ್ನು ಯಶಸ್ವಿಯಾಗಿ
ಭಾಯಿಸಲು ಹಾಗೂ ನಿವಾರಿಸಲು ಸಾಂಪ್ರ
ಾಯಿಕ ಅರ್ಥಶಾಸ್ತ್ರ ಹಾಗೂ ಮಾರುಕಟ್ಟೆ
ಲಗಳು ಸೋತಿರುವಲ್ಲಿ ಸೇನರ ಚಿಂತನೆಯ
್ರಾಮುಖ್ಯತೆ ಮನದಟ್ಟಾಗುತ್ತದೆ.
ಹಾರದ ಕೊರತೆಯಿಲ್ಲದಾಗಲೂ ಕ್ಷಾಮ
ಾಮರಗಳು ತಲೆದೋರಲು ಸಾಮಾಜಿಕ
ಾದ ಅಂಶಗಳು ಕಾರಣವೆಂದು ಸೇನ್
ೋರಿಸಿದ್ದಾರೆ. ಆಫ್ರಿಕಾದ ಸಹರಾದ ಕೆಳ
ಾಗದಲ್ಲಿ ವಾಸಿಸುವ ಹೆಣ್ಣುಮಕ್ಕಳಿಗೂ
ರಕಷ್ಟವಾದ ರೀತಿಯಲ್ಲಿ ಭಾರತದ ಕೆಲವು
ಾಗಗಳ ಹೆಣ್ಣುಮಕ್ಕಳು ಅಪೌಷ್ಟಿಕತೆಗೆ
ಡಾಗಿರುವುದು ಏಕೆ ಎಂದು ಅಮರ್ತ್ಯರ
ಿಂತನೆಗಳು ವಿಶದಪಡಿಸುತ್ತವೆ.

ಅಮರ್ತ್ಯರ ಈ ತಾತ್ವಿಕ ಚೌಕಟ್ಟಿನಲ್ಲಿ
ಬಲೀಕರಣದ ಪ್ರಸ್ತಾಪ ಬರುತ್ತದೆ.
್ಷಾಮ ತಲೆದೋರಿದ ಸ್ಥಳಗಳಲ್ಲಿ ನೇರವಾಗಿ
ಹಾರವನ್ನು ವಿತರಿಸುವುದಕ್ಕೆ ಬದಲಾಗಿ
್ಷಾಮಪೀಡಿತರು ಆಹಾರವನ್ನು ಪಡೆದು
ೊಳ್ಳಲು ಅನುಕೂಲವಾಗುವಂತೆ ಅವರಿಗೆ
ುದ್ಯೋಗಗಳನ್ನು ದೊರಕಿಸುವ ಯೋಜ
ನೆಯ ಬಗ್ಗೆ ಆಲೋಚಿಸುವುದು ಹೆಚ್ಚು ಪರಿಣಾಮಕಾರಿಯೆಂದು ಸೇನ್ ಒತ್ತಿ ಹೇಳುತ್ತಾರೆ. ತಮ್ಮ ದುಡಿಮೆಯಿಂದ ಸಂಪಾದಿಸುವ ಹಣದಿಂದ ಅವರು ಆಹಾರವನ್ನು ಕೊಂಡುಕೊಳ್ಳುತ್ತಾರೆ; ಕ್ರಮೇಣ ತಮ್ಮ ಆಹಾರವನ್ನು ತಾವೇ ಬೆಳೆದುಕೊಳ್ಳಲು ಚೇತರಿಸಿಕೊಳ್ಳುತ್ತಾರೆ. ಬಡತನ ನಿವಾರಣೆ ಹಾಗೂ ಮಾನವ ಅಭಿವೃದ್ಧಿ ಸೂಚ್ಯಂಕಗಳ ವಿಷಯ ಕುರಿತು ಸೇನ್ ಜೀನ್ ಡ್ರೀಜ್ ಅವರೊಡನೆ ಜಂಟಿಯಾಗಿ ನಡೆಸಿರುವ ಸಂಶೋಧನೆಗಳಲ್ಲಿಯೂ ಶಿಕ್ಷಣಕ್ಕೂ ಸಬಲೀಕರಣಕ್ಕೂ ಇರುವ ನೇರ ಸಂಬಂಧವನ್ನು ಗುರುತಿಸುತ್ತಾರೆ. ಅಷ್ಟು ಶ್ರೀಮಂತ ರಾಜ್ಯವಲ್ಲದಿದ್ದರೂ ಇತರೆ ಶ್ರೀಮಂತ ರಾಜ್ಯಗಳಿಗಿಂತ ಕೇರಳ ಉತ್ತಮ ಸ್ಥಾನದಲ್ಲಿರುವುದಕ್ಕೆ ಅಲ್ಲಿ ಶಿಕ್ಷಣ ಮಟ್ಟ ಉತ್ತಮವಾಗಿರುವುದೇ ಕಾರಣವೆನ್ನುವುದು ಸರಿಯಾಗಿಯೇ ಇದೆ. ಮಹಿಳೆಯರಲ್ಲಿ ಶಿಕ್ಷಣ ಮಟ್ಟ ಹೆಚ್ಚು ಇರುವುದರಿಂದ ಕಡಿಮೆ ಜನನ ಪ್ರಮಾಣವಿದೆ ಹಾಗೆಯೇ ಅಸಮಾನತೆ ಕೂಡ ಕಡಿಮೆಯಿದೆ. ಸೇನ್‌ರವರು ಭಾರತಕ್ಕೆ ಬಂದಾಗಲೆಲ್ಲಾ ಈ ವಿಷಯ ಕುರಿತು ಮೇಲಿಂದ ಮೇಲೆ ಮಾತನಾಡುತ್ತಾರೆಂಬುದು ಹಲವರ ಅಭಿಪ್ರಾಯವಾಗಿದೆ.

ತಮ್ಮ ಬಾಲ್ಯದಲ್ಲಿ ಸೇನ್ ಕಂಡ ದೃಶ್ಯಗಳ ಹಿನ್ನೆಲೆಯಲ್ಲಿ ಹೇಳುವುದಾದರೆ ಬಡತನ ಮತ್ತು ಹಸಿವು ಅವರನ್ನು ವ್ಯಸನವಾಗಿ ಕಾಡಿರುವುದು ಅತ್ಯಂತ ಸಹಜವೆಂದು ತೋರುತ್ತದೆ. ಅವರ ಟೀಕಾಕಾರರು ವ್ಯಂಗ್ಯವಾಗಿ ಅಮರ್ತ್ಯರನ್ನು "ಹಸಿವಿನ ಪ್ರಾಧ್ಯಾಪಕ" ಎಂದು ಕರೆಯುವುದುಂಟು. ೧೯೩೩ರಲ್ಲಿ ಶಾಂತಿನಿಕೇತನದಲ್ಲಿ ಹುಟ್ಟಿದ ಸೇನ್ ತಮ್ಮ

ಹತ್ತನೇ ವಯಸ್ಸಿನಲ್ಲಿ ೧೯೪೩ರಲ್ಲಿ ಕಲ್ಕತ್ತೆಗೆ ತಮ್ಮ ಅಜ್ಜ–ಅಜ್ಜಿಯರ ಜೊತೆ ಬಂದಾಗ ಅಲ್ಲಿ ಕಂಡ ದೃಶ್ಯವನ್ನು ಅವರು ಹೀಗೆ ಬಣ್ಣಿಸುತ್ತಾರೆ: "ಬೀದಿಗಳಲ್ಲಿ ಕೃಶವಾದ ಶರೀರವನ್ನು ಹೊತ್ತ ಮಂದಿಯ ಸಾಲು ಸಾಲು; ಸಾಯುವವರ ಸಂಖ್ಯೆಗೆ ಮಿತಿಯಿಲ್ಲ. ಶಾಂತಿನಿಕೇತನದ ಆಜುಬಾಜುವಿನಲ್ಲು ಕೂಡ ಇದು ನಡೆದಿತ್ತು." ಇದಾದ ಒಂದೆರಡು ವರ್ಷಗಳಲ್ಲಿ ಸೇನ್ ಕೋಮು ಗಲಭೆಯಂಥ ಇನ್ನೊಂದು ಮಾರಣ ಹೋಮವನ್ನು ಕಂಡರು. ೧೯೪೦ರ ದಶಕದ ದುರಂತದ ಘಟನೆಗಳು ಅವರ ಮನಸ್ಸನ್ನು ರೂಪಿಸುವಲ್ಲಿ ಪಾತ್ರ ವಹಿಸಿರುವಂತೆಯೇ ಶಾಂತಿನಿಕೇತನ ಸಂಸರ್ಗದಿಂದಲೂ ಅವರು ಪ್ರಭಾವಿತರಾಗಿದ್ದಾರೆ. ನಗರದಿಂದ ದೂರವಾದ ನಿಸರ್ಗದ ಮಡಿಲಲ್ಲಿ ಗುರುದೇವರು ಆಶ್ರಮವನ್ನು ನಿರ್ಮಿಸಿರುವಾಗ ಸಂಸ್ಕೃತ ಹಾಗೂ ಧರ್ಮಗ್ರಂಥಗಳ ಅಧ್ಯಯನವು ಅಗತ್ಯವೆಂಬುದನ್ನು ಅಮರ್ತ್ಯರು ಅರಿತವರಾದರು. ಆಶ್ರಮದಲ್ಲಿ ಬಹುಕಾಲದಿಂದ ವಾಸಿಸುವರಾಗಿ ಪೂರ್ಣಾನಂದ ಚಟ್ಟೋಪಾಧ್ಯಾಯರು ಹೇಳುವ ಮಾತುಗಳು ಮನನೀಯವಾಗಿವೆ: "ಪ್ರಾಧ್ಯಾಪಕ ಸೇನ್ ಭಾರತದಲ್ಲಿರುವಾಗಲೆಲ್ಲಾ ಶಾಂತಿನಿಕೇತನದಲ್ಲಿ ಸ್ವಲ್ಪ ಕಾಲ ಇರದೇ ಹೋಗುವುದಿಲ್ಲ; ಅಲ್ಲಿ ಕೇವಲ ಅವರ ತಾಯಿಯವರು ಇದ್ದಾರೆ ಎಂಬ ಕಾರಣಕ್ಕಾಗಿಯಲ್ಲ, ಬದಲಾಗಿ ಶಾಂತಿನಿಕೇತನದ ಪರಿಸರದಲ್ಲಿ ಸೇನರು ತೌರಿನಲ್ಲಿದ್ದಷ್ಟು ನಿರುಮ್ಮಳತೆಯನ್ನು ಪಡೆಯುವುದರಿಂದ. "ಇಲ್ಲ, ಇಲ್ಲಿ ಅವರು ಜಗತ್ತು ಅರಿತಿರುವಂಥ ಪ್ರಸಿದ್ಧ ಪ್ರಾಧ್ಯಾಪಕರಲ್ಲ. ಯಾವನೇ ಹಳೆವಿದ್ಯಾರ್ಥಿಯ ತರಹ ಅವರು ಇಲ್ಲಿ ಸಂಚರಿಸುತ್ತಾರೆ—ಹೆಗಲಿನ
ಜೋತುಬಿದ್ದ ಶಾಂತಿನಿಕೇತನದ ಕಂಕ
ಚೀಲ, ಕಾಲಿಗೆ ಚಪ್ಪಲಿ—ಮರದ ಕೆಳ
ಸ್ಥಾಪಿತವಾಗಿರುವ ಕಾಳ್ಯನ ಟೀ ಅಂಗಡಿಯ
ಹರಟೆಯಲ್ಲಿ ಖುಷಿಯಾಗಿ ಭಾಗವಹಿಸು
ತ್ತಾರೆ."

ಸೇನರ ತಾತ–ತಾಯಿಯ ತಂದೆ–ಕ್ಷಿತೀ
ಮೋಹನ್‌ಸೇನ್ ಪ್ರಕಾಂಡ ಸಂಸ್ಕೃ
ಪಂಡಿತರು. ಸಂಸ್ಕೃತದ ಆಕರ್ಷಣೆಗೆ ಅವ
ಪ್ರಭಾವ ಸೇನರ ಮೇಲಿದೆ. ಶೇಕ್ಸ್‌ಪಿಯರ್
ಬರ್ನಾರ್ಡ್ ಶಾ ಅವರ ಕೃತಿಗಳಂತೆಯೇ
ತಾವು ಸಂಸ್ಕೃತ ಹಾಗೂ ಗ್ರೀಕ್ ಅಭಿಜಾ
ಕೃತಿಗಳು, ಭಾರತೀಯ ಮಹಾಕಾವ್ಯಗಳ
ಹಾಗೂ ಬಂಗಾಳಿ ಸಾಹಿತ್ಯದಿಂದಲ
ಪ್ರಭಾವಿತರಾಗಿರುವುದಾಗಿ ಅಮರ್ತ್ಯರ
ಹೇಳುತ್ತಾರೆ.

ಕೋವನ್‌ನ ಬ್ಯಾಂಕ್ ಆಫ್ ಇಟ
ಯವರು ಏರ್ಪಡಿಸಿದ್ದ ಪ್ರಪ್ರಥಮ ಬ್ಯಾ
ಸ್ಮಾರಕ ಉಪನ್ಯಾಸವನ್ನು ನೀಡುತ್ತಾ ಸೇನ
ಆಡಮ್‌ಸ್ಮಿತ್‌ನ ಚಿಂತನೆಗಳೊಡ
ಹೋಲಿಸಲು ಕೌಟಿಲ್ಯನ ಅರ್ಥಶಾಸ್ತ್ರವನ
ವ್ಯಾಪಕವಾಗಿ ಉಲ್ಲೇಖಿಸುತ್ತಾರೆ. ಇದ
ವರೆಗೆ ೧೮ ಗ್ರಂಥಗಳನ್ನೂ ಸರಿಸುಮಾ
೨೦೦ ಸಂಶೋಧನಾ ಪ್ರಬಂಧಗಳನ
ಪ್ರಕಟಿಸಿರುವ ಸೇನ್ ಕಳೆದ ವರ
ಹಾರ್ವರ್ಡ್ ವಿಶ್ವವಿದ್ಯಾನಿಲಯ
ಪ್ರತಿಷ್ಠಿತ ಅರ್ಥಶಾಸ್ತ್ರ ಹಾಗೂ ತತ್ವಶಾಸ್ತ್ರ
ಲ್ಯಾಮಾಂಟ್ ಪ್ರಾಧ್ಯಾಪಕಗಿರಿಯನ
ಬಿಟ್ಟುಕೊಟ್ಟು ಕೇಂಬ್ರಿಜ್ ವಿಶ್ವವಿದ
ನಿಲಯದ 'ಮಾಸ್ಟರ್ ಆಫ್ ಟ್ರಿನಿ
ಕಾಲೇಜ್ ಹುದ್ದೆಯನ್ನು ಅಲಂಕರಿಸಿದ
ಇಲ್ಲಿಯತನಕ ಯಾವ ಭಾರತೀಯನಿ

ಪದವಿ ಪ್ರಾಪ್ತವಾಗಿಲ್ಲ ಎಂದ ಮೇಲೆ ಮರ್ತ್ಯಸೇನರ ಸಾಧನೆ ಹಾಗೂ ಸ್ಥಾನಮಾನಗಳ ಅರಿವಾಗುತ್ತದೆ. ಇದಕ್ಕೆ ಮೊದಲು ಸೇನ್ ಆಕ್ಸ್‌ಫರ್ಡ್‌ನಲ್ಲಿ ರಾಜಕೀಯ ಅರ್ಥಶಾಸ್ತ್ರದ ಡ್ರುಮೊಂಡ್ ಪ್ರೊಫೆಸರ್ ಆಗಿಯೂ 'ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್'ನಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇಲ್ಲಿ ಪ್ರಥಮವಾಗಿ ಜಾದವ್‌ಪುರ ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರ ವಿಭಾಗವನ್ನು ಸ್ಥಾಪಿಸಿದವರು ಸೇನ್. ಅಲ್ಲಿಂದ ಮುಂದೆ ಅವರು 'ಡೆಲ್ಲಿ ಸ್ಕೂಲ್ ಆಫ್ ಎಕನಾಮಿಕ್ಸ್'ಗೆ ಪ್ರಯಾಣ ಬೆಳೆಸಿದರು.

ಅಂತಿಮವಾಗಿ ಅರ್ಥಶಾಸ್ತ್ರದಲ್ಲಿ ನಿಲುಗಡೆ ಹೊಂದುವುದಕ್ಕೆ ಮೊದಲು ಸೇನ್ ಹಲವು ಶಿಸ್ತುಗಳ ಜೊತೆ ಚಕ್ಕಂದವಾಡಿರುವುದು ಕಂಡುಬರುತ್ತದೆ. ಮಗುವಾಗಿದ್ದಾಗ ಸಂಸ್ಕೃತ ಪಂಡಿತನಾಗಬೇಕೆಂದು ಲೆಕ್ಕ ಹಾಕಿದರು, ಶಾಲೆ ಸೇರಿದ ಬಳಿಕ ಗಣಿತಶಾಸ್ತ್ರಜ್ಞನಾಗಬೇಕೆಂದು ತುಡಿತ ಉಂಟಾಯಿತು. ಮುಂದೆ ಒಂದೆರಡು ವರ್ಷಗಳ ನಂತರ ಭೌತಶಾಸ್ತ್ರಜ್ಞನಾಗುವುದು ಲೇಸೆಂದು ಕಂಡಿತು. ಕಲ್ಕತ್ತೆಯ ಪ್ರೆಸಿಡೆನ್ಸಿ ಕಾಲೇಜು ಮೆಟ್ಟಲು ಹತ್ತುವ ವೇಳೆಗೆ ಅರ್ಥಶಾಸ್ತ್ರವೇ ತನ್ನ ನಿಜವಾದ ಕ್ಷೇತ್ರವೆಂದು ಖಾತ್ರಿಯಾಯಿತು. ಆದರೆ ಅಮರ್ತ್ಯಸೇನ್ ಎಲ್ಲ ಶಿಸ್ತುಗಳ ಸತ್ವವನ್ನು ತಮ್ಮ ಚಿಂತನೆಯಲ್ಲಿ ಸಂಯೋಜನೆಗೊಳಿಸುತ್ತಾರೆ. ಅಂದಮೇಲೆ ಬಂಗಾಳಿಗಳ ರಕ್ತದಲ್ಲಿ ಸಾಹಿತ್ಯ ಮತ್ತು ಲಲಿತ ಕಲೆಗಳು ಬೆರೆತಿರಲೇ ಬೇಕಲ್ಲ!

ಸೇನ್‌ರ ಮನಸ್ಸಿನ ವೈಶಾಲ್ಯತೆಯನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುವಂಥ ಅವರ ಮಾತುಗಳಿಂದಲೇ ಈ ಲೇಖನವನ್ನು ಮುಕ್ತಾಯಗೊಳಿಸುವುದು ಸೂಕ್ತ: "ಎಂಥ ಭೀಕರ ಕ್ಷಾಮವೆಂದರೂ ಶೇಕಡಾ ೧೦ ಭಾಗಕ್ಕಿಂತ ಹೆಚ್ಚು ಜನರನ್ನು ಅದು ಮುಟ್ಟುವುದಿಲ್ಲ. ಬಹುತೇಕ ಕ್ಷಾಮಗಳು ಶೇಕಡಾ ೫ಕ್ಕಿಂತ ಕಡಿಮೆ ಜನಸಂಖ್ಯೆಗೆ ತಗುಲುತ್ತದೆ. ಆಫ್ರಿಕಾದ ಕ್ಷಾಮಗಳ ಬಗ್ಗೆ ಹೆಚ್ಚು ಪ್ರಸ್ತಾಪವಾಗುತ್ತಿದೆ; ಅವುಗಳ ಬಗ್ಗೆ ಕೂಡ ಈ ತೀರ್ಮಾನಗಳು ಸತ್ಯ. ಕ್ಷಾಮಗಳನ್ನು ತಡೆಗಟ್ಟುವುದು ಬಹಳ ಸುಲಭ. ಆದರೆ ಅನೇಕ ವೇಳೆ ಸರ್ಕಾರಗಳಿಗೇ ಅವುಗಳ ಬಗ್ಗೆ ಕಾಳಜಿ ಇರುವುದಿಲ್ಲ. ಒಂದು ವೇಳೆ ಒಂದು ದಶಲಕ್ಷ ಜನರು ಸತ್ತರೂ ಆಳುವವರಿಗೆ ಅದರಿಂದ ಏನೂ ಬಾಧಕವಾಗುವುದಿಲ್ಲ. ಸರ್ವಾಧಿಕಾರ ಅಥವಾ ವಸಾಹತುಶಾಹಿ ಆಡಳಿತದಲ್ಲಿರುವ ದೇಶಗಳಿಗೆ ಈ ಮಾತು ವಿಶೇಷವಾಗಿ ಅನ್ವಯಿಸುತ್ತದೆ. ಕ್ಷಾಮವನ್ನು ತಡೆಗಟ್ಟುವ ಅತ್ಯುತ್ತಮ ಮಾರ್ಗವೆಂದರೆ, ಮುಕ್ತ ಪತ್ರಿಕಾರಂಗವಿರುವ ಪ್ರಜಾತಂತ್ರದ ಸರ್ಕಾರವನ್ನು ಹೊಂದುವುದು, ಹಾಗೆಯೇ ವಿರೋಧಪಕ್ಷವಿರಬೇಕು ಮತ್ತು ಸರ್ಕಾರಗಳನ್ನು ಬದಲಾಯಿಸುವಂಥ ಚುನಾವಣೆ."

ಸಾಕ್ಷರತೆ ಅನುಭವದ ಭಂಡಾರಕ್ಕೆ ಬೀಗದಕೈ ಸಾಮಾಜಿಕ ಪುನರುತ್ಥಾನಕ್ಕೆ ದಾರಿ

—ರೀಡ್

ಜೀವಕಾರುಣ್ಯದ ವ್ಯಕ್ತಿ ಚದುರಂಗ

ಹೊರೆಯಾಲ ದೊರೆಸ್ವಾಮಿ
ಮನೆ ನಂ. ೨, 'ಪದ್ಮನಿಲಯ'
೧ನೇ ಮೇನ್, ೪ನೇ 'ಎ' ಅಡ್ಡರಸ್ತೆ (ಪಾರ್ಕ್ ರಸ್ತೆ)
೧ನೇ ಹಂತ, ಬೃಂದಾವನ ಬಡಾವಣೆ, ಮೈಸೂರು

ಸಾಹಿತ್ಯ ಕ್ಷೇತ್ರದಲ್ಲಿ ಗಾತ್ರಕ್ಕಿಂತ ಹೆಚ್ಚಾಗಿ ಸೂತ್ರೋಪಾಯದಲ್ಲಿ ಕೃತಿಗಳನ್ನು ರಚಿಸಿ, ಅದಕ್ಕೂ ಮಿಗಿಲಾದ ಮಾನವತಾವಾದದ ಸ್ಪರ್ಶವನ್ನು ತಮ್ಮ ಜೀವನದುದ್ದಕ್ಕೂ ಉಳಿಸಿಕೊಂಡು ಬಂದ ಗತಿಸಿದ ಸಾಹಿತಿ ಚದುರಂಗರು (ಎಂ. ಸುಬ್ರಮಣ್ಯ ರಾಜೇ ಅರಸು) ಸಾಹಿತ್ಯ, ಕೃಷಿ, ಚಲನಚಿತ್ರ ಈ ಮೂರೂ ಕ್ಷೇತ್ರಗಳಲ್ಲಿ ತನ್ಮಯತೆಯಿಂದ ದುಡಿದವರು.

ಸಾಮಾಜಿಕ ಕಳಕಳಿಯೊಂದಿಗೆ ಜೀವನ ದುದ್ದಕ್ಕೂ ಬೆಳೆದು ಬರುತ್ತ, ದಾರಿಯಲ್ಲೆಲ್ಲ ಸಿಕ್ಕ ಬೇವನ್ನು ಉಂಡು, ಸಿಹಿಯನ್ನು ಜನತೆಗೆ ಧಾರೆ ಎರೆಯುತ್ತ ಬಂದ ಮಿದು ಹೃದಯದ ಮೆದು ಮಾತಿನ ಚದುರಂಗರು ಹುಟ್ಟಿದ್ದು ೧-೧-೧೯೧೬, ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಕಲ್ಲಹಳ್ಳಿ, (ಕಲ್ಲಳ್ಳಿ) ಗ್ರಾಮದಲ್ಲಿ. ತಾಯಿ ಜೀವಕಾರುಣ್ಯದ ಮರುದೇವಿ ಅಮ್ಮಣ್ಣಿ. ತಂದೆ ಕೃಷಿಪಂಡಿತ ಮುದ್ದುರಾಜೇ ಅರಸು.


ಕನ್ನಡ ನಾಡನ್ನು ಆಳಿದ ಗಂಗರಸರು (ತಲಕಾಡು ಮೂಲ) ಮತ್ತು ಚಂಗಾಳ್ವರು (ಕೊಡಗು, ಪಿರಿಯಾಪಟ್ಟಣ ಪ್ರದೇಶಗಳನ್ನು ಆಳಿದ ರಾಜವಂಶೀಯರು) ಮನೆತನಗಳ ಮೂಲದ ಚದುರಂಗರು ಶೈವ-ಜೈನ ಪರಂಪರೆಗೆ ಸೇರಿದವರು; 'ಸಮ್ಯಕ್ತ ಕೌಮುದಿ' 'ಜನನೃಪ ವಿಜಯ' 'ನೇಮಿ ಜಿನೇಶ ಸಂಗತಿ' 'ಪಾಕಶಾಸ್ತ್ರ' ಕೃತಿಗಳನ್ನು ರಚಿಸಿದ ಕಲ್ಲಹಳ್ಳಿಯ ದೊರೆ ಮೂರನೆಯ ಮಂಗರಸನ ವಂಶಜರು.

ಚದುರಂಗರ ಸೋದರ ಸಂಬಂಧಿ ಡಿ. ದೇವರಾಜೇ ಅರಸು (ಕರ್ನಾಟಕದ ಮುಖ್ಯಮಂತ್ರಿಯಾಗಿದ್ದವರು) ಒಂದಿಗೆ ಮಠದ ಐಗಳ ಮುಖಾಂತರ ಮರಳಿನ ಮೇಲೆ ಓಂನಾಮ ತಿದ್ದುವುದರೊಂದಿಗೆ ತಮ್ಮ ವಿದ್ಯಾಭ್ಯಾಸವನ್ನು ಪ್ರಾರಂಭಿಸಿದರು. ೫-೬ ನೆಯ ವಯಸ್ಸಿನವರೆಗೂ ಕಲ್ಲಹಳ್ಳಿಯಲ್ಲೇ ಅಕ್ಷರಾಭ್ಯಾಸ ಮುಂದುವರೆಸಿ, ಅನಂತರ ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸಕ್ಕಾಗಿ ಮೈಸೂರಿನ ಅರಸು ಬೋರ್ಡಿಂಗ್ ಶಾಲೆಗೆ ಸೇರಿದರು.

ಆ ಹೊತ್ತಿಗೆ ಅವರ ಅಣ್ಣ ಕೆ. ಬಸವ ರಾಜೇ ಅರಸು ಲಾಯರ್ ಪದವೀಧರರಾಗಿ, ಆಗಿನ ಮಹಾರಾಜರಾದ ನಾಲ್ವಡಿ ಕೃಷ್ಣ ರಾಜ ಒಡೆಯರ್ ಮೂಲಕ ಮಧುಗಿರಿ ಯಲ್ಲಿ ತಾತ್ಕಾಲಿಕ ಮ್ಯಾಜಿಸ್ಟ್ರೇಟ್

ಚದುರಂಗ

(ಎಂ. ಸುಬ್ರಹ್ಮಣ್ಯ ರಾಜೇ ಅರಸು)



೧೯೧೬—೧೯೯೮

ಹುದ್ದೆಯು ಹೋದದ್ದರಿಂದ ಅವರ ಕುಟುಂಬವು ತಿರುಗಿ ಮೈಸೂರಿಗೆ ಹಿಂದಿರುಗಿ ಬಂದು, ಕೆಲವು ದಿನಗಳ ಕಾಲ ನಂಜರಾಜ ಬಹದ್ದೂರ್ ಛತ್ರದಲ್ಲಿ ವಾಸವಾಗಿತ್ತು. ಮತ್ತೆ ಕೆ. ಬಸವರಾಜೇ ಅರಸು ಮ್ಯಾಜಿ-ಸ್ಟ್ರೇಟರಾಗಿ ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರಕ್ಕೆ ನೇಮಕಗೊಂಡ ನಂತರ, ಅವರಿಗೆ ಕೃಷ್ಣರಾಜ ಒಡೆಯರ ಅಕ್ಕ ಜಯಲಕ್ಷಮ್ಮಣ್ಣಿ ಅವರ ಮಗಳು ಲೀಲಾವತಿಯೊಂದಿಗೆ ಮದುವೆಯಾದದ್ದು ಬಾಲಕ ಚದುರಂಗರು ಅರಮನೆಯ ಪರಿಸರಕ್ಕೆ ಹತ್ತಿರವಾಗುವ ಹಾಗೆ ಮಾಡಿತು.

ಅಲ್ಲೇ ರಾಜಕುಮಾರ ಜಯಚಾಮರಾಜೇಂದ್ರ ಒಡೆಯರ್‌ರವರ ಸಹಪಾಠಿಯಾಗುವ ಸಂದರ್ಭ ಬಾಲಕ ಚದುರಂಗರಿಗೆ ಒದಗಿಬಂತು. ಅವರು ಮೈಸೂರು ಅರಮನೆ ಸೇರಿದರು. ಪರಿಣಾಮ, ತಮಗಿಂತ ಎರಡು ವಯಸ್ಸು ಕಡಿಮೆ ಓದುತ್ತಿದ್ದ ಒಡೆಯರ್‌ರವರೊಂದಿಗೆ ರಾಯಲ್ ಸ್ಕೂಲಿಗೆ ಹೋಗಬೇಕಾಗಿ ಬಂತು. ಅಂದರೆ, ರಾಜಕುಮಾರನ ಸಹವಾಸದಿಂದಾಗಿ ರೈತ ಕುಟುಂಬದ ಬಾಲಕ ಚದುರಂಗರಿಗೆ ಎರಡು ವರ್ಷ ಹಿಂಬಡ್ತಿ! ಆದರೆ, ಅರಮನೆಯಿಂದ ಅವರಿಗೆ ಲಾಭವಾಗದೆಯೂ ಇರಲಿಲ್ಲ.

ಜಯಚಾಮರಾಜೇಂದ್ರ ಒಡೆಯರ್‌ರವರಿಗೆ ಚಿಕ್ಕಂದಿನಿಂದಲೂ ಕಥೆ ಕೇಳುವ ಅಭ್ಯಾಸ ಅಂಟಿಕೊಂಡು ಬಂದಿತ್ತು. ಬಾಲಕ ಚದುರಂಗ ತಾವು ಕೇಳಿದ್ದ, ಕಲಿತಿದ್ದ ಕಥೆಗಳನ್ನೆಲ್ಲ ಅವರಿಗೆ ಹೇಳುತ್ತ ಹೋದಹಾಗೆ ಅವರ ಕಥೆಯ ಬುತ್ತಿ ಕರಗುತ್ತ ಹೋಯಿತು. ಮತ್ತೆ ಮತ್ತೆ ಕಥೆಯನ್ನು ಹೇಳಲೇಬೇಕಾದ ಪ್ರಸಂಗವಿದ್ದುದರಿಂದ ಅವರು ಹೊಸ ಕಥೆಗಳಿಗಾಗಿ ಹುಡುಕಾಟ ಪ್ರಾರಂಭಿಸಿದರು. ಈಗ ನಿರ್ವಾಹವಿಲ್ಲದೆ ಬಾಲಕ ಚದುರಂಗ ಅರಮನೆಯ ದಾದಿಯರಿಗೆ ಕಥೆಗಾಗಿ ಗಂಟು ಬಿದ್ದರು—'ಅವ್ವಾ ಅವ್ವಾ ಒಂದು ಕತೆ ಹೇಳು' ಅಂತ. ದಾದಿಯರು ಒಪ್ಪಲಿಲ್ಲ. ಬಾಲಕ ಬಿಡಲಿಲ್ಲ. 'ಎಲೆ ಅಡ್ಕೆಗೆ ಒಂದಾಣೆ ಕೊಟ್ಟು, ದಾದಿಯರಿಂದ ಹೊಸ ಕಥೆಗಳನ್ನು ತೆಗೆದರು. ಅದನ್ನು ಒಡೆಯರ್‌ರವರಿಗೆ ಉಣಬಡಿಸಿದರು. ಹೀಗೆ ಕಥೆ ಹೇಳುವ, ಕೇಳುವ, ಕಟ್ಟುವ ಸೃಷ್ಟಿಕ್ರಿಯೆಯೊಂದಿಗೆ ಬಾಲಕ ಚದುರಂಗರಲ್ಲಿ ಕಥೆಗಾರನೊಬ್ಬನ ಉದಯವಾಗತೊಡಗಿತು.

ಅರಮನೆಯ ವೈಭವೋಪೇತ ಜೀವನದ ನಡುವೆಯೇ ಬಾಲಕ ಚದುರಂಗರು ಸಂಸ್ಕೃತ, ಇಂಗ್ಲಿಷ್ ಅಭ್ಯಾಸವನ್ನೂ ಮುಂದುವರೆಸಿದರು. ಅಲ್ಲದೆ ಕಥಾ ಮನಸ್ಸಿನ ಬಾಲಕ ಚದುರಂಗರು ಅರಮನೆಯ ಒಳಜೀವನದ ಪದರುಗಳನ್ನು ಹತ್ತಿರದಿಂದ ನೋಡುತ್ತ ತಮ್ಮ ಹಿಂದಿನ ಬದುಕಿಗೂ ಇಂದಿನ ಬದುಕಿಗೂ ತಾಳೆ ಹಾಕತೊಡಗಿದರು.

ಮೈಸೂರು ಅರಮನೆಯಲ್ಲಿದ್ದ ದಿನಗಳನ್ನು ನೆನೆಸಿಕೊಳ್ಳುತ್ತ ಚದುರಂಗರು ಹೇಳುತ್ತಾರೆ 'ನಾನು ಹಳ್ಳಿ ಹೈದ. ಅರಮನೆಯ ಉಪಚಾರ ಅತಿಯಾದ ಸ್ವೀಟ್ ತಿಂದ ಹಾಗಾಯಿತು. ಮನಸ್ಸು ಒಪ್ಪಲಿಲ್ಲ. ಆ ಡೌಲು ಇಷ್ಟವಾಗಲಿಲ್ಲ' ಅಂತ.

ಅರಮನೆಯ ರಾಯಲ್ ಸ್ಕೂಲಿನ ಸಹವಾಸ ತೊರೆದು ಮತ್ತೆ ಅರಸು ಬೋರ್ಡಿಂಗ್ ಶಾಲೆಗೆ ಸೇರಿದರು. ತಾಯಿಯ ಪ್ರೀತಿಯ ತೆಕ್ಕೆಯಲ್ಲಿ ಒರಗಿದರು. ಆದರೆ, ಈ ಯಾವ ಪರಿಸರಕ್ಕೂ ಅಂಟಿಕೊಳ್ಳದೆ ದೂರವಾಗೆ

ಬೆಳೆದ ದೇವರಾಜಅರಸು ಮುನ್ನಡೆಯುತ್ತಲೇ ಹೋದರು.

ಶಾಲೆಯಲ್ಲಿ ಗುರುಗಳಾದ ಬಾಲಸರಸ್ವತಿ (ಪತ್ತೇದಾರಿ ಕಾದಂಬರಿಕಾರರು) ಮತ್ತು ನಂಜನಗೂಡಿನ ಶ್ರೀಕಂಠಶಾಸ್ತ್ರಿಗಳು ತಮ್ಮ ಮೇಲೆ ಅಪಾರ ಪ್ರಭಾವ ಬೀರಿದರು ಎಂದು ಚದುರಂಗರು ಗೌರವದಿಂದ ನೆನೆಸಿಕೊಳ್ಳುತ್ತಾರೆ.

ಅನಂತರ, ಮಹಾರಾಜ ಹೈಸ್ಕೂಲಿನಲ್ಲಿ ಓದುವಾಗ ಪ್ರವಾಸ ಕಥನವೊಂದನ್ನು ಬರೆದರು. ಕವನವನ್ನೂ ಬರೆದರು. ಶಾಲೆಯಲ್ಲಿದ್ದ ಕನ್ನಡ ಪಂಡಿತರೊಬ್ಬರು ಅವರ ಬರವಣಿಗೆಗಳನ್ನು ನೋಡಿ, ಸಾಮಯಿಕ ಪ್ರೋತ್ಸಾಹವನ್ನಿತ್ತರು. ಚದುರಂಗರು ಹೇಳುತ್ತಾರೆ 'ಪ್ರತಿಯೊಬ್ಬ ಲೇಖಕನೂ ಕವನ ಬರೆಯೋದರಿಂದ ಸಾಹಿತ್ಯ ಕ್ಷೇತ್ರಕ್ಕೆ ಪ್ರವೇಶ ಮಾಡುತ್ತಾನೆ' ಅಂತ.

ಹೈಸ್ಕೂಲಿನಲ್ಲಿದ್ದಾಗ ಗಾಂಧೀಜಿಯ ಪ್ರಭಾವಕ್ಕೆ ಒಳಗಾದ ಅವರು (ಮಹಾತ್ಮ ಗಾಂಧೀಜಿ ಮೈಸೂರಿನ ಇಂದಿನ ಯುವರಾಜ ಕಾಲೇಜಿನ ಓವಲ್ ಮೈದಾನದಲ್ಲಿ ಬಹಿರಂಗ ಸಭೆ ನಡೆಸಿದ್ದರು.) ನಂತರ ಖಾದಿ ಧರಿಸತೊಡಗಿದರು. ಖಾದಿವಸ್ತ್ರ, ಖಾದಿಟೋಪಿ ಧರಿಸಿದ ತಮ್ಮನ್ನು ಕಂಡು ರಾಜಮನೆತನದ ಸಂಬಂಧಿಯಾದ ಅಣ್ಣ ಕೆ. ಬಸವರಾಜೆ ಅರಸು ಟೋಪಿಯನ್ನು ಕಿತ್ತೆಸೆದಾಗ, ಖಾದಿಗೆ ಅವಮಾನವಾಯಿತೆಂದು ಬಗೆದ ಬಾಲಕ ಚದುರಂಗ ಸಿಟ್ಟಿನಿಂದ ಮೂರು ತಿಂಗಳ ಕಾಲ ಮನೆ ತೊರೆದು ನೆಂಟರ ಮನೆಯಲ್ಲಿ ವಾಸಿಸತೊಡಗಿದರು. ದೇಶಪ್ರೇಮಿಯಾದ ಬಾಲಕ ಮತ್ತೆ ಮನೆಗೆ ಹೋದದ್ದು ತಾಯಿ 'ನಿಮ್ಮಣ್ಣ ಒಪ್ಕೋತ್ತಾನೆ ಬಾ ಅಂದ್ಮೇಲೆ' ಅಂತ.

ಇದಾದನಂತರ ಮುಂದಿನ ಓದಿಗೆ ಬೆಂಗಳೂರಿನ ಇಂಟರ್ ಮೀಡಿಯೆಟ್ ಕಾಲೇಜಿಗೆ (ಇಂದಿನ ಸರ್ಕಾರಿ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು) ಸೇರಿದಾಗ, ಅಲ್ಲಿ ಶಿಕ್ಷಕರಾಗಿದ್ದ ಸಾ ಹಿ ತಿ ವಿ. ಸೀತಾರಾಮಯ್ಯ ಅವರ ಪ್ರಭಾವಕ್ಕೆ ಒಳಗಾದರು. ಕವನ ಬರೆಯುವ ಪ್ರಕ್ರಿಯೆ ಆರಂಭ. ಅವರ ಕವನವೊಂದು ಕಾಲೇಜು ಮ್ಯಾಗ್‌ಜಿನ್‌ನಲ್ಲಿ ಅಚ್ಚಾಯಿತು. ಅವರ ಕವನಗಳನ್ನು ಓದಿದ ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರು 'ನೀವು ಗದ್ಯದ ಕಡೆ ಹೋಗಿ. ಕವನ ನಿಮ್ಮ ಜಾಯಮಾನಕ್ಕೆ ಒಗ್ಗಿಬರೊಲ್ಲ' ಎಂದು ಹೇಳಿದ ಹಿತವಚನ ತಾವು ಗದ್ಯ ಸಾಹಿತ್ಯದತ್ತ ಮರಳಲು ಕಾರಣವಾಯಿತೆಂದು ಚದುರಂಗರು ತನ್ಮಯತೆಯಿಂದ ನೆನೆಸಿಕೊಳ್ಳುತ್ತಾರೆ.

ಇಂಟರ್ ಮೀಡಿಯೆಟ್ ತರಗತಿಯಲ್ಲಿ ಓದುತ್ತಿದ್ದಾಗ ಸಾಮಾಜಿಕ, ರಾಜಕೀಯ ತುಡಿತದ ವಿದ್ಯಾರ್ಥಿ ಚದುರಂಗ ಕಮ್ಯುನಿಸಂ ತತ್ವದ ಪ್ರಭಾವಕ್ಕೂ ಒಳಗಾದರು. ಭಾರತದ ಕಮ್ಯುನಿಸಂ ತತ್ವದ ಆದ್ಯ ಎಂ. ಎನ್. ರಾಯ್ ಪ್ರಭಾವಲಯದಲ್ಲಿ ಬಂದ ಅವರು ಕ್ರಮೇಣ ಗಾಂಧಿ ಹಾಗೂ ಮಾರ್ಕ್ಸ್ ಈ ಎರಡೂ ಪ್ರಭಾವಗಳಲ್ಲಿ ತಮ್ಮನ್ನು ರೂಪಿಸಿಕೊಳ್ಳತೊಡಗಿದರು.

ಒಮ್ಮೆ ಬನ್ನಪ್ಪ ಪಾರ್ಕ್‌ನಲ್ಲಿ (ಬೆಂಗಳೂರಿನ ಕೆಂಪೆಗೌಡ ರಸ್ತೆಯಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಬಹು ಅಂತಸ್ತಿನ ಕಟ್ಟಡದ ಪಕ್ಕದ ರಸ್ತೆಯಲ್ಲಿ) ಕಾಂಗ್ರೆಸ್ ಮುಖಂಡ ನಾರಿಮನ್ ಅವರ ಭಾಷಣದ ವ್ಯವಸ್ಥೆಯಾಗಿತ್ತು. ವಿದ್ಯಾರ್ಥಿಗಳೂ ಸೇರಿ

ದಂತೆ ಸಾವಿರಾರು ಜನರು ಆ ಸಭೆಯಲ್ಲಿ ಭಾಗವಹಿಸಿದ್ದರು. ಭಾರತದಲ್ಲಿ ಬ್ರಿಟಿಷ್ ವ್ಯವಸ್ಥೆಯ ವಿರುದ್ಧ ದನಿ ಎತ್ತಿ ಸ್ವಾತಂತ್ರ್ಯಕ್ಕೆ ಹಂಬಲಿಸಿದ ಆ ಸಭೆಯನ್ನು ಹತ್ತಿಕ್ಕಲು ಪೋಲಿಸರು ಲಾಠಿ ಛಾರ್ಜ್ ಮಾಡಿದರು. ಕೆಲವರು ಹೊಡೆತ ತಿಂದರು. ಹಲವರು ತಪ್ಪಿಸಿಕೊಂಡರು. ಪೋಲಿಸರ ಸಿಟ್ಟು ಮಾತ್ರ ಶಮನವಾಗಲಿಲ್ಲ.

ಮಾರನೆಯ ದಿನ ತರಗತಿಗಳು ನಡೆಯುತ್ತಿದ್ದಾಗ ಸಾರಾಯಿ ಕುಡಿದ ರಿಸರ್ವ್ ಪೋಲಿಸರ ಒಂದು ಹಿಂಡು ಅಲ್ಲಿಗೆನುಗ್ಗಿತು. ತರಗತಿಯಲ್ಲಿದ್ದ ಶಿಕ್ಷಕ ಸೂರ್ಯನಾರಾಯಣ ರಾವ್ ಹೊರಬಂದು ಕಾಲೇಜು ಮುಖ್ಯಸ್ಥರ ಅಪ್ಪಣೆಯಿಲ್ಲದೆ ಒಳಪ್ರವೇಶಿಸಿದ ಪೋಲಿಸರನ್ನು ಪ್ರಶ್ನಿಸಿದರು. ಅವರ ಪ್ರಶ್ನೆಗೆ ಉತ್ತರ ಹೇಳುವ ಬದಲು ಪೋಲೀಸ್ ಮುಖಂಡ ಛಾರ್ಜ್ ಅಂದ. ಪೋಲೀಸರು ರಾವ್ ಮೇಲೆ ಎರಗಲು ಹತ್ತಿರದಲ್ಲೇ ಇದ್ದ ವಿದ್ಯಾರ್ಥಿ ಮುಖಂಡ ಚದುರಂಗ (ಆಗಿನ್ನೂ ಸುಬ್ರಹ್ಮಣ್ಯರಾಜೆ ಅರಸು) ಅಡ್ಡಬಂದರು. ಪರಿಣಾಮ, ರಾವ್‌ಗೆ ಹೊಡೆತಬೀಳುವ ಬದಲು ವಿದ್ಯಾರ್ಥಿ ಮುಖಂಡನ ತಲೆಯೊಡೆಯಿತು. ಆ ತಕ್ಷಣ ಪೊಲೀಸರನ್ನು ಛೇರಾಯಿಸಿದ ವಿ. ಸೀತಾರಾಮಯ್ಯನವರಿಂದ ಹಿಡಿದು ಎಲ್ಲ ಶಿಕ್ಷಕ–ವಿದ್ಯಾರ್ಥಿಗಳಿಗೂ ತಾರಾಮಾರ ಲಾಠಿಹೊಡೆತ ಬಿತ್ತು. ತೀವ್ರವಾಗಿ ಹೊಡೆತತಿಂದ ವಿದ್ಯಾರ್ಥಿ ಮುಖಂಡ ಚದುರಂಗರನ್ನು ವಿಕ್ಟೋರಿಯ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ಅಗತ್ಯ ಚಿಕಿತ್ಸೆ ನೀಡಲಾಯಿತು. ಬಳಿಕ ಅವರನ್ನು ಸೆಂಟ್ರಲ್ ಕಾಲೇಜ್ ಹಾಸ್ಟೆಲಿನಲ್ಲಿದ್ದ ದೇವರಾಜ ಅರಸು ತಮ್ಮಲ್ಲಿಗೆ ಕರೆದುಕೊಂಡು ಹೋದರು, ಈ ಸಂಗತಿ ಆಗಿನ ಮೈಸೂರು ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರಿಗೆ ತಿಳಿಯಿತು. ಅವರು 'ನಮ್ಮನ್ನೆಲ್ಲ ಕರೆಸಿದರು.' ನಡೆದ ಘಟನೆಗಾಗಿ ವಿಷಾದಿಸಿ, ಕ್ಷಮಾಪಣೆ ಕೇಳಿದರು.

ಮಿರ್ಜಾ: ಅವಿದ್ಯಾವಂತರು ಪೊಲೀಸರಾದರೆ ಹೀಗೆ ಆಗೋದು. ವಿದ್ಯಾವಂತರಾದ ನೀವೆಲ್ಲ ಬನ್ನಿ. ನಾನು ಕೆಲ್ಸ ಕೊಡ್ತೇನೆ.

ಚದುರಂಗ: ಇಲ್ಲ. ಬರೊಲ್ಲ.

ಮಿರ್ಜಾ: ನಿಮ್ಮ ಅಭಿಪ್ರಾಯ ಏನು? ನಿಮ್ಮ ಆಶಯ ಏನು? ಕೃಷ್ಣರಾಜ ಒಡೆಯರ್‌ಗಿಂತಲೂ ಒಳ್ಳೆಯ ರಾಜರು ಭಾರತದಲ್ಲಿ ಯಾರಿದ್ದಾರೆ?

ಚದುರಂಗ: ಒಡೆಯರ್ ದೊಡ್ಡವರು. ಒಳ್ಳೆಯವರು ನಿಜ. ಆದ್ರೆ, ನಮಗೆ ಪ್ರಜಾಪ್ರಭುತ್ವದ ಕಡೆ ಒಲ್ಲವು. ಒಂದೊಂದು ರಾಜ್ಯಕ್ಕೆ ಒಬ್ಬೊಬ್ಬ ರಾಜರು ಇರೋದು ಅಂದ್ರೆ ಹೇಗೆ?

ಮಿರ್ಜಾ: ಯಾರಾದ್ರು ಕಾಂಗ್ರೆಸ್ ಪುಢಾರಿ ಆಗಬೇಕೆ? ಒಬ್ಬ ಕಾಂಗ್ರೆಸ್ಸಿಗೆ ನಮ್ಮ ರಾಜ್ಯದ ಮುಖ್ಯಮಂತ್ರಿಯಾದಾಗ ನೀವು ಸಂಕಟಕ್ಕೆ ಒಳಗಾಗುತ್ತೀರಿ ಎಂದು ಬೇಸರವಿಲ್ಲದೆ ನಗುತ್ತ ಹೇಳಿದರು.

ಆದರೂ ವಿದ್ಯಾರ್ಥಿ ಮುಖಂಡ ಚದುರಂಗರಿಗೆ ಪ್ರಜಾಪ್ರಭುತ್ವದ ಹಂಬಲ ಹೋಗಲಿಲ್ಲ. ಅದಕ್ಕಾಗಿ ಚಳುವಳಿ ನಡೆಸುವ ಮನಸ್ಸು ಹಿಂದೆಗೆಯಲಿಲ್ಲ.

ಅಲ್ಲಿಂದ ಮುಂದೆ ಬಿ.ಎ. ಓದಲು ಮೈಸೂರಿನ ಮಹಾರಾಜ ಕಾಲೇಜಿಗೆ ಸೇರಿದರು. ಅಲ್ಲಿಯೂ ವಿದ್ಯಾರ್ಥಿ ಸಂಘದ

ಕಾರ್ಯದರ್ಶಿಯಾಗಿ, ಖಾದಿಧರಿಸಿ, ಪ್ರಜಾಪ್ರಭುತ್ವದ ತಮ್ಮ ಹೋರಾಟವನ್ನು ಮುಂದುವರೆಸಿದರು. ಜೊತೆಜೊತೆಗೆ ಕವನ ಬರೆಯುವ ಕ್ರಿಯೆಯೂ ಮುಂದುವರೆಯಿತು. ಅವರ ಕವನವೊಂದು ಅಧ್ಯಾಪಕ ಬಿ. ಎಸ್. ಕೇಶವನ್ ಹೊರಡಿಸುತ್ತಿದ್ದ ಮ್ಯಾಗ್‌ಜಿನಿನಲ್ಲಿ ಅಚ್ಚಾಯಿತು.

ಮೈಸೂರಿನಲ್ಲಿ (೧೯೩೮ ರಲ್ಲಿ) ಲೇಖಕ ತರಾಸು (ಲೇಖಕನ ಪ್ರಾರಂಭದ ದಿನಗಳು) ಅವರೊಂದಿಗೆ ಹಾಗೂ ಇನ್ನಿತರರೊಂದಿಗೆ ಸೇರಿಕೊಂಡು ಅಖಿಲ ಮೈಸೂರು ವಿದ್ಯಾರ್ಥಿ ಸಮ್ಮೇಳನವೊಂದನ್ನು ಸಂಘಟಿಸಿದರು. ಆ ಸಮ್ಮೇಳನಕ್ಕೆ ಹಣ ಕೂಡಿಸಲು ತರಾಸು ಜೊತೆ ದಾವಣಗೆರೆ, ಚಿತ್ರದುರ್ಗ ಈ ಮುಂತಾದ ಪ್ರದೇಶಗಳಲ್ಲಿ ಓಡಾಡಿದರು. ಸುಭಾಷ್ ಚಂದ್ರಬೋಸ್‌ರವರ ಸೋದರ ಶರತ್ ಚಂದ್ರಬೋಸ್ ಆಗಮಿಸಿದ್ದ ಸಮ್ಮೇಳನ ಯಶಸ್ವಿಯಾಯಿತು. ಸಮ್ಮೇಳನದಿಂದಾಗಿ ಚದುರಂಗರಿಗೆ ತರಾಸು ಸ್ನೇಹತ್ವವೂ ಲಭಿಸಿತು. ಮುಂದೆ ಇಬ್ಬರೂ ತಾವು ಬರೆದ ಕಥೆ ಕಾದಂಬರಿಗಳನ್ನು ಪರಸ್ಪರ ಓದಿ, ತಿದ್ದಿ ಗೆಳೆತನದೊಂದಿಗೆ ಬೆಳೆಯುತ್ತಲೇ ಬಂದರು. ಪ್ರಗತಿಶೀಲ ಮನೋಭಾವದ ಇಬ್ಬರೂ ಗೆಳೆಯರು ಒಂದಾಗಲು ಮೈಸೂರಿನ ಸಮ್ಮೇಳನ ಕಾರಣವಾಯಿತೆಂಬುದು ಮುಖ್ಯ. ಕೆ. ಶ್ರೀನಿವಾಸ್, ಡಿ.ಆರ್. ಕೃಷ್ಣಮೂರ್ತಿ ಮುಂತಾದ ಸಮಾನಾಸಕ್ತರನ್ನು ಕೂಡಿಕೊಂಡು ಮೈಸೂರಿನ ಬನುಮಯ್ಯ ಶಾಲೆಯ ಹಿಂಭಾಗದ ಒಂದು ಮನೆಯಲ್ಲಿ 'ಜನಜಾಗೃತಿ ಸಂಘ' ಎಂಬ ಸಂಘವೊಂದನ್ನು ಹುಟ್ಟುಹಾಕಿ, ಅಲ್ಲಿ ತಮ್ಮ ಕಾರ್ಯಕಲಾಪಗಳನ್ನು ಮುಂದುವರೆಸತೊಡ[ಗಿ]ದರು ಚದುರಂಗರು.

ಈ ಸಮ್ಮೇಳನದ ನಂತರ ನಡೆ[ದ] ಚುನಾವಣೆಯಲ್ಲಿ ಮಿರ್ಜಾ ಹಸ್ತಕ್ಷೇ[ಪ] ಮಾಡಿದ್ದರಿಂದ ವಿದ್ಯಾರ್ಥಿ ಮುಖಂ[ಡ]ರಾಗಿದ್ದ ಸಾದಿಕ್, ಚದುರಂಗ ಅವರ ಬದಲ[ು] ಹೇಳ ಹೆಸರಿಲ್ಲದವರು ಸಂಘದ ಅಧ್ಯಕ್ಷ[ರ]ಾದರು. ಕಾರ್ಯದರ್ಶಿಗಳಾದರು. ದುಡ್ಡಿನ ಪ್ರಭಾವಕ್ಕೆ ಒಳಗಾಗಿ ಚುನಾವಣೆಯಲ್ಲಿ ಸಂಬಂಧವಿಲ್ಲದವರು ಪದಾಧಿಕಾರಿಗಳಾ[ಗಿ] ಆರಿಸಿ ಬಂದದ್ದನ್ನು ಕಂಡು ಪ್ರಾಮಾಣಿಕ ಕಾಳಜಿಯ ಚದುರಂಗರಿಗೆ ರಾಜಕೀಯ ಭ್ರಮನಿರಸನವಾಯಿತು. ಅಲ್ಲಿಂದ ಮುಂದೆ ಯಾವುದೇ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಲು ಅವರ ಹೋರಾಟದ ಮನಸ್ಸು ಮಾತ್ರ ಹಿಂದೆಗೆಯಲಿಲ್ಲ.

ಆ ಬಳಿಕ ಎಂ.ಎ ಹಾಗೂ ಲಾ ಓದಲ[ು] ಪೂನಾಕ್ಕೆ ಹೋದ ಚದುರಂಗರು ಮೊದಲ[ ]ನೆಯ ವರ್ಷದ ಅಭ್ಯಾಸವನ್ನು ಮುಗಿಸಿದರು. ಆದರೆ, ಮೈಸೂರು ಮಹಾರಾಜರ ಸಂಬಂಧಿಯೊಬ್ಬರನ್ನು ಮದುವೆಯಾಗಬೇಕೆಂದ[ು] ಅಣ್ಣ ಕೆ. ಬಸವರಾಜ್ ಅರಸು ಒತ್ತಾಯ ಮಾಡಿದಾಗ ಅವರಿಗೂ ಅಣ್ಣನಿಗೂ ಒಡಕ[ು] ಬಂದು ಚದುರಂಗರು ಪೂನಾದಲ್ಲಿ ತಮ[್ಮ] ಓದನ್ನು ಮುಂದುವರೆಸಲಾಗಲಿಲ್ಲ.

ಚದುರಂಗರು ಪೂನಾದಲ್ಲಿದ್ದಾಗ ಅಲ್ಲಿ[ನ] ಚಲನಚಿತ್ರ ಕ್ಷೇತ್ರದ ಪರಿಚಯವಾಯಿತು. ಕೆ. ಎ. ಅಬ್ಬಾಸ್, ಸ್ನೇಹಪ್ರಭಾ (ನಟಿ) ಮುಂತಾದವರ ಗೆಳೆತನವೂ ಲಭಿಸಿತು. ಬೊಂಬಾಯಿಯ ಮ್ಯಾಗ್‌ಜಿನ್‌ವೊಂದಕ[್ಕೆ] 'ರ್‍ಯಾಂಡಮ್ ಷಾರ್ಟ್ಸ ಬೈ ರಾಜುಸ್' ಎಂಬ ಅಭಿದಾನದಲ್ಲಿ ಚಲನಚಿತ್ರ[ ]

ಸಂಬಂಧಿಸಿದ ಲೇಖನಗಳನ್ನು ಬರೆಯ ತೊಡಗಿದರು. ಅಲ್ಲಿದ್ದಾಗಲೂ ಭಾರತದ ಸ್ವಾತಂತ್ರ್ಯ ಚಳುವಳಿಯ ಪ್ರಮುಖ ಘಟ್ಟವಾದ 'ಕ್ವಿಟ್ ಇಂಡಿಯಾ' (ಆಗಸ್ಟ್ ೯, ೧೯೪೨) ಚಳುವಳಿಯಲ್ಲಿ ಭಾಗವಹಿಸಿದರು.

ಚದುರಂಗರ ಸಾಧನೆ ಇರುವುದು ಕೇವಲ ಸಾಹಿತ್ಯ ಕ್ಷೇತ್ರದಲ್ಲಿ ಮಾತ್ರವಲ್ಲ. ಪೂನಾದಲ್ಲಿದ್ದಾಗ ತಾವು ರೂಢಿಸಿಕೊಂಡ ಚಲನಚಿತ್ರಾಸಕ್ತಿಯನ್ನು ಅರವತ್ತರ ದಶಕದಲ್ಲಿ ಅಭಿವ್ಯಕ್ತಿಸಲು ಯತ್ನಿಸಿದರು. ಅದರ ಫಲವೇ ಅವರು ನಿರ್ದೇಶಿಸಿದ 'ಸರ್ವಮಂಗಳಾ' ಚಲನಚಿತ್ರ. ಕಥೆಯೂ ಅವರದೆ. ಈ ಚಿತ್ರಕ್ಕೆ ರಾಜ್ಯ ಪ್ರಶಸ್ತಿಯಲ್ಲದೆ ಚದುರಂಗರಿಗೆ ನಿರ್ದೇಶನ, ಸಂಭಾಷಣೆ, ಚಿತ್ರಕಥೆಗಳ ಪ್ರಶಸ್ತಿಯೂ ಬಂದಿತು.

'ಉಯ್ಯಾಲೆ' ಚಿತ್ರಕ್ಕೆ (ಎನ್. ಲಕ್ಷ್ಮೀನಾರಾಯಣ ನಿರ್ದೇಶನ) ಸಂಭಾಷಣೆಯ ಪ್ರಶಸ್ತಿಯೂ ಅವರಿಗೆ ಸಂದಿತು.

ಕುವೆಂಪು ಕುರಿತು ತೆಗೆದ ಸಾಕ್ಷ್ಯಚಿತ್ರ ಖ್ಯಾತ ಚಿತ್ರವಿಮರ್ಶಕರು ಎ. ಎಸ್. ಸುಬ್ಬರಾವ್ ಪ್ರಕಾರ ಇಟ್ ಈಸ್ ಎ ಪೋಯೆಮ್ ಇನ್ ಸೆಲ್ಯುಲ್ಯಾಡ್.

ಚದುರಂಗರ ಇನ್ನೆರಡು ಸಾಕ್ಷ್ಯಚಿತ್ರಗಳು 'ಕರ್ನಾಟಕ'ವನ್ನು ಕುರಿತಾದದ್ದು ಮತ್ತು ಖ್ಯಾತ ನೃತ್ಯಪಟು ಎಂ. ಆರ್. ವೆಂಕಟಲಕ್ಷ್ಮಮ್ಮನವರನ್ನು ಕುರಿತಂಥಾದ್ದು.

ಪೂನಾದಿಂದ ಬಂದಮೇಲೆ ಕಥೆ ಬರೆಯುವುದಕ್ಕೆ ಮನಸ್ಸುಮಾಡಿದ ಚದುರಂಗರು ತಾವು ಬರೆದ ಒಂದು ಕಥೆಯನ್ನು ಬೊಂಬಾಯಿಯ 'ಆದರ್ಶ' ಎಂಬ ಪತ್ರಿಕೆಗೆ ಕಳಿಸಿ ಪ್ರಕಟಣೆಯಾಗುವುದನ್ನು ಕುತೂಹಲದಿಂದ ಕಾಯುತ್ತ ಕುಳಿತರು. ದೇವರಾಜೇ ಅರಸು ಅವರೊಂದಿಗೆ ಒಂದು ದಿನ ಕುಳಿತಿದ್ದಾಗ ಬಂದ ಪೋಸ್ಟ್‌ಮ್ಯಾನ್ ಕಥೆ ಅಚ್ಚಾದ 'ಆದರ್ಶ' ಪತ್ರಿಕೆಯನ್ನು ನೀಡಿ, ಜೊತೆಗೆ ಚೀಲದಿಂದ ಐದು ಬೆಳ್ಳಿ ನಾಣ್ಯಗಳನ್ನು ಟಣ್‌ಟಣ್ ಎಂದು ಎಣಿಸಿ ಕಥೆಯ ಸಂಭಾವನೆಯೆಂದು ನೀಡಿದಾಗ ಅವರಿಗೆ ಆಶ್ಚರ್ಯವೋ ಆಶ್ಚರ್ಯ. ಕೂಡಲೆ ಚದುರಂಗರು ದೇವರಾಜೆ ಅರಸು ಕಡೆ ತಿರುಗಿ 'ನಡೆಯಯ್ಯ ಇಂದ್ರಭವನ್‌ಗೆ ಗುಲಾಬ್ ಜಾಮೂನು ತಿನ್ನೋಣ' ಅಂದಾಗ ಅವರಿಗಿಂತ ಆರು ತಿಂಗಳು ದೊಡ್ಡವರಾದ—

ದೇವರಾಜೆ ಅರಸು : ಮೊದಲು ಅಜ್ಜಿಗೆ ತೋರ್ಸಿ, ನಮಸ್ಕಾರ ಮಾಡಿ, ಆಶೀರ್ವಾದ ಪಡೆಯೋಣ (ಚದುರಂಗರ ತಾಯಿ ಅಕ್ಕನ ಮಗಳ ಮಗ ದೇವರಾಜೆ ಅರಸು)

ಚದುರಂಗ : ಹಾಗೆ ಆಗಲಿ

ಅಂದು ಚದುರಂಗರು ತಮ್ಮ ಮೊದಲನೆಯ ಸಂಪಾದನೆಯಾದ ಐದುರೂಪಾಯಿ ಬೆಳ್ಳಿ ನಾಣ್ಯಗಳನ್ನು ತಾಯಿಯ ಮುಂದೆ ಇರಿಸಿ ನಮಸ್ಕಾರ ಮಾಡಿದರು.

ತಾಯಿ : ನಿನ್ನ ಮೊದಲ ಸಂಪಾದನೆಯನ್ನು ಅರಿಶಿಣದ ಪಾವಡೆಯಲ್ಲಿಟ್ಟು (ನಂಜನಗೂಡಿನ) ನಂಜುಂಡೇಶ್ವರನಿಗೆ ಮುಡುಪಾಗಿ ಇಡ್ತೀನಿ.

ಗುಲಾಬ್ ಜಾಮೂನು ತಪ್ಪಿಹೋದದಕ್ಕೆ ದೇವರಾಜೆಅರಸುವಿನ ಮೇಲೆ ಚದುರಂಗರಿಗೆ ಎಲ್ಲಿಲ್ಲದ ಸಿಟ್ಟು ಬಂದಿರಬೇಕು.

'ವೈಶಾಖ" ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಾಗ

(೧೯೮೭ರಲ್ಲಿ)೫೦೦೦ ರೂಪಾಯಿ ಪ್ರಶಸ್ತಿಯು ಮೊತ್ತ. ಆ ಹಣದ ಬಗ್ಗೆ ಇಂಗ್ಲಿಷ್ ಕಾದಂಬರಿಕಾರ ಆರ್. ಕೆ. ನಾರಾಯಣ್ 'ನಿಮ್ಮಮ್ಮ ಬದುಕಿದ್ರೆ ಈ ದುಡ್ಡನ್ನ ತಿರುಪತಿ ತಿಮ್ಮಪ್ಪನಿಗೆ ಇಡ್ತಿದ್ರು' ಅಂತ ಹೇಳಿದ್ದನ್ನು ಚದುರಂಗರು ಮುಗುಳು ನಗೆಯಿಂದ ಸ್ಮರಿಸುತ್ತಾರೆ.

ಪ್ರಗತಿಶೀಲ ಮನೋಭಾವದ ಚದುರಂಗರು ಮನುಷ್ಯ ಬದುಕಿನ ಒಳಹೊರಗುಗಳನ್ನು ತಡಕಾಡುವ, ಸಾಮಾಜಿಕ ಸ್ಪಂದನೆಯುಳ್ಳ ಕಥಾವಸ್ತು ಗಳನ್ನು ತಮ್ಮ ಸಣ್ಣ ಕಥೆಗಳಲ್ಲಿ ಹಿಡಿದಿಟ್ಟಿದ್ದಾರೆ. ಹೆಣ್ಣಿನ ಮೂರು ಭಿನ್ನ ಮನೋಧರ್ಮಗಳನ್ನು ತಮ್ಮ ಕಾದಂಬರಿಗಳಲ್ಲಿ ಪ್ರಕಟಿಸಲು ಪ್ರಯತ್ನ ನಡೆಸಿದ್ದಾರೆ.

'ಸರ್ವಮಂಗಳಾ' ಕಾದಂಬರಿಯಲ್ಲಿ ಕಥಾ ನಾಯಕಿ ಸರ್ವಮಂಗಳಾ ಬದುಕಿಗೆ ಹೊಂದಿಕೊಳ್ಳುವ ಪಾತ್ರವಾಗಿ ಮೂಡಿ ಬಂದಿದ್ದರೆ, ಟಾಲ್‌ಸ್ಟಾಯ್‌ನ 'ಅನ್ನಿಕರೆನಿನಾ, ಕಾದಂಬರಿಯ ಪ್ರಭಾವ 'ಉಯ್ಯಾಲೆ'ಯಲ್ಲಿ. ಬದುಕನ್ನು ಇದ್ದಹಾಗೆ ಒಪ್ಪಿಕೊಳ್ಳಲು ಬಯಸದ, ಆದರೆ ಮಿತಿಯನ್ನು ದಾಟಲು ಧೈರ್ಯ ಸಾಲದ ಹೆಣ್ಣಿನ ಚಿತ್ರಣವನ್ನು ನೀಡಿದ್ದಾರೆ.

ಈ ಎರಡು ನಿಲುವಿಗಿಂತಲೂ ಭಿನ್ನವಾಗಿ ಬಂದ 'ವೈಶಾಖ' ಕಾದಂಬರಿ ಚದುರಂಗರ ಬದುಕಿನನುಭವದ ಗಾಢತೆಯನ್ನೂ ಹರಹನ್ನೂ ನಮಗೆ ಮನದಟ್ಟು ಮಾಡಿಕೊಡುತ್ತದೆ. ಇಲ್ಲಿನ ಕಥಾನಾಯಕಿಯಾದ ರುಕ್ಮಿಣಿ ತನ್ನ ಬಯಸಿದುದನ್ನು ಹತ್ತಿಕ್ಕಲಾರದೆ ಪ್ರಕೃತಿಯ ಕರೆಗೆ ಓಗೊಟ್ಟು, ಧೈರ್ಯವನ್ನು ಪ್ರಕಟಿಸುತ್ತಾಳೆ. ಕಾದಂಬರಿಯಲ್ಲಿ ಚದುರಂಗರು ಹೆಣ್ಣನ್ನು ಮಾನವೀಯ ಭಾವನೆಗಳೊಂದಿಗೆ ನೋಡುವ ಬಗ ಅಂದರೂ ಆದೀತು. ಸಾಕಷ್ಟು ಚರ್ಚೆಗೊ ಗಾಗಿರುವ ಕಾದಂಬರಿ ಚದುರಂಗರ ಪ್ರಗ ಪರ ಮನಸ್ಸಿನ ಮುಖವಾಣಿಯೂ ಹೌದು ತರಾಸು, ಬಸವರಾಜ ಕಟ್ಟೀಮನಿ, ನಿರಂಜನ ಈ ಮುಂತಾದವರೊಂದಿಗೆ ಪ್ರಗತಿಶೀಲ ಪಂಥದ ಹರಿಕಾರರಾದ ಚದುರಂಗರು ಆ ಪಂಥಕ್ಕಷ್ಟೇ ತಮ್ಮನ್ನು ಮೀಸಲುಗೊಳಿಸಿ ಕೊಳ್ಳದೆ ಮುಂದುವರೆದದ್ದು ಅವರ ಚಲನ ಶೀಲ ಚಿಂತನೆಯನ್ನು ಸ್ಪಷ್ಟವಾಗಿ ಹೇಳ ತ್ತದೆ. ನವ್ಯ, ಬಂಡಾಯ ಪ್ರಕಾರಗಳಲ್ಲೂ ತಮ್ಮನ್ನು ತೊಡಗಿಸಿಕೊಂಡು ಬಂದಿರುವ ಅವರು ಆದಾರಿಯಲ್ಲಿ ಕೃತಿಗಳನ್ನು ರಚಿಸಿ ದ್ದಾರೆ, ರಚಿಸುತ್ತಿದ್ದಾರೆ. [ಇತ್ತೀಚಿನ 'ಹೆಜ್ಜಾಲ' ಕಾದಂಬರಿ ಆ ದಾರಿಯಲ್ಲಿದೆ.]

ಅನಂತರ, ಕಥೆಗಳನ್ನು ಬರೆಯುತ್ತಲೆ ಬಂದ ಚದುರಂಗರು ತಮ್ಮ ಪ್ರಗತಿಪ ಚಿಂತನೆಯ ಹೊಳಹುಗಳನ್ನು ಅಲ್ಲಿ ಬಿತ್ತುತ್ತ ಮುನ್ನಡೆದರು. ಪೂರ್ಣ ಪ್ರಮಾ ಣದ ಬರಹಗಾರರಾಗಬೇಕೆಂಬ ಆ ಇತ್ತಾದರೂ, ಅದು ಕೈಗೂಡದಿರುವುದಕ್ಕೆ ಕಾರಣವಾದ ಸಂದರ್ಭವನ್ನು ಅವರ ವಿವರಿಸುವರು :

'ಬೆಂಗಳೂರಿನಲ್ಲಿದ್ದಾಗ ಒಮ್ಮೆ ಅನಕ ಮನೆಗೆ ಹೋದೆ. ಅನಕೃ ಬರೆಯು ಮೇಜಿನ ಮೇಲೆ ಅದರ ಎರಡೂ ಬದಿಗಳ ಎರಡು ಅಪೂರ್ಣವಾದ ಹಸ್ತಪ್ರತಿಗಳಿದ್ದವು ಅವನ್ನು ನೋಡಿ ಕೇಳಿದೆ–ಇದೇನಿ ಎರಡು ಹಸ್ತಪ್ರತಿಗಳಿವೆಯಲ್ಲ ?'

ಅನಕೃ: ಒಂದು ಬೆಳಗ್ಗೆ ಬರೆಯೊ ಾದಂಬರಿ ಇನ್ನೊಂದು ಸಂಜೆ ಬರೆಯೊ ಾದಂಬರಿ.

ಚದುರಂಗ: ಈ ರೀತಿ ಬರೆಯೋದು ಕಷ್ಟ ಆಗೋಲ್ವೆ? ಒಂದು ಕಾದಂಬರಿ ಪಾತ್ರ ಸನ್ನಿವೇಶ ಇನ್ನೊಂದರೊಂದಿಗೆ ಬೆರೆತು ಪರಸ್ಪರ ತೊಂದ್ರೆ ಆಗೊಲ್ವೆ?

ಅನಕೃ: ನಾನು 'ಎಚ್. ಪಿ. ಗಾಗಿ ಅಂದ್ರೆ 'ಹೊಟ್ಟೆಪಾಡಿ'ಗಾಗಿ ಬರಿತೀನಿ. ತಿಂಗಳು ಆಗ್ತಿದ್ದ ಹಾಗೆ ನನ್ನ ಹೆಂಡ್ತಿಕೈಗೆ ೫೦೦ ರೂಪಾಯಿ ಇಡಬೇಕಲ್ಲ?

'ಆದರೆ, ನನಗೆ ಆ ರೀತಿ ಬರೆಯಲು ಹೆದರಿಕೆ ಆಗಿ, ಜೀವನೋಪಾಯಕ್ಕಾಗಿ ಕಲ್ಲಳ್ಳಿಗೆ ಮರಳಿದೆ. ಪರಿಣಾಮ, ಬರವಣಿಗೆ ಅಲ್ಲಿದ್ದ ಹತ್ತು ವರ್ಷಗಳ ಕಾಲ ಸ್ತಬ್ಧ ವಾಯಿತು.

ಅಣ್ಣನ ಇಷ್ಟಕ್ಕೆ ವಿರೋಧವಾಗಿ ಬೇರೆಡೆ ಮದುವೆಯಾಗಿ, ಜೀವನೋಪಾಯಕ್ಕಾಗಿ ತಿರುಗಿ ಕಲ್ಲಳ್ಳಿಗೆ ಹೋದ ಚದುರಂಗರು ಬೇಸಾಯದಲ್ಲಿ ಅನನ್ಯವಾಗಿ ತಮ್ಮನ್ನು ತೊಡಗಿಸಿಕೊಂಡ ಕಾರಣ ಬರವಣಿಗೆ ನಿಂತು ಹೋಯಿತು. ಆದರೆ, ಭಾವನೆಗಳು ಹೋಗ ಲಿಲ್ಲ.

ಮತ್ತೆ ಹತ್ತು ವರ್ಷಗಳ ನಂತರ ಹಿಂದಿರುಗಿ ಮೈಸೂರಿಗೆ ಬಂದದ್ದಕ್ಕೆ ಕಾರಣ–ಮಗ ವಿಕ್ರಮ ರಾಜೆಅರಸನ ಓದು. ಕಲ್ಲಳ್ಳಿಯಲ್ಲಿ ವಾಸವಾಗಿದ್ದ ಕಾಲದಲ್ಲಿ ಬೇಸಾಯದ ಜೊತೆಗೆ ತಮ್ಮ ಪ್ರಗತಿಪರ ಆಲೋಚನೆ ಗಳನ್ನು ಹಳ್ಳಿಯಲ್ಲಿ ಬಿತ್ತಲು ಪ್ರಯತ್ನಿ ಸಿದರು. ಜಾತಿಯೇ ಮುಂತಾದ ಸಾಮಾಜಿಕ ಅನಿಷ್ಟಗಳ ವಿರುದ್ಧ ದನಿ ಎತ್ತಿದರು. ಸಂಪ್ರದಾಯಬದ್ಧ ಹಳ್ಳಿಗರ ಮನಸ್ಸಿನ ನಡುವೆ ಹೊಸ ಆಲೋಚನೆಗಳನ್ನು ಹುಟ್ಟು ಹಾಕಲು ಅವರು ನಡೆಸಿದ ಪ್ರಯತ್ನಗಳು ಆಂಶಿಕವಾಗಿಯಾದರೂ ಫಲ ಕೊಡದೆ ಇರಲಿಲ್ಲ. ಈ ಎಲ್ಲದರ ಅನುಭವಗಳು 'ವೈಶಾಖ' ಕಾದಂಬರಿಯಲ್ಲಿ ಗರಿಮೂಡಿ ಬಂದಿರುವುದರಿಂದಲೇ ಅದೊಂದು ಕನ್ನಡದ ಮಹತ್ವದ ಕಾದಂಬರಿಯಾಗಲು ಕಾರಣ ವಾಗಿದೆ. [ಇತ್ತೀಚಿಗೆ ಬಿಡುಗಡೆಯಾದ ದಿವಂಗತರ 'ಹೆಜ್ಜಾಲ' ಕಾದಂಬರಿಯೂ ಗ್ರಾಮೀಣ ಹಿನ್ನೆಲೆಯಿಂದ ಕೂಡಿದ ಕೃತಿ ಎಂಬುದನ್ನು ಇಲ್ಲಿ ಗಮನಿಸಬೇಕು.]

ಚದುರಂಗರ 'ಇಲಿಬೋನು' ನವ್ಯ ನಾಟಕ (ಅಸಂಗತ) ಪ್ರಕಾರಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ. 'ಇಲಿ ಬೋನು' ನಾಟಕ ಸೃಷ್ಟಿಗೊಂಡ ಪ್ರಸಂಗ ಲೇಖಕನಾದವನ ಸೃಜನಾತ್ಮಕ ಮನಸ್ಸಿಗೆ ಒಂದು ಉತ್ತಮ ನಿದರ್ಶನ ಅನ್ನಬಹುದು. ಅವರು ಹೇಳುತ್ತಾರೆ 'ಒಮ್ಮೆ ನನಗು' ನನ್ನ ಹೆಂಡ್ತಿಗು ಬಹಳ ಜಗಳ ಆಯ್ತು. ಹೆಂಡ್ತಿ ಮುನಿಸಿಗೊಂಡು ಹೋಗಿ ಮಲಗಿದಳು.

ನನಗೆ ಬೇಜಾರಾಗಿ ಮನೆಯಿಂದ ಹೊರಗೆ ಹೋಗಬೇಕು ಅಂತ ಬಂದೆ. ಹೊರಗೆ ಧಾರಾಕಾರ ಮಳೆ. ಮತ್ತೇನು ಮಾಡ್ಲಿ? ನನ್ನ ರೂಮು ಬಾಗಿಲು ಹಾಕಿ ಚಿಂತಾಕ್ರಾಂತ ನಾಗಿ ಕಾಗದದ ಮೇಲೆ ಏನೊ ಗೀಚ್ತಾ ಇದ್ದೆ. ಅಂದ್ಕೊಂಡೆ–ಒಳ್ಳೆ, ಇಲಿಬೋನಿನಲ್ಲಿ ಸಿಕ್ಕಿಹಾಕಿಕೊಂಡ ಹಾಗಾಯ್ತಲ್ಲ ನನ್ನ ಸ್ಥಿತಿ. ಹಾಗೆನ್ನುಕೊಳ್ಳುತಿದ್ದ ಹಾಗೆ ಯಾವುದೊ ಒಂದು ಎಳೆ ಸಿಕ್ಕಹಾಗಾಯಿತು. ಆ ಕೂಡಲೆ ಇಲಿಬೋನಿನ ಮನಸ್ಥಿತಿಯನ್ನೇ ಆಧರಿಸಿ ಒಂದು ನಾಟಕ ಬರೆದೆ. "ಇಲಿಬೋನು' ಅಂತ ಹೆಸರಿಸಿದೆ.

ನನ್ನ ಹಿಂದೆ ಯಾರೊ-ಆಹಾ-ಅಂತ ನಕ್ಕ ಹಾಗಾಯ್ತು. ತಿರುಗಿ ನೋಡ್ದೆ. ನನ್ನ ಹೆಂಡ್ತಿ ನಗ್ತಾ ಇದ್ದಳು. ನಾನು ಸಿಟ್ಟಿನಿಂದ ನೀನು ಎಂಥಾ ಹೆಂಗ್ಸು-ನನ್ನ ನೋಡಿ ನಗ್ತಾ ಇದ್ದೀಯಲ್ಲಾ ಅಂದೆ. ಅದಕ್ಕೆ ಅವಳಿಂದಳು-ನಾನು ಕೋಪ ಮಾಡ್ಕೊಳ್ಳದೆ ಇದ್ರೆ ನೀವು ನಾಟ್ಕ ಬರೀತಾ ಇದ್ರಾ?'' ಅಂತ.

[ಈ ಪ್ರಸಂಗವನ್ನು ನನಗೆ ತಿಳಿಸಿ, ಆ ಘಟನೆ ನೆನೆಸಿಕೊಳ್ಳುತ್ತಾ ಇಳಿವಯಸ್ಸಿನ ಈ ಮುದ್ದಣ ತನ್ನ ಆ ಮನೋರಮೆಯನ್ನು ಅಂತರಂಗದಲ್ಲಿ ಆರ್ದ್ರವಾಗಿ ನೆನೆಸಿಕೊಳ್ಳುತ್ತಲೋ ಏನೋ ಕ್ಷಣಕಾಲ ಮೌನಧಾರಿಯಾದರು-ಲೇಖಕ].

ಕಲ್ಲಳ್ಳಿಯಿಂದ ತಿರುಗಿ ಮೈಸೂರಿನಲ್ಲಿ ನೆಲೆಯೂರಿದ ಚದುರಂಗರು ಜೀವನ ನಿರ್ವಹಣೆಗಾಗಿ ಇನ್ನಿಲ್ಲದ ಪರಿಪಾಡಲು ಪಡಬೇಕಾಯಿತು. ಬರವಣಿಗೆ ಮುಂದುವರೆಸಲು ಇನ್ನು ಸಾಧ್ಯವಿಲ್ಲವೇನೊ ಅನ್ನುವ ಹಂತಕ್ಕೆ ಬಂದು ತಲುಪಿದ್ದ ಚದುರಂಗರು, ಅದರಿಂದ ಜೀವನ ನಿರ್ವಹಣೆ ಅಪೇಕ್ಷಿಸುವುದು ಅಸಾಧ್ಯವಾದ ಮಾತಾಯಿತು. ಬಹುಶಃ ನಮ್ಮ ಹಳ್ಳಿಗರ ಪರಿಸರವೆ ಹಾಗಿರಬಹುದೆ? ಹಾಗೆಂತಲೂ ಪೂರ್ಣವಾಗಿ ಹೇಳಲಾಗುವುದಿಲ್ಲ.

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಶಿವರಾಮಕಾರಂತ, ಸಿಂಪಿಲಿಂಗಣ್ಣ, ರಾವ್ ಬಹದ್ದೂರ್ ಅಂಥವರು ಹಳ್ಳಿಗಾಡಿನ ಪರಿಸರದಲ್ಲಿದ್ದೂ ತಮ್ಮ ಬರವಣಿಗೆಯ ಕಾಯಕವನ್ನು ಕಾಪಾಡಿಕೊಂಡು ಬಂದಿರುವ ನಿದರ್ಶನಗಳಿವೆ. ಆದರೂ ಬರಹವನ್ನು ಒಂದು ವೃತ್ತಿಯನ್ನಾಗಿ ಸ್ವೀಕರಿಸಿ ಹಳ್ಳಿಗಾಡಿನಲ್ಲಿರಲಿ ನಗರದಲ್ಲೂ ಜೀವನ ನಿರ್ವಹಿಸುವುದು ಅಸಾಧ್ಯವಾಗಿರುವಂಥ ಪರಿಸ್ಥಿತಿ ಈಗಲೂ ಇರುವುದು.

ಇಂಥಹುದೇ ಕಾರಣವಿರಬೇಕೆಂದು ತೋರುತ್ತದೆ-ಕಲ್ಲಹಳ್ಳಿಯಿಂದ ಬಂದ ಚದುರಂಗರು ಜೀವನ ನಿರ್ವಹಣೆಗಾ ಮೈಸೂರಿನಲ್ಲಿ ಬೇರೆ ಕೆಲಸಗಳತ್ತ ಗಮನ ಹರಿಸಿದುದು. ಬಾಡಿಗೆಗೆ ಟ್ಯಾಕ್ಸಿ ಇಟ್ಟದ್ದು ಎಲ್‌ಐಸಿ ಏಜೆಂಟರಾದದ್ದು. ಈ ವ್ಯವಹಾ ಗಳೊಂದಿಗೆ ನಿಂತುಹೋಗಿದ್ದ ತಮ್ಮ ಬರವಣಿಗೆಗೆ ಚಾಲನೆ ನೀಡಿದರು. ನಿಧಾ ವಾಗಿ ಕೃತಿಗಳು ಹೊರಬರತೊಡಗಿದವು.

ಚದುರಂಗರ ಕೃತಿಗಳು

ಕಥಾಸಂಕಲನಗಳು : ೧) ಸ್ವಪ್ನಸುಂದರಿ- ಮೊದಲ ಕೃತಿ-೧೯೪೮ ರಲ್ಲಿ ಪ್ರಕಟ ೨) ಶವದ ಮನೆ ೩) ಮೀನಿನ ಹೆಜ್ಜೆ ೪) ಇಣುಕು ನೋಟ ೫) ಬಂಗಾರದ ಗೆಜ್ಜೆ ೬) ಕ್ವಾಟೆ ೭) ಜಿಂ ಮಾನವ.

ಕಾದಂಬರಿಗಳು : ೧) ಸರ್ವಮಂಗಳಾ (೧೯೫೦). ೨) ಉಯ್ಯಾಲೆ ೩) ವೈಶಾಖ ೪) ಹೆಜ್ಜಾಲ ೧೯೯೮.

ನಾಟಕಗಳು : ೧ ಕುಮಾರರಾಮ ೨) ಇಲಿ ಬೋನು ೩) ಬಿಂಬ.

ಜೀವನಚರಿತ್ರೆ : ೧) ಕೃಷ್ಣದೇವರಾಯ ಚದುರಂಗರನ್ನು ಕುರಿತು ಪ್ರಕಟ ಗೊಂಡಿರುವ ಹೊತ್ತಗೆಗಳು ೧) ಚದುರಂಗ ವ್ಯಕ್ತಿ ಮತ್ತು ಅಭಿ ವ್ಯಕ್ತಿ ೨) ನಾವು ಕಂಡಂತೆ ಚದುರಂಗರು.

ಚದುರಂಗರನ್ನು ಅರಸಿ ಬಂದ ಪುರಸ್ಕಾರಗಳು

* 'ಸರ್ವಮಂಗಳಾ' ಚಿತ್ರಕ್ಕೆ ರಾಜ್ಯ ಪ್ರಶಸ್ತಿ
* 'ಉಯ್ಯಾಲೆ'-ಕಥೆ, ಸಂಭಾಷಣೆ ಪ್ರಶಸ್ತಿ
* ರಾಜ್ಯಸಾಹಿತ್ಯ ಅಕಾಡೆಮಿ ಪ್ರಶಸ್ತಿ– 'ವೈಶಾಖ' ಕಾದಂಬರಿಗೆ
* ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ– 'ವೈಶಾಖ' ಕಾದಂಬರಿಗೆ
* ಮೈಸೂರು ವಿಶ್ವವಿದ್ಯಾನಿಲಯದ ಗೌರವ–ಡಾಕ್ಟರೇಟ್
* ರಾಜ್ಯೋತ್ಸವ ಪ್ರಶಸ್ತಿ

ಉಪಸಂಹಾರ

ಮಿದು ಮಾತಿನ ಮೆದು ವ್ಯಕ್ತಿತ್ವದ ಚದುರಂಗರನ್ನು ವೈಯಕ್ತಿಕವಾಗಿ ನಾನು ೧೯೬೬ ರಿಂದಲೂ ಬಲ್ಲೆ. ಮಹಾರಾಜ ಕಾಲೇಜಿನಲ್ಲಿ ಬಿ ಎ ವಿದ್ಯಾರ್ಥಿ ಆಗಿದ್ದಾಗ ನಾನು ನನ್ನ ಗುರುಗಳಾಗಿದ್ದ ಕೆ. ರಾಘವೇಂದ್ರರಾವ್ ಅವರ ಮನೆಯ ಮಕ್ಕಳಿಗೆ ಮನೆಪಾಠ ಹೇಳಿಕೊಡುತ್ತಿದ್ದೆ. ಸರಸ್ವತೀಪುರದ ಈಜುಕೊಳದ ರಸ್ತೆಯಲ್ಲಿದ್ದ ಅವರ ಮನೆಗೆ ಚದುರಂಗರು ಆಗಿಂದಾಗ್ಗೆ ತಮ್ಮ ಕುಟುಂಬ ಸಮೇತರಾಗಿ ಬರುತ್ತಿದ್ದರು. ನನ್ನನ್ನು ಪ್ರೀತಿಯಿಂದ ಮೇಷ್ಟ್ರೆ ಎಂದು ಕರೆಯುತ್ತಿದ್ದರು. ಆದರೆ ವಾಸ್ತವವಾಗಿ ನಾನು ಅವರ ಮಗ ವಿಕ್ರಮರಾಜೆ ಅರಸಿನ ಸಹಪಾಠಿಯಾಗಿದ್ದೆ.

ಆಗಿನಿಂದಲೂ ನಾನು ಕಂಡ ಹಾಗೆ ಅವರು ಯಾವುದೇ ವ್ಯಕ್ತಿಯನ್ನು ಮಾತನಾಡಿಸುವ ಪರಿ ತುಂಬ ಮಾನವೀಯವಾಗಿರುತ್ತಿತ್ತು. ಮತ್ತೊಬ್ಬರ ಕಷ್ಟಸುಖಗಳನ್ನು ಪರಮಾಪ್ತತೆಯನ್ನು ಕೇಳುತ್ತಿದ್ದ ಅವರು ಸದಾ ಸಾಮಾಜಿಕ ಕಾಳಜಿಯುಳ್ಳವರಾಗಿದ್ದರು. ಮೈಸೂರು, ಮೈಸೂರು ಅರಮನೆಯ ಇತಿಹಾಸವನ್ನು ಅಚ್ಚುಕಟ್ಟಾಗಿ ತಿಳಿದುಕೊಂಡಿದ್ದ ಅವರನ್ನು ಒಬ್ಬ ಶ್ರೇಷ್ಠ ಇತಿಹಾಸಕಾರ ಅಂತ ಕರೆದರೂ ತಪ್ಪಾಗುತ್ತಿರಲಿಲ್ಲ. ಆದರೆ, ಇತಿಹಾಸವನ್ನು ದಾಖಲಿಸುವ ಅವರ ಆತ್ಮಚರಿತ್ರೆಯ ಕೆಲಸ ಆಗಲೇ ಇಲ್ಲ. ಅಷ್ಟರಮಟ್ಟಿಗೆ ನಷ್ಟವೆಂದೇ ಹೇಳಬಹುದು.

ಅವರ ಇನ್ನೊಂದು ದೊಡ್ಡ ಗುಣವೆಂದರೆ ಹಿರಿಕಿರಿಯ ಎಂಬ ಭೇದವಿಲ್ಲದೆ ಎಲ್ಲರೊಂದಿಗೂ ಬೆರೆಯುತ್ತಿದ್ದುದು. ಸಾಮಾಜಿಕ ಸಮಸ್ಯೆಗಳು ಬಂದಾಗ ಬೀದಿಗಿಳಿದು ಪ್ರತಿಭಟನೆ ಮೆರವಣಿಗೆಗಳಲ್ಲಿ ಭಾಗವಹಿಸುತ್ತಿದ್ದುದು. ತಮ್ಮ ತಾಯಿಯಿಂದ ಎರವಲಾಗಿ ಪಡೆದ ಜೀವಕಾರುಣ್ಯವನ್ನೇ ತಮ್ಮ ಸುತ್ತಲ ಪರಿಸರದಲ್ಲಿ ಪ್ರಸರಿಸುತ್ತಿದ್ದ ಚದುರಂಗರು ನಮ್ಮೆಲ್ಲರ ನೆನಪಿನ ಗಣಿಯಲ್ಲಿ ಚಿರಸ್ಥಾಯಿಯಾಗಿದ್ದಾರೆ. (ಮ. ೧೯.೧೦.೯೮)

ಮನಸ್ಸಿನಲ್ಲಿ, ಮಾತಿನಲ್ಲಿ, ಕೆಲಸದಲ್ಲಿ ಯಾರನ್ನೂ ನೋಯಿಸದಿರುವುದು, ಎಲ್ಲರನ್ನೂ ಪ್ರೀತಿಸುವುದು, ಎಲ್ಲರಿಗೂ ಒಳ್ಳೆಯದನ್ನು ಬಯಸುವುದು ಇದೇ ಅಹಿಂಸಾ ಧರ್ಮ.

—ಗಾಂಧೀಜಿ

ಹಬ್ಬದೂಟ

ಎಚ್. ಆರ್. ಚಂದ್ರವದನರಾವ್

೨೮೭೭/೧೦, ೬ನೇ ಕ್ರಾಸ್

ಚಾಮುಂಡಿಪುರಂ, ಮೈಸೂರು–೫೭೦ ೦೦೪

ನಾರ್ಮಂಡಿಯಲ್ಲಿದ್ದ ನನ್ನ ಬ್ರಹ್ಮಚಾರಿ ಚಿಕ್ಕಪ್ಪ ಜೂಲ್ಸ್ ಮನೆಗೆ ಆ ಸಂಜೆ ಹೋದೆ. ಅವನಿದ್ದುದ್ದು ಒಂದು ಕ್ಯಾಸಲ್‌ನಲ್ಲಿ, ಪುರಾತನ ಕಾಲದ್ದು. ಸುತ್ತಲೂ ಎತ್ತರಕ್ಕೆ ಬೆಳೆದ ಓಕ್ ಮತ್ತು ಪೈನ್ ಮರಗಳು. ಒಳಗಿದ್ದ ಬೆಂಚು, ಕುರ್ಚಿ, ಮೇಜುಗಳು ಹತ್ತಾರು ದಶಕಗಳ ಹಿಂದಿನ ಕೊಂಡವು. ಗೋಡೆಗಳ ಮೇಲೆ ಜೂಲ್ಸ್‌ನ ಸತ್ತ ಸಂಬಂಧಿಕರ ಆಯಿಲ್ ಪೇಯಿಂಟಿಂಗ್ಸ್.

ಜೂಲ್ಸ್ ಒಬ್ಬಳು ಅಡುಗೆಯವಳನ್ನು. ಒಬ್ಬ ಗುಮಾಸ್ತನನ್ನು ಮತ್ತು ಮನೆ ನೋಡಿಕೊಳ್ಳಲು ಒಬ್ಬಳು ಹೌಸ್ ಕೀಪರ್‌ಳನ್ನು ಇಟ್ಟುಕೊಂಡು ಕ್ಯಾಸಲ್‌ನ ಒಂದು ದೊಡ್ಡ ಕೊಠಡಿಯಲ್ಲಿರುತ್ತಿದ್ದ. ಉಳಿದ ಎಲ್ಲಾ ಕೊಠಡಿಗಳಿಗೂ ಬೀಗ ಹಾಕಿದ್ದರು. ನನಗೆ ಬೇಟೆ ಎಂದರೆ ಇಷ್ಟ. ಒಂದು ತಿಂಗಳು ಅವನೊಡನಿದ್ದು ಮುಂಜಾವಿನಿಂದ ಸಂಜೆ ವರೆಗೂ ಬೇಟೆಯಾಡುತ್ತಾ ಕಾಲ ಕಳೆಯೋಣವೆಂದು ಬಂದಿದ್ದೆ. ನಾನು ಉಳಿದುಕೊಳ್ಳಲು ಕೊಟ್ಟದ್ದು ಒಂದು ಅನುಕೂಲವಾದ ಕೊಠಡಿ. ಅದರ ಬೆಳ್ಳಗಿನ ಗೋಡೆಯ ಮೇಲೆ ಚಾವಟಿಗಳು, ಬಂದೂಕಗಳು ಮತ್ತು ಹಾರ್ನ್‌ಗಳಿದ್ದವು. ಕೊಠಡಿಯ ಒಂದು ತುದಿಯಲ್ಲಿದ್ದ ಅಗ್ನಿಗೂಡಿನಲ್ಲಿ ಬೆಂಕಿ ಉರಿಯುತ್ತಾ ವಿಚಿತ್ರವಾದ ದೃಶ್ಯಗಳನ್ನು ಬೀರುತ್ತಿತ್ತು. ನಾವು ಬೆಂಕಿಗೂಡಿನ ಮುಂದೆ ಕುಳಿತು ಮಾತನಾಡುತ್ತಾ, ಕುಡಿಯುತ್ತಾ ಇದ್ದೆವು. ಅಡುಗೆ ಮನೆಯಲ್ಲಿ ಅಡುಗೆಯವಳು ಮೊಲ ಮತ್ತು ಪಾರ್ಟ್‌ರಿಡ್ಜ್ ಹುರಿಯುತ್ತಿದ್ದಳು. ಬರುತ್ತಿದ್ದ ಘಮಘಮ ವಾಸನೆ ನಮ್ಮ ಹಸಿವನ್ನು ಹೆಚ್ಚಿಸಿತು.

ಅಡುಗೆಯವಳು ಊಟದ ತಟ್ಟೆಗಳನ್ನು ಮೇಜಿನ ಮೇಲಿಟ್ಟು "ಅಡುಗೆ ಸಿದ್ಧವಾಗಿದೆ" ಎಂದಳು.

"ಇಂದು ಕ್ರಿಸ್‌ಮಸ್ ಮುನ್ನಾದಿನ" ಎಂದು ಹೌಸ್ ಕೀಪರ್ ನಮಗೆ ಜ್ಞಾಪಿಸಿದಳು.

"ಅದಕ್ಕೇ ಇರಬೇಕು ಚರ್ಚಿನಲ್ಲಿ ದಿನವೆಲ್ಲಾ ಗಂಟೆ ಬಾರಿಸುತ್ತಿದ್ದರು" ಎಂದ ಜೂಲ್ಸ್.

"ಹೌದು, ಚರ್ಚಿನಲ್ಲಿ ಗಂಟೆ ಬಾರಿಸುವುದಕ್ಕೆ ಇನ್ನೊಂದು ಕಾರಣ ಮುದುಕ

ಮೂಲ: 'ಗಯ್ ದ ಮೊಪಾಸಾ' ಕನ್ನಡಕ್ಕೆ ಎಚ್. ಆರ್. ಚಂದ್ರವದನರಾವ್

ಫ್ಲೋರ್‌ನೆಲ್ ಸತ್ತುಹೋದ" ಎಂದಳು ಹೌಸ್‌ಕೀಪರ್. ಫ್ಲೋರ್‌ನೆಲ್ ಅಲ್ಲಿ ಎಲ್ಲರಿಗೂ ಪರಿಚಿತನಾದ ಒಬ್ಬ ದನಗಾಹಿ. ಅವನಿಗೆ ೯೬ ವರ್ಷವಾಗಿತ್ತು. ಕಾಯಿಲೆ ಬಿದ್ದಿದ್ದೇ ಇಲ್ಲ. ತಿಂಗಳ ಕೆಳಗೆ ಕತ್ತಲೆಯಲ್ಲಿ ಒಂದು ನೀರಿನ ಹೊಂಡಕ್ಕೆ ಬಿದ್ದು ನೆಗಡಿಯಾಗಿ ಜ್ವರದಿಂದ ಸತ್ತುಹೋದ.

"ನೀನು ಇಷ್ಟಪಡುವುದಾದರೆ ಅವರ ಮನೆಗೆ ಹೋಗಿ ಮನೆಯವರಿಗೆ ಸಾಂತ್ವನ ಹೇಳಿ ಬರಬಹುದು", ಎಂದ ಜೂಲ್ಸ್ ನನ್ನ ಕಡೆ ನೋಡುತ್ತ.

"ಅದಕ್ಕೇನಂತೆ? ಹೋಗಿ ಬರೋಣ" ಎಂದೆ ನಾನು. ಆ ಮುದುಕನ ಮನೆಯಲ್ಲಿ ಇದ್ದುದು ಮೂರೇ ಜನ. ೫೮ ವರ್ಷದ ಮೊಮ್ಮಗ, ಅವನಿಗಿಂತ ಒಂದು ವರ್ಷ ಕಿರಿಯವಳಾದ ಅವನ ಹೆಂಡತಿ. ಅವನ ಮಕ್ಕಳು ವರ್ಷಗಳ ಹಿಂದೆಯೇ ಸತ್ತು ಹೋಗಿದ್ದರು. ತುಂಬ ಬಡತನ, ಹಳ್ಳಿಯ ಮುಂಭಾಗದಲ್ಲಿ ಅವರ ಸಣ್ಣ ಕುಠೀರ.

ನಾವು ಊಟಮಾಡಿ ಪೈಪ್ ಸೇದುತ್ತ ಹಿಂದಿನ ಅನುಭವಗಳು, ಮುಂದೆ ಆಗಬಹುದಾದ ವಿಷಯಗಳನ್ನು ಕುರಿತು ಮಾತನಾಡುತ್ತಾ ಕುಳಿತೆವು.

"ನಾನು ಚರ್ಚಿಗೆ ಹೋಗುತ್ತೇನೆ, ಸಾರ್", ಎಂದು ಹೇಳಿದ ಜವಾನ.

"ನಾವೂ ಚರ್ಚಿಗೆ ಹೋಗೋಣ, ಹಳ್ಳಿಯಲ್ಲಿ ಚರ್ಚ್ ಸರ್ವೀಸ್ ಚೆನ್ನಾಗಿರುತ್ತದೆ" ಎಂದ ಜೂಲ್ಸ್.

ನಾನು ಒಪ್ಪಿದೆ. ಇಬ್ಬರು ಬೆಚ್ಚಗೆ ಬಟ್ಟೆ ಹಾಕಿಕೊಂಡು ಹೊರಟೆವು. ತುಂಬ ಚಳಿ, ಆದರೆ ಆಕಾಶ ನಿರ್ಮಲವಾಗಿತ್ತು. ದೂರದಲ್ಲಿ ರೈತರು ತಮ್ಮ ಮರದ ಪಾದರಕ್ಷೆಗಳನ್ನು ಹಾಕಿಕೊಂಡು, ಹೆಪ್ಪುಗಟ್ಟಿದ ನೆಲದಮೇಲೆ ಹೋಗುವ ಶಬ್ದ ಮತ್ತು ದೂರದ ಚರ್ಚಿನಲ್ಲಿ ಹೊಡೆಯುತ್ತಿದ್ದ ಗಂಟೆಯನಾದ ಕೇಳಿಸುತ್ತಿತ್ತು. ರೈತರು ಕೈಯಲ್ಲಿ ಹಿಡಿದುಕೊಂಡು ಹೋಗುತ್ತಿದ್ದ ದೀಪಗಳು ದೂರಕ್ಕೆ ಬೆಳಕು ನೃತ್ಯ ಮಾಡುತ್ತಿರುವಂತೆ ಕಾಣಿಸುತ್ತಿತ್ತು.

ನಾವು ಹಳ್ಳಿಯ ತುದಿಗೆ ಬಂದೆವು. ಅಲ್ಲಿದ್ದ ಸಣ್ಣಮನೆಯೊಂದನ್ನು ತೋರಿಸಿ, ಜೂಲ್ಸ್, "ಇಲ್ಲೇ ಫ್ಲೋರ್‌ನೆಲ್ ಸಂಸಾರ ಇರುವುದು" ಎಂದ.

ನಾವು ಮನೆಯ ಬಾಗಿಲನ್ನು ಎರಡು, ಮೂರುಬಾರಿ ಬಡಿದೆವು. ಯಾರೂ ಬರಲಿಲ್ಲ. ಪಕ್ಕದ ಮನೆಯ ರೈತ ಹೇಳಿದ— "ಸತ್ತ ತಾತನ ಬಗ್ಗೆ ಪ್ರಾರ್ಥಿಸಲು ಮನೆಯವರು ಚರ್ಚಿಗೆ ಹೋಗಿರಬೇಕು."

"ವಾಪಸ್ಸು ಬರುವಾಗ ನೋಡೋಣ" ಎಂದ ಜೂಲ್ಸ್.

ನಾವು ಚರ್ಚಿಗೆ ಹೋದಾಗ ಆಗತಾನೆ ಸರ್ವೀಸ್ ಪ್ರಾರಂಭವಾಗಿತ್ತು. ಸಣ್ಣ ಸಣ್ಣ ಉರಿಯುತ್ತಿರುವ ಮೇಣದ ಬತ್ತಿಯನ್ನು ಎಲ್ಲ ಕಡೆ ಹಚ್ಚಿಟ್ಟು, ಚರ್ಚ್‌ನ್ನು ಸಿಂಗರಿಸಿದ್ದರು. ಚರ್ಚಿನ ಎಡಭಾಗದಲ್ಲಿದ್ದ ಸಣ್ಣ ಚಾಪೆಲ್‌ನಲ್ಲಿ ಗಿಡಮರಗಳ ಹಿನ್ನೆಲೆಕೊಟ್ಟು ಮೇಣದಲ್ಲಿ ಶಿಶು ಕ್ರಿಸ್ತನನ್ನು ಮಾಡಿಟ್ಟಿದ್ದರು. ಅದನ್ನು ನೋಡಲು ತುಂಬ ಜನ ಸೇರಿದ್ದರು. ಹೆಂಗಸರು ಮೊಣಕಾಲೂರಿ, ಹಸ್ತಗಳನ್ನು ಜೋಡಿಸಿ ಭಕ್ತಿಯಿಂದ ಪ್ರಾರ್ಥಿಸುತ್ತಿದ್ದರು. ನಾವು ಸಲ್ಪ ಹೊತ್ತು ಅಲ್ಲಿ ಇದ್ದೆವು. ಉಸಿರು ಕಟ್ಟುವ ಹಾಗಾದುದರಿಂದ ನಾವು ಸ್ವಲ್ಪ ಹೊತ್ತಿನಲ್ಲಿಯೇ ಹೊರಬಂದೆವು. ಚರ್ಚಿನ ಹೊರಗೆ ಸ್ವಲ್ಪ ಹೊತ್ತು ನಿಂತು ಮಾತನಾಡುತ್ತ, ನಿಧಾನ

ವಾಗಿ ನಡೆದು ಹಳ್ಳಿಯ ಮುಂಭಾಗಕ್ಕೆ ಬಂದೆವು. "ಫೋರ್‌ನೆಲ್ ಮನೆಯ ಬಾಗಿಲಿನ ಸಂದಿಯಿಂದ ಬೆಳಕು ಕಾಣಿಸುತ್ತಿತ್ತು. ನಾವು ಮನೆಗೆ ಹೋದೆವು. ಎತ್ತರವಿಲ್ಲದ ಮೇಲ್ಛಾವಣಿಯ ಕತ್ತಲೆಯ ಪಡಸಾಲೆಯ ಮಧ್ಯದಲ್ಲಿ ಒಂದು ದೊಡ್ಡ ಅಂದವಲ್ಲದ ಪೆಟ್ಟಿಗೆಯ ಮೇಲೆ ಹಚ್ಚಿಟ್ಟದ್ದ ಮೇಣದ ಬತ್ತಿ ಹೊಗೆಕಾರುತ್ತಾ ಉರಿಯುತ್ತಿತ್ತು. ಒಳಗೆ ರಕ್ತ ಸುಟ್ಟವಾಸನೆ. ಫೋರ್‌ನೆಲ್ ದಂಪತಿಗಳು ಒಬ್ಬರೆದುರಿಗೊಬ್ಬರು ಕುಳಿತಿದ್ದರು. ದುಃಖತಪ್ತ ಮುಖಗಳು. ಪೆಟ್ಟಿಗೆಯ ಮೇಲಿದ್ದ ಒಂದು ತಟ್ಟೆಯಲ್ಲಿ ಕ್ರಿಸ್‌ಮಸ್ ಮುನ್ನಾದಿನ ಮಾಡುವ ಕಡುಬು. ಅದನ್ನು ಇಬ್ಬರು ಕತ್ತರಿಸಿಕೊಂಡು ತಿನ್ನುತ್ತಿದ್ದರು. ಪಕ್ಕದಲ್ಲಿ ಸಿಡಾರ್ ತುಂಬಿದ ಗ್ಲಾಸುಗಳು, ಅವರು ನಮ್ಮನ್ನು ಊಟಕ್ಕೆ ಆಹ್ವಾನಿಸಿದರು. ನಾವು ಬೇಡವೆಂದಾಗ ಅವರು ತಿನ್ನುವುದನ್ನು ಮುಂದುವರೆಸಿದರು. ಸ್ವಲ್ಪ ನಿಮಿಷಗಳ ನಿಶ್ಶಬ್ದದ ತರುವಾಯ ಜೂಲ್ಸ್, "ಆ್ಯನ್‌ಥೀಮ್, ನಿನ್ನ ತಾತ ಯಾವಾಗ ಸತ್ತುಹೋದರು?" ಎಂದ.

"ಮಧ್ಯಾಹ್ನ ಸತ್ತುಹೋದರು."

"ವಯಸ್ಸಾಗಿತ್ತು ಅಲ್ಲವೇ?" ಎಂದೆ ನಾನು.

"ಹೌದು. ಅವರ ಕಾಲ ಮುಗಿದಿತ್ತು. ಬದುಕಿದ್ದು ಏನೂ ಮಾಡಬೇಕಾಗಿರಲಿಲ್ಲ".

ನನಗೆ ಇದ್ದಕ್ಕಿದ್ದಂತೆ ಆ ಸತ್ತ ಮುದುಕನನ್ನು ನೋಡಬೇಕೆನ್ನಿಸಿತು.

"ಶವವನ್ನು ನೋಡಬೇಕು", ಎಂದ ಕೂಡಲೆ ಆ ಇಬ್ಬರು ರೈತರಿಗೂ ಗಾಬರಿಯಾಯಿತು.

"ನೋಡಿ ಏನು ಪ್ರಯೋಜನ?" ಎಂದ ಫೋರ್‌ನೆಲ್.

"ಏನಿಲ್ಲ. ಆದರೆ ನೋಡಬೇಕೆಂಬ ಇಚ್ಛೆಯನ್ನು ನೀವೇಕೆ ತಡೆಗಟ್ಟುವುದು?"

"ತಕ್ಷಣವೇ ಶವವನ್ನು ತೋರಿಸಲು ಸಾಧ್ಯವಿಲ್ಲ" ಎಂದ ಭುಜ ಕುಣಿಸುತ್ತ ಫೋರ್‌ನೆಲ್.

ಅವನು ಹೇಳಿದ್ದು ಕೇಳಿ ನಮಗೆ ಆಶ್ಚರ್ಯ. ಏಕೆ ಹೀಗೆ ಹೇಳುತ್ತಿದ್ದಾನೆಂದು ಅರ್ಥವಾಗಲಿಲ್ಲ. ಗಂಡ ಹೆಂಡಿರಿಬ್ಬರು ಮಾತನಾಡದೆ ನೆಲ ನೋಡುತ್ತಿದ್ದರು. ಅವರ ಮುಖದಲ್ಲಿ "ತೊಲಗಾಚೆ" ಎನ್ನುವ ಮುಖಭಾವವಿತ್ತು.

"ಆ್ಯನ್‌ಥೀಮ್ ನಮ್ಮನ್ನು ಮೃತದೇಹ ವಿಟ್ಟಿರುವ ಕೊಠಡಿಗೆ ಕರೆದುಕೊಂಡು ಹೋಗು", ಎಂದ ಜೂಲ್ಸ್.

"ಶವ ಕೊಠಡಿಯಲ್ಲಿಲ್ಲ".

"ಹಾಗಾದರೆ ಶವ ಎಲ್ಲಿದೆ?"

ಅವನ ಹೆಂಡತಿ ಹೇಳಿದಳು, "ನೋಡಿ ಹೆಣವಿಡುವುದಕ್ಕೆ ಎಲ್ಲಿದೆ ಜಾಗ? ಶವವನ್ನು ಈ ಪೆಟ್ಟಿಗೆಯಲ್ಲಿಟ್ಟಿದ್ದೇವೆ," ಎನ್ನುತ್ತ ತಾವು ಮೇಜನ್ನಾಗಿ ಮಾಡಿಕೊಂಡಿದ್ದ ಪೆಟ್ಟಿಗೆಯ ಬಾಗಿಲನ್ನು ತೆಗೆದು ಉರಿಯುವ ಮೇಣದ ಬತ್ತಿಯನ್ನು ಒಳಗೆ ತೋರಿಸಿದಳು.

ಹೌದು, ಒಳಗೆ ಮುದುಕನ ಶವವಿತ್ತು. ಕೈಕಾಲುಗಳನ್ನು ಮಡಿಸಿದ್ದಾರೆ, ಕೂದಲು ಜಟೆ ಕಟ್ಟಿದೆ. ಶವಕ್ಕೆ ಕುರುಬನ ಬಟ್ಟೆ ತೊಡಿಸಿದೆ. ಅವನ ಮೊಮ್ಮಗ ಶವವನ್ನು ಪೆಟ್ಟಿಗೆಯಲ್ಲಿಟ್ಟು ಅದನ್ನೇ ಮೇಜುಮಾಡಿ, ಆ ಮೇಜಿನ ಮೇಲೆ ತಟ್ಟೆ ಇಟ್ಟುಕೊಂಡು ಹೆಂಡತಿಯೊಡನೆ ತಿನ್ನುತ್ತಿದ್ದ.

"ಪಾಪಿಗಳೇ, ಹೆಣವನ್ನು ಇಲ್ಲೇಕೆ ಇಟ್ಟಿರಿ? ಶವವನ್ನು ಮಂಚದ ಮೇಲೆಯೇ ಬಿಟ್ಟಿದ್ದರೆ ನಿಮಗೇನಾಗುತ್ತಿತ್ತು? ಎಂದ ಜೂಲ್ಸ್ ತನ್ನ ಕೋಪ ತೋರಿಸುತ್ತ.

ಅವಳು ಅಳುತ್ತಾ ಹೇಳಿದಳು—"ನೋಡಿ ನಮ್ಮಲ್ಲಿರುವುದು ಒಂದು ಮಂಚ ಮಾತ್ರ. ನಾವು ಮೂರು ಜನವೂ ಆ ಮಂಚದಮೇಲೆ ಮಲಗುತ್ತಿದ್ದೆವು. ತಾತನಿಗೆ ತುಂಬ ಕಾಯಿಲೆ ಬಂದಾಗಿನಿಂದ, ನಾವು ಮಲಗುತ್ತಿದ್ದುದು ನೆಲದ ಮೇಲೆ. ಈ ಚಳಿಗಾಲದಲ್ಲಿ ನೆಲ ಎಷ್ಟು ಕೊರೆಯುತ್ತದೆ ನಿಮಗೆಗೊತ್ತು. ಆದ್ದರಿಂದ ಅವರು ಸತ್ತುಹೋದಾಗ ನಾವು, "ಹೆಣಕ್ಕೆ ಏನಾದರು ಸ್ಪರ್ಶಜ್ಞಾನ ಇರುತ್ತದೆಯೇ? ಅದನ್ನು ಮಂಚದ ಮೇಲೆ ಏಕೆ ಬಿಟ್ಟಿರಬೇಕು? ಮರದ ಪೆಟ್ಟಿಗೆಯಲ್ಲಿ ಹಾಕೋಣ" ಎಂದುಕೊಂಡ್ವಿ. ನಾವು ಹೆಣದ ಜೊತೆ ಮಲಗಿಕೊಳ್ಳುವುದಕ್ಕಾಗುತ್ತದೆಯೇ? ಈಗ ನಾವು ಮಂಚದ ಮೇಲೆ ಮಲಗಬಹುದು."

ಇದನ್ನು ಕೇಳಿಸಿಕೊಂಡ ನಾವು ಕೂಡಲೆ ವ್ಯಾಕುಲದಿಂದ ಮನೆ ಬಿಟ್ಟೆವು.



ಸತ್ಯವನ್ನೇ ಹೇಳಬೇಕು. ಕೋಪ ಮಾಡಿಕೊಳ್ಳಬಾರದು. ಯಾರಾದರೂ ಸ್ವಲ್ಪ ಕೇಳಿದರೂ ಹೆಚ್ಚಾಗಿಯೇ ಕೊಡಬೇಕು. ಈ ಮೂರನ್ನು ಮಾಡಿದರೆ ದೇವತೆಗಳ ಸಮೀಪಕ್ಕೆ ಹೋಗಬಹುದು.

ಪಾಪದಿಂದ ದುಃಖ ಹುಟ್ಟುತ್ತದೆ; ಪುಣ್ಯದಿಂದ ಸುಖ ಹುಟ್ಟುತ್ತದೆ.

—ಬುದ್ಧ

ದೇಜಗೌರವರ ಅನುವಾದಿತ ಕೃತಿ "ಯುದ್ಧ ಮತ್ತು ಶಾಂತಿ"

ಅ. ರಾ. ಮಂಜುನಾಥ್
ಆಪ್ತ ಕಾರ್ಯದರ್ಶಿ
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು
ಕರ್ನಾಟಕ ಸರ್ಕಾರ, ಬೆಂಗಳೂರು

(ಕಳೆದ ಸಂಚಿಕೆಯಿಂದ)

೭. ದೇಜಗೌ ಅವರ "ಯುದ್ಧ ಮತ್ತು ಶಾಂತಿ" ಅನುವಾದದ ಮಹತ್ವ

ದೇಜಗೌರವರ "ಯುದ್ಧ ಮತ್ತು ಶಾಂತಿ"ಯ ಅನುವಾದ ಟಾಲ್‌ಸ್ಟಾಯ್‌ರ ಮೂಲಕೃತಿಗೆ ಎಲ್ಲೂ ಅಪಚಾರ ಮಾಡಿಲ್ಲ. ಅನುವಾದ ಮೂಲಕೃತಿಯನ್ನು ಯಥಾವತ್ತಾಗಿ ಪ್ರತಿಬಿಂಬಿಸುತ್ತದೆ. ರಷ್ಯನ್ ಪಾತ್ರಗಳು ಹಾಗೂ ಐರೋಪ್ಯ ಸನ್ನಿವೇಶಗಳನ್ನು ಬಿಟ್ಟರೆ ಇಡೀ ಕಾದಂಬರಿ ಮಾನವೀಯ ಮೌಲ್ಯಗಳನ್ನು ಒಳಗೊಂಡ ಚಾರಿತ್ರಿಕ ಕಾದಂಬರಿಯಾಗಿರುವಂತೆಯೇ ಜನಸಾಮಾನ್ಯರ ದೈನಂದಿನ ಬದುಕಿನ ಸಾಮಾನ್ಯ ಘಟನಾವಳಿಗಳನ್ನು ನಮ್ಮ ಮುಂದಿಡುತ್ತದೆ. ಹೆಸರು ಮತ್ತು ಸನ್ನಿವೇಶಗಳನ್ನು ಕನ್ನಡೀಕರಿಸಿದ್ದಲ್ಲಿ ಇದು ಕನ್ನಡ ನಾಡಿನ ನೆಲದಿಂದ ಚಿಮ್ಮಿದ ಘಟನಾವಳಿಗಳ ಬೃಹತ್ ಕಾದಂಬರಿ ಎಂದು ಕರೆಸಿಕೊಳ್ಳುತ್ತಿತ್ತು. ಆದಾಗ್ಯೂ ಇದು ಕಾಲಾತೀತ, ದೇಶಾತೀತ, ಭಾಷಾತೀತವಾದುದು. ಇದನ್ನು ಓದುವಾಗ ಒಂದು ಭಾಷಾಂತರ ಕೃತಿಯನ್ನು ಓದಿದಂತೆ ಅನಿಸುವುದಿಲ್ಲ. ಮೂಲ ಸ್ವತಂತ್ರ ಕೃತಿಯನ ಓದಿದ ಭಾವನೆ ಬರುತ್ತದೆ. ಸರಾಗವಾ ಮೂರು ಸಂಪುಟಗಳನ್ನು ಓದಿಸಿಕೊಂಡ ಹೋಗುತ್ತದೆ. ಕಾದಂಬರಿಯಲ್ಲಿ ಬರು ಪೀಟರ್, ಆಂಡ್ರ್ಯೂ, ನತಾಷ್ಟ ಇವರುಗ ನಮ್ಮ ಮನೆಯ, ನೆರೆಮನೆಯ ಮಕ್ಕಳಂ ಕಾಣುತ್ತಾರೆ. ಇಡೀ ಕಥೆ ರಷ್ಯಾಕ್ಕೆ ಮಾ ಸೀಮಿತವಾಗದೇ ನಮ್ಮ ಪರಿಸರಕ್ಕೂ ಸಹ ವಾಗಿ ಹೊಂದಿಕೊಳ್ಳುತ್ತದೆ. ಇ ಕಾದಂಬರಿಯಲ್ಲಿರುವ ಒಂದು ವಿಶೇಷ ಎಂದರೆ ಅದನ್ನು ಓದುವಾಗ ಸಂಗೀತವನ ಕೇಳುವಾಗ ಸಿಗುವ ಆನಂದ ಸಿಗುತ್ತ ಕಾದಂಬರಿ ಓದಿ ಮುಗಿಸಿದ ನಂತರ ಅಲ್ಲಿಯ ಘಟನಾವಳಿಗಳು ಮನಸ್ಸಿನ ಮೇ ಸಂಗೀತದಂತೆ ಗುಣುಗುಟ್ಟುತ್ತಿರುತ್ತ ಮೂರು ಸಂಪುಟಗಳ ಮೇರು ಕೃತಿಯನ ಓದಿದಾಗ ಮನಸ್ಸಿನ ಮೇಲೆ ಆಘಾತ ಪರಿಣಾಮವಾಗಿ ಅದರ ಪ್ರಭಾವ ಅನೇ ದಿನಗಳು ನಮ್ಮ ಮೇಲಿರುತ್ತವೆ. ಪ್ರಾಯ ಒಂದು ಕೃತಿಯ ಶ್ರೇಷ್ಠತೆ ಅದು ಎಷ್ಟು ದ ಓದುಗನ ಮನಸ್ಸಿನ ಮೇಲೆ ಪರಿಣಾ

ೀರಬಲ್ಲದೆನ್ನುವುದನ್ನು ಅವಲಂಬಿಸಿರು ್ದೆ. ಅಂತಹ ಅಗಾಧ ಪರಿಣಾಮ "ಯುದ್ಧ ುತ್ತು ಶಾಂತಿ" ಮಾಡುತ್ತದೆ.

ಈ ಕಾದಂಬರಿ ಪೂರ್ತಿ ಅದ್ಭುತ ವಿಚಾರ ಳು ತುಂಬಿಕೊಂಡಿದ್ದು ಇದನ್ನು ಭಗವದ್ಗೀತೆ ುಂತಾದ ಧರ್ಮಗ್ರಂಥಗಳ ಮಟ್ಟಕ್ಕೆ ರಿಸುತ್ತದೆ. "ಯುದ್ಧ ಮತ್ತು ಶಾಂತಿ" ಾದಂಬರಿಯನ್ನು ಟಾಲ್‌ಸ್ಟಾಯ್‌ನಂತಹ ಬ್ಬ ಮಹಾನ್ ದಾರ್ಶನಿಕನಿಗೆ ಮಾತ್ರ ರೆಯಲು ಹೇಗೆ ಸಾಧ್ಯವಾಯಿತೋ ಾಗೆಯೇ ಇದರ ಭಾಷಾಂತರ ದೇಜಗೌ ಂತಹ ಕನ್ನಡದ ಸೇನಾನಿಗೆ ಮಾತ್ರ ಸಾಧ್ಯ ಾಗಿದೆ. ಜೀವನದ ವಿವಿಧ ಸ್ಥಾನಗಳಲ್ಲಿ ೋವು ನಲಿವುಗಳನ್ನು ಕಂಡು ಪಕ್ವವಾದ ತನ್ನ ಬದುಕಿನ ಇಳಿಯ ವಯಸ್ಸಿನಲ್ಲಿ ಈ ಕೃತಿಯನ್ನು ಭಾಷಾಂತರಿಸಿದ್ದು ಕುವೆಂಪುರವ ಂದ "ರಾಮಾಯಣ ದರ್ಶನಂ" ಹೊರ ಬಂದಷ್ಟೇ ಮಹತ್ವವಾದದ್ದು. ದೇಜಗೌ ಇದನ್ನು ಕನ್ನಡೀಕರಿಸದಿದ್ದಲ್ಲಿ ಇದು ಕನ್ನಡಿ ಗೆ ತುಂಬಲಾರದ ನಷ್ಟವಾಗುತ್ತಿತ್ತು. ಹೇಗೆ ಒಬ್ಬ ಕುವೆಂಪು ಮಾತ್ರ "ರಾಮಾಯಣ ದರ್ಶನಂ" ಬರೆಯಬಲ್ಲನೋ ಹಾಗೆಯೇ, ಒಬ್ಬ ದೇಜಗೌ ಮಾತ್ರ "ಯುದ್ಧ ಮತ್ತು ಶಾಂತಿ"ಯನ್ನು ಕನ್ನಡೀಕರಿಸಬಲ್ಲನು. ಬೇರೆ ಯವರಿಂದ ಇದು ದುಸ್ಸಾಧ್ಯ. ಈ ಕೃತಿ ಯನ್ನು ಓದಿದ ನಂತರ ಕೆಲವು ದಿನ ಬೇರಾವ ಕೃತಿಯನ್ನು ಓದಲು ಸಾಧ್ಯವಾಗುವುದಿಲ್ಲ. ನಮ್ಮ ಮನಸ್ಸಿನಲ್ಲಿ ಒಂದು ದೊಡ್ಡ ಯುದ್ಧ ನಡೆದು ಶಾಂತಿ ನಿಧಾನವಾಗಿ ಆವರಿಸಿ ಕೊಳ್ಳುತ್ತಾ ಹೋಗುತ್ತದೆ. ಆ ಸಮಯದಲ್ಲಿ ಬೇರೆ ಯಾವುದಕ್ಕೂ ಜಾಗವಿರುವುದಿಲ್ಲ. ಎಲ್ಲಾ ಪಾತ್ರಗಳು ಜೀವಂತವಾಗಿ ನಮ್ಮ ಮನಸ್ಸಿನ ಆಳಕ್ಕೆ ಇಳಿದಿರುತ್ತವೆ. ಪ್ರಾಯಶಃ ಇಷ್ಟೊಂದು ಪ್ರಭಾವ ಬೇರೆ ಯಾವ ಕಾದಂಬರಿಯೂ ಬೀರಲಾರದು. ನನ್ನ ಮಟ್ಟಿಗೆ ಹೇಳುವುದಾದರೆ ಭೈರಪ್ಪನವರ ಕೆಲವು ಕಾದಂಬರಿಗಳನ್ನು ಬಿಟ್ಟರೆ, "ಯುದ್ಧ ಮತ್ತು ಶಾಂತಿ" ನನ್ನ ಮೇಲೆ ಬೀರಿದಷ್ಟು ಪ್ರಭಾವ ಬೇರಾವ ಕೃತಿಯೂ ಬೀರಿಲ್ಲ.

ದೇಜಗೌ ಭಾಷಾಂತರಕ್ಕೆ ಆಯ್ದು ಕೊಂಡದ್ದು ಸಣ್ಣ ಕೃತಿಯನ್ನೇನೂ ಅಲ್ಲ. ವಿಷಯದ ದೃಷ್ಟಿಯಿಂದ ಗಾತ್ರದ ದೃಷ್ಟಿ ಯಿಂದ ಮಹತ್ವವೆನಿಸಿದ ಹಾಗೂ ಈ ಶತ ಮಾನದ ಒಬ್ಬ ಶ್ರೇಷ್ಠ ಸಾಹಿತಿಯ ಮಹಾನ್ ಕೃತಿಯನ್ನು ಅಷ್ಟೇ ಸಮರ್ಥವಾಗಿ ಕನ್ನಡ ಭಾಷೆಯಲ್ಲಿ ಮೂಡಿಸಿರುವುದು ಸಾಮಾನ್ಯ ಸಾಧನೆ ಏನೂ ಅಲ್ಲ. ಮೂಲ ಕೃತಿಯ ಉದ್ದೇಶಕ್ಕೆ ಕಿಂಚಿತ್ತೂ ಲೋಪವಾಗದಂತೆ ಅನುವಾದ ಕಲೆ ಇಲ್ಲಿ ಕರಗತವಾಗಿರುವುದು ಕಂಡು ಬರುತ್ತದೆ. "ಮನುಷ್ಯ ಜಾತಿ ತಾನೊಂದೇ ವಲಂ" ಎಂಬ ಪಂಪನವಾಣಿ ಯನ್ನು ಸಂಸ್ಥಾಪಿಸುವ ಅಪೂರ್ವಕಲೆ ಇಲ್ಲಿ ವ್ಯಕ್ತವಾಗಿದೆ. ಐರೋಪ್ಯ ಜನಾಂಗದ ಆಲೋಚನೆಗಳನ್ನು ಕನ್ನಡಿಗರಿಗೆ ಹರಿಯಿಸಿ, ವೈಚಾರಿಕ ಕ್ರಾಂತಿಯನ್ನು ರೂಪಿಸಿ, ಮನಸ್ಸಿಗೆ ಹೊಸತನ ತುಂಬುವ ಪ್ರಕ್ರಿಯೆ ಇಲ್ಲಿ ನಡೆದಿದೆ. ಕನ್ನಡ ಸಾಹಿತ್ಯವನ್ನು ಸಂಪದ್ಯುಕ್ತಗೊಳಿಸಿ ಅದರ ಗಡಿಯನ್ನು ವಿಸ್ತರಿಸಿ ಲೋಕ ಸಾಹಿತ್ಯದ ವಿಸ್ತಾರಗಳನ್ನು ನಮಗೆ ಲಭ್ಯವಾಗುವಂತೆ ಇಲ್ಲಿ ಮಾಡಲಾ ಗಿದೆ.

ದೇಜಗೌರವರ "ಯುದ್ಧ ಮತ್ತು ಶಾಂತಿ"ಯ ಅನುವಾದದ ಕಾಲವೂ ಬಹಳ ಮಹತ್ವವಾದುದು. ಸಾಮಾನ್ಯವಾಗಿ ಒಬ

ಸೃಜನಶೀಲ ಸಾಹಿತಿ ತನ್ನ ಸಾಹಿತ್ಯ ಬದುಕಿನ ಮೊದಲ ದಿನಗಳಲ್ಲಿ ಭಾಷಾಂತರದಲ್ಲಿ ಕೈಯಾಡಿಸುತ್ತಾನೆ. ನಂತರ ತನ್ನದೇ ಕೃತಿಗಳ ರಚನೆಗೆ ಮುಂದಾಗುತ್ತಾನೆ. ಇದನ್ನು ನಾವು ಸಾಹಿತ್ಯ ಇತಿಹಾಸದಲ್ಲಿ ಕಾಣುತ್ತೇವೆ. ಆದರೆ ದೇಜಗೌರವರು "ಯುದ್ಧ ಮತ್ತು ಶಾಂತಿ"ಯ ಅನುವಾದಕ್ಕೆ ಕೈ ಹಾಕಿದ್ದು ತಮ್ಮ ಸಾಹಿತ್ಯ ಬದುಕಿನ ವಿವಿಧ ಸ್ಥರಗಳನ್ನು ಮುಟ್ಟಿ, ಮೆಟ್ಟಿ, ಮೇಲೇರಿ, ಅನುಭವದ ಕೊಡ ತುಂಬಿದ ಮೇಲೆ. ಟಾಲ್‌ಸ್ಟಾಯ್ ನಂತಹ ಒಬ್ಬ ದಾರ್ಶನಿಕನ ಮಹತ್ಕಾದಂಬರಿಯನ್ನು ಅರ್ಥೈಸಿಕೊಂಡು, ತನ್ನದಾಗಿಸಿಕೊಂಡು, ಅದನ್ನು ಅಷ್ಟೇ ಗಂಭೀರವಾಗಿ ಕನ್ನಡದಲ್ಲಿ ಮೂಲಕ್ಕೆ ಚಾಚೂ ಚ್ಯುತಿ ಬಾರದಂತೆ ಮೂಡಿಸಿರುವುದು ದೇಜಗೌರವರಂತವರಿಗೆ ಮಾತ್ರ ಸಾಧ್ಯ. ಬೇರಾರೂ ಈ ಸಾಹಸಕ್ಕೆ ಕೈಹಾಕುವ ಪ್ರಯತ್ನ ಮಾಡದಿದ್ದುದೇ ಇದಕ್ಕೆ ಸಾಕ್ಷಿ. ಪ್ರಾಯಶಃ ಬೇರೆ ಯಾರಾದರೂ ಈ ಪ್ರಯತ್ನ ಮಾಡಿದ್ದರೂ ಈ ಮಟ್ಟದ ಶ್ರೇಷ್ಠ ಕೊಡುಗೆ ನೀಡುವುದು ಕಷ್ಟಸಾಧ್ಯವಾಗುತ್ತಿತ್ತು. ಏಕೆಂದರೆ ದೇಜಗೌರವರ ಬದುಕಿನ ಅನುಭವ, ಅವರ ಲೇಖನಿಗಿದ್ದ ಪ್ರೌಢತೆ, ಅವರನ್ನು ಟಾಲ್‌ಸ್ಟಾಯ್ ಮಟ್ಟಕ್ಕೆ ಏರಿಸಿ ಇಂತಹ ಮಹತ್ಸಾದನೆಗೆ ಕಾರಣವಾಯಿತು. ಆದಕ್ಕೆ ಕುವೆಂಪು ಹೇಳಿದ್ದು "ನಿಮ್ಮ ಜನ್ಮ ಸಾರ್ಥಕವಾಯಿತು" ಎಂದು. "ಯುದ್ಧ ಮತ್ತು ಶಾಂತಿ" ದೇಜಗೌರವರ ಎಲ್ಲಾ ಕೃತಿಗಳಿಗೆ ಕಿರೀಟಪ್ರಾಯವಾಗಿದೆ ಎಂದು ನಿಸ್ಸಂದೇಹವಾಗಿ ಹೇಳಬಹುದು.

೮. "ಯುದ್ಧ ಮತ್ತು ಶಾಂತಿ" ಒಂದು ಉತ್ತಮ ಅನುವಾದ—ಹೇಗೆ

ಭಾಷಾಂತರ ಯಾವುದೇ ಉಚ್ಛ್ರಾಯ ಹಾಗೂ ಅವನತಿಯ ಸ್ಥಿತಿಯನ್ನು ಮಹತ್ವಪಾತ್ರ ವಹಿಸುತ್ತದೆ. ಸಾಹಿತ್ಯಕ್ಕಿರುವ ಪರಿಪೂರ್ಣತೆಯ ಹಂಬಲ. ಹೊಸ ಅನುಭವಗಳ ಕಾತರ. ರಸಾನುಭೂತಿಯ ಅಭೀಪ್ಸೆ, ಜ್ಞಾನ ಸೃಷ್ಟಿ—ಇವುಗಳಿಂದಾಗಿ ಅನುವಾದದ ಆಗಮನವಾಗುತ್ತದೆ. ಹೊಸ ನಿಧಿಗಳ ಶೋಧನೆ ಜೊತೆಗೆ ಅಪರಿಚಿತವಾದ ವೈಭವ ವಿಸ್ಮಯಗಳು ನಮಗೆ ಲಭಿಸುತ್ತವೆ. "ಯುದ್ಧ ಮತ್ತು ಶಾಂತಿ" ಕೂಡ ರಷ್ಯನ್ ಸಂಸ್ಕೃತಿಯ ಉಚ್ಛ್ರಾಯ ಹಾಗೂ ಅವನತಿಯ ಸ್ಥಿತಿಯನ್ನು ನಮಗೆ ತಿಳಿಸಿ ಕನ್ನಡಿಗರಾದ ನಮ್ಮನ್ನು ಬಡಿದೆಬ್ಬಿಸುತ್ತದೆ. ನಾವು ಎತ್ತ ಸಾಗುತ್ತಿದ್ದೇವೆಂದು ಮುಟ್ಟಿನೋಡಿಕೊಳ್ಳುವಂತೆ ಮಾಡುತ್ತದೆ. ಹೊಸ ಅನುಭವಗಳ ಪರಿಚಯ, ಹೊಸ ನಿಧಿಗಳ ಶೋಧನೆ ಅಪರಿಚಿತ ವೈಭವ, ವಿಸ್ಮಯಗಳು ದೇಜಗೌರವರ "ಯುದ್ಧ ಮತ್ತು ಶಾಂತಿ"ಯಲ್ಲಿ ನಮಗೆ ಕಾಣಸಿಗುತ್ತದೆ. ಹೋಮರನ ಕಾವ್ಯವನ್ನು ಚಾಪ್‌ಮನ್‌ನ ಅನುವಾದದಲ್ಲಿ ಓದಿದ ಕೀಟ್ಸ್ ತನಗಾದ ಅನುಭವವನ್ನು ಹೀಗೆ ಹೇಳುತ್ತಾನೆ :

> "ಮಚ್ ಹ್ಯಾವ್ ಐ ಟ್ರಾವೆಲ್ಡ್
> ಇನ್ ದಿ ರೀಯಲಿಸಂ ಆಫ್ ಗಾಡ್,
> ಅಂಡ್ ಮೆನಿ ಗಾಡ್ಲಿ ಸ್ಟೇಟ್ಸ್ ಅಂಡ್
> ಕಿಂಗ್‌ಡಮ್ ಸೀನ್"

ಇದೇ ಅನುಭವ ದೇಜಗೌರವರ "ಯುದ್ಧ ಮತ್ತು ಶಾಂತಿ"ಯನ್ನು ಓದಿದ ಯಾರಿಗೂ ಆಗುತ್ತದೆ.

ಇಲ್ಲಿ ಭಾಷಾಂತರ ಒಂದು ಮಾರ್ಗದರ್ಶಕವಾಗಿ ಕೆಲಸ ಮಾಡಿದ್ದು ಹೊಸ ಸಾಹಿತ್ಯ ಗ್ರಹಗಳನ್ನು ನಮ್ಮ ಕಣ್ಣ ಮುಂದೆ ತಂದಿದೆ. ದಂಡಯಾತ್ರೆಗಳು ನಡೆದು ಹೊಸ ಹೊಸ ಸಾಹಿತ್ಯ ಸಾಮ್ರಾಜ್ಯಗಳು ನಮ್ಮದಾಗುತ್ತವೆ. ಒಂದು ಸಾಹಿತ್ಯ ಜಡವಾಗಿ, ಮಡುಗಟ್ಟಿದಾಗ ಭಾಷಾಂತರ ಒಂದು ಹೊಸ ಆಯಾಮವನ್ನು ನೀಡುತ್ತದೆ. ನವೋದಯಕ್ಕೆ ನಾಂದಿ ಹಾಡಿ, ಸಾಹಿತ್ಯವನ್ನು ಜೀವಂತ ವಾಹಿನಿಯನ್ನಾಗಿಸುತ್ತದೆ. ಬರಡಾದ ಸಾಹಿತ್ಯ ವೃಕ್ಷದಲ್ಲಿ ಚಿಗುರು ಮೂಡಿಸಿ, ನವೀನ ಪ್ರಕಾರ ತಂದುಕೊಟ್ಟ ಹೊಸ ಸಾಧ್ಯತೆಗಳನ್ನು ಪ್ರದರ್ಶಿಸಿ ಒಂದು ಸಾಹಿತ್ಯದ ಆರೋಗ್ಯಕರ ಬೆಳವಣಿಗೆಗೆ ನೆರವಾಗುತ್ತದೆ. ಭಾಷಾಂತರ ಯಾವುದೇ ಸಾಹಿತ್ಯವನ್ನು ಶ್ರೀಮಂತಗೊಳಿಸುತ್ತದೆ, ಮಹೋನ್ನತವಾಗಿಸುತ್ತದೆ, ಉತ್ಕರ್ಷಗೊಳಿಸುತ್ತದೆ. ಈ ಸಾಧನೆಯನ್ನು ದೇಜಗೌರವರ "ಯುದ್ಧ ಮತ್ತು ಶಾಂತಿ" ಮಾಡಿದೆ. ಎಜ್ರಾಪೌಂಡ್ ಹೇಳಿದಂತೆ:

> "ಎ ಗ್ರೇಟ್ ಏಜ್ ಆಫ್ ಲಿಟರೇಚರ್ ಈಸ್ ಪರ್‌ಹ್ಯಾಪ್ಸ್ ಆಲ್‌ವೇಸ್ ಎ ಗ್ರೇಟ್ ಏಜ್ ಆಫ್ ಟ್ರಾನ್ಸ್‌ಲೇಷನ್ ಆರ್ ಫಾಲೋಸ್ ಇಟ್"

ಹೀಗಾಗಿ ದೇಜಗೌರವರ ಲೇಖನಿ ಅನುವಾದಕ್ಕೆ ಕೈ ಹಾಕಿದಾಗ, ಅನುವಾದಕ್ಕಿರುವ ಕೀಳರಿಮೆ ಕಡಿಮೆಯಾಗುತ್ತದೆ. ಅದು ಉಳಿದ ಸಾಹಿತ್ಯ ಕೃತಿಯಂತೆ ಎತ್ತರಕ್ಕೆ ನಿಲ್ಲುತ್ತದೆ.

ಜಗತ್ತಿನ ಅನುಭವವನ್ನು ದೇಶ ಕಾಲಗಳ ಎಲ್ಲೆ ಮೀರಿ ಸಮಸ್ತ ಮಾನವ ಜನಾಂಗಕ್ಕೆ ಪರಿಚಯಿಸುವ ಪ್ರಕ್ರಿಯೆ ಭಾಷಾಂತರ. ಇದು ಸಾಂಸ್ಕೃತಿಕವಾಗಿ, ಐತಿಹಾಸಿಕವಾಗಿ, ರಾಜಕೀಯವಾಗಿ ವಿವಿಧ ರಾಷ್ಟ್ರಗಳನ್ನು ಸಮೀಪಕ್ಕೆ ತರುತ್ತದೆ. ಎಲ್ಲಾ ರಂಗದಲ್ಲೂ ಜ್ಞಾನದ ವಿನಿಮಯ ಮಾಡಿಸುತ್ತದೆ. "ಯುದ್ಧ ಮತ್ತು ಶಾಂತಿ" ಕೂಡ ನಮ್ಮ ಮತ್ತು ಐರೋಪ್ಯ ಸಂಸ್ಕೃತಿಯನ್ನು ತುಲನಾತ್ಮಕವಾಗಿ ನೋಡಲು ಸಹಾಯ ಮಾಡುತ್ತದೆ. ಭಾಷಾಂತರಕಾರರು, ಸಾಹಿತ್ಯಿಕ, ಸಾಂಸ್ಕೃತಿಕ ರಾಯಭಾರಿಗಳು, ಭಾಷೆಯ ಅಡ್ಡಗೋಡೆ ಒಡೆದು ಸಾಹಿತ್ಯಗಳನ್ನು ಜನಾಂಗಗಳನ್ನು ಒಂದುಗೂಡಿಸುವವರು. ಹಾಗೂ ಭಿನ್ನತೆಯಲ್ಲಿ ಏಕತೆಯನ್ನು ಸಾಧಿಸುವವರು—ಈ ಮಾತುಗಳನ್ನು "ಯುದ್ಧ ಮತ್ತು ಶಾಂತಿ"ಯನ್ನು ಭಾಷಾಂತರಿಸುವುದರ ಮೂಲಕ ನಿಜವೆಂದು ತೋರಿಸಿಕೊಟ್ಟಿದ್ದಾರೆ. ಒಬ್ಬ ಆದರ್ಶ ಭಾಷಾಂತರಕಾರ ಮೂಲತಃ ಉತ್ತಮ ಲೇಖಕನಾಗಿದ್ದು ಮೂಲ ಮತ್ತು ಉದ್ದಿಷ್ಟ ಭಾಷೆಗಳ ಮೇಲೆ ಪ್ರಭುತ್ವ ಹೊಂದಿರಬೇಕು. ಮೊದಲನೆಯದರ ಮೇಲಿನದು ವಿಮರ್ಶಾತ್ಮಕವಾಗಿರಬೇಕು. ಎರಡನೆಯದರ ಮೇಲಿನದು ವ್ಯವಹಾರಿಕವಾಗಿರಬೇಕು. ಮೂಲ ಭಾಷೆಯ ಮೇಲಿನ ಪ್ರಭುತ್ವ ಅಭಿವ್ಯಕ್ತಿಗೆ ಅನುಕೂಲವಾಗುತ್ತದೆ. ಹೀಗೆ ಉಭಯ ಭಾಷಾ ಪ್ರಭುತ್ವದಿಂದಾಗಿ ದೇಜಗೌರವರ ಮೇರುಕೃತಿ ಜೀವಕಳೆ ತುಂಬಿಕೊಂಡು ಅದ್ಭುತ ಸೃಷ್ಟಿಯಾಗಿ ಹೊರ ಬಂದಿದೆ.

ಭಾಷಾಂತರಕಾರ ಪೂರ್ವಾಗ್ರಹದಿಂದ ಮುಕ್ತನಾಗಿರಬೇಕು. ಪೂರ್ವಾಗ್ರಹ ಇದ್ದಲ್ಲಿ ಮೂಲವನ್ನು ತಿದ್ದುವ ತಪ್ಪಾಗಿ ಭಾಷಾಂತರಿಸುವ ಪ್ರಯತ್ನ ಭಾಷಾಂತರ

ಕಾರ ಮಾಡುತ್ತಾನೆ. ದೇಜಗೌರವರು ಮೂಲವನ್ನು ತಿದ್ದುವ ಪ್ರಯತ್ನ ಎಲ್ಲೂ ಮಾಡಿಲ್ಲ. ಸಂಸ್ಕೃತಿ, ಇತಿಹಾಸ, ರಾಜಕೀಯ ಬೆಳವಣಿಗೆಗಳ ಮುನ್ನಡೆಯಲ್ಲಿ ಮಾಹಿತಿ ಗಳನ್ನು ಅರ್ಥೈಸಿಕೊಂಡು ಶ್ರಮಪಟ್ಟು ಆಳ ವಾಗಿ ಅಭ್ಯಾಸಮಾಡಿ ತಾಳ್ಮೆಯಿಂದ ಮಾಹಿತಿ ಸಂಗ್ರಹಿಸಿ ಕೆಲವೊಮ್ಮೆ ಸ್ವನಿರಾ ಕರಣ ಮತ್ತು ಸ್ವಲೋಪಗಳನ್ನು ಮಾಡಿ, ಆದರ್ಶ ಭಾಷಾಂತರಕಾರ ನೆನೆಸಿಕೊಳ್ಳು ವುದು ಬಹಳ ಕಷ್ಟದ ಕೆಲಸ. ನಿರ್ದಿಷ್ಟತೆ, ಸ್ಪಷ್ಟತೆ, ಸಂಕ್ಷಿಪ್ತತೆ, ಸರಳತೆ, ಶುದ್ಧತೆ ಮಾಧುರ್ಯ, ಮೂಲದ ವಸ್ತು ರೀತಿ ಮತ್ತು ಶೈಲಿ ಸದೃಶ ರೂಪದಲ್ಲಿ ಮೈದಳೆ ಯುವುದು—ಇವು ಉತ್ತಮ ಅನುವಾದದ ಲಕ್ಷಣಗಳು. ಈ ಎಲ್ಲಾ ಲಕ್ಷಣಗಳನ್ನು, ಆದರ್ಶ ಅನುವಾದಕನಿಗಿರಬೇಕಾದ ಗುಣ ಗಳನ್ನು 'ಯುದ್ಧ ಮತ್ತು ಶಾಂತಿ'ಯ ಅನುವಾದಕರಲ್ಲಿ ನಾವು ಕಾಣುತ್ತೇವೆ.

ಪೋಸ್ಟ್‌ಗೇಟ್ ಹೇಳಿದ ಐದು ಅನು ವಾದ ತತ್ವಗಳು—ವಿಧೇಯತೆ, ಆನಂದ, ಅನುರೂಪತೆ, ಪರಿಹಾರ ಹಾಗೂ ಮೂಲ ಭಾಸತ್ವ—'ಯುದ್ಧ ಮತ್ತು ಶಾಂತಿ'ಯ ಅನುವಾದದಲ್ಲಿ ಸ್ಪಷ್ಟಗೊಂಡಿದೆ. ದೇಜಗೌ ರವರು ಟಾಲ್‌ಸ್ಟಾಯ್‌ರವರ ಮೂಲ ಕೃತಿಗೆ, ಮೂಲ ಆಶಯಕ್ಕೆ, ಉದ್ದಿಷ್ಟ ಭಾಷೆಯ ಜಾಯಮಾನಕ್ಕೆ ಮೂಲ ಪ್ರಕಾರಕ್ಕೆ, ವಿಧೇಯಕವಾಗಿರುವುದು ನಮಗೆ ಸ್ಪಷ್ಟವಾಗಿ ಕಾಣುತ್ತದೆ. ಭಾಷಾಂತರ ಓದುಗನಿಗೆ ಆನಂದ ಉಂಟು ಮಾಡಬೇಕೇ ಹೊರತು ಕ್ಲೇಶವನ್ನಲ್ಲ. ಮೂರು ಸಂಪುಟಗಳ ಈ ಮೇರುಕೃತಿ ಸಹಜ ಆನಂದ ಲಭಿಸುತ್ತದೆ ಓದುಗನಿಗೆ ಆನಂದ ನೀಡುವುದಕ್ಕಾಗಿ ಅನುವಾದವು ಎಲ್ಲೂ ಹಾದಿಬಿಟ್ಟು ಹೋಗಿ ಇಲ್ಲದ ಅಥವಾ ಸಲ್ಲದ ಪ್ರಯತ್ನ ನಡೆದಿಲ್ಲ. ಸರಳವಾಗಿರುವು ದನ್ನು ಅಲಂಕೃತವಾಗಿಸುವುದು, ಸುಲಭ ವಾಗಿಸುವುದನ್ನು ಕ್ಲಿಷ್ಟಗೊಳಿಸುವುದು— ಹೀಗೆ ಯಾವುದೇ ಸಲ್ಲದ ಪ್ರಯತ್ನ ನಡೆಸಿಲ್ಲ. ಮೂಲದ ಭಾವಾಂಶ, ಚಿಂತನಾಂಶ ಮತ್ತು ರೂಪಾಂಶಗಳೆಲ್ಲಾ ಸಮಗ್ರ ರೂಪದಲ್ಲಿ ಭಾಷಾಂತರದಲ್ಲಿ ಮೈದಳೆದು ಗುಣದಲ್ಲಿ ಮಾತ್ರವಲ್ಲದೆ ಗಾತ್ರದಲ್ಲಿಯೂ ಮೂಲಕ್ಕೆ ಅನುರೂಪವಾಗಿರಬೇಕೆನ್ನುವ ಅನುರೂಪತಾ ತತ್ವ ಅನುಷ್ಠಾನವಾಗಿರುವುದು ಇಲ್ಲಿ ಕಾಣು ತ್ತದೆ. ಮೂಲದ ಎಲ್ಲಾ ವೈಶಿಷ್ಟ್ಯಗಳನ್ನು ಅದೇ ಪ್ರಮಾಣಗಳಲ್ಲಿ ಉಳಿಸಿಕೊಳ್ಳುವುದು ಸಾಧ್ಯವಾಗದೇ ಹೋದಾಗ ಭಾಷೆಯ ಇತಿಮಿತಿಯೊಳಗೆ ಒಳಪಟ್ಟಿರುವಂತೆಯೇ ಒಂದು ರೂಪದಲ್ಲಿ ಆದ ನಷ್ಟವನ್ನು ಇನ್ನೊಂದು ರೂಪದಲ್ಲಿ ಸರಿದೂಗಿಸಿಕೊಡಲು ಪ್ರಯತ್ನಮಾಡಬೇಕೆಂದು ಪರಿಹಾರ ತತ್ವ ಸೂಚಿಸುತ್ತದೆ. ಇಂತಹ ಪ್ರಯತ್ನ 'ಯುದ್ಧ ಮತ್ತು ಶಾಂತಿ'ಯ ಅನುವಾದದಲ್ಲಿ ಹಲವೆಡೆ ಕಾಣುತ್ತದೆ. ದೇಜಗೌರವರ ಕೃತಿ ಭಾಷಾಂತರವೆಂಬ ಭಾವನೆಯನ್ನು ಉಂಟಾ ಗದಂತೆ ಮೂಲತಃ ಉದ್ದಿಷ್ಟ ಭಾಷೆ ಯಲ್ಲಿಯೇ ರಚಿತವಾದ ಕೃತಿಯೋ ಎಂಬಂತೆ ಸಹಜವಾಗಿ ಸಲೀಲವಾಗಿ ಮತ್ತು ಮೂಲದ ಎಲ್ಲಾ ವಿಭವಗಳೂ ಮನವರಿಕೆಯಾಗುವಂತೆ ಮೈದಳೆದು ಬಂದಿರುವುದರಿಂದ ಮೂಲ ಭಾಸತ್ವವನ್ನು ಅನುಸರಿಸಿದಂತಾಗಿದೆ.

೯. 'ಯುದ್ಧ ಮತ್ತು ಶಾಂತಿ'— ಒಂದು ಪರೋಕ್ಷಾನುವಾದ

ಅನುವಾದದ ಅನುವಾದ ಪರೋಕ್ಷಾನುವಾದವಾಗುತ್ತದೆ. 'ಯುದ್ಧ ಮತ್ತು ಶಾಂತಿ' ಕೂಡ ಒಂದು ಅನುವಾದದ ಅನುವಾದ. ಮೂಲ ಟಾಲ್‌ಸ್ಟಾಯ್ ಕೃತಿಯನ್ನು ರಷ್ಯನ್ ಭಾಷೆಯಲ್ಲಿ ರಚಿಸಿದ್ದು ಅದನ್ನು ಲೂಯಿ ಮತ್ತು ಅಲ್‌ಮರ್ ಮಾಡ್ ದಂಪತಿಗಳು ಆಂಗ್ಲ ಭಾಷೆಗೆ ತರ್ಜಿಮೆ ಮಾಡಿದ್ದಾರೆ. ಈ ಇಂಗ್ಲೀಷ್ ಅವತರಣಿಕೆಯ ಕನ್ನಡಾನುವಾದವೇ 'ಯುದ್ಧ ಮತ್ತು ಶಾಂತಿ.' ಹೀಗಾಗಿ ದೇಜಗೌರವರದು ಪರೋಕ್ಷಾನುವಾದ. ಆಂಗ್ಲ ಅನುವಾದವಾಗಲೀ, ಕನ್ನಡ ಅನುವಾದವಾಗಲೀ ಮೂಲಕ್ಕೆ ಯಾವ ರೀತಿಯ ದೋಷವನ್ನು ತಂದಿಲ್ಲ. ಬದಲಿಗೆ ರಷ್ಯಾಕ್ಕೆ ಸೀಮಿತವಾಗಿದ್ದ ಈ ಮಹಾನ್‌ಕೃತಿಯನ್ನು ಇಡೀ ವಿಶ್ವಕ್ಕೆ ಪರಿಚಯಿಸಿದಂತಾಗಿದೆ. ಅದರಲ್ಲೂ ದೇಜಗೌರವರು ಸಾಮಾನ್ಯ ಕನ್ನಡಿಗನಿಗೆ ಟಾಲ್‌ಸ್ಟಾಯ್ ಮಹರ್ಷಿಯ ಕೃತಿಯನ್ನು ಓದುವ ಭಾಗ್ಯ ಒದಗಿಸಿಕೊಟ್ಟಿದ್ದಾರೆ. ಅಲ್ಲದೆ ಈ ಅನುವಾದದಲ್ಲಿ ಶಬ್ದಾನುವಾದ, ನಿಕಟಾನುವಾದ, ಸರಳಾನುವಾದದ ಲಕ್ಷಣಗಳೂ ಅಲ್ಲಲ್ಲಿ ಕಾಣಿಸಿಕೊಂಡಿವೆ.

ಭಾಷಾಂತರದ ಮೂಲಭೂತ ಸಮಸ್ಯೆ ಗ್ರಹಣ ಮತ್ತು ಅಭಿವ್ಯಕ್ತಿ. ಮೂಲದ ಅರ್ಥ, ಭಾವ ಆಶಯುಗಳಿಗೆಲ್ಲ ಚ್ಯುತಿ ಬಾರದಂತೆ ದೇಜಗೌರವರು ತುಂಬಾ ಜಾಗೃತರಾಗಿ, ಸಂವೇದನಾ ಕೋಶಗಳ ಸಹಾಯ ಪಡೆದು, ಮೂಲ ಶಬ್ದ ಉದ್ದಿಷ್ಟ ಭಾಷೆಯ ಜಾಯಮಾನಕ್ಕೆ ಒಗ್ಗಿಕೊಳ್ಳುವಲ್ಲಿ ಯಥಾವತ್ತಾಗಿ ಇನ್ನೂ ಕೆಲವೆಡೆ ಅಲ್ಪಸ್ವಲ್ಪ ಮಾರ್ಪಾಡುಮಾಡಿ ಸ್ವೀಕರಿಸಿದ್ದಾರೆ. ಇನ್ನು ಕೆಲವೆಡೆ ಶಬ್ದ ವಿಶ್ಲೇಷಣೆಯಿಂದ ಅರ್ಥವನ್ನು ಹೊರಡಿಸಿ ಹೊಸ ಶಬ್ದವನ್ನು ಸೃಷ್ಟಿಸಿದ್ದಾರೆ. ನುಡಿಗಟ್ಟುಗಳನ್ನು, ಗಾದೆಗಳನ್ನು, ಶಬ್ದಪುಂಜಗಳನ್ನು ಕನ್ನಡಕ್ಕೆ ಸಮೀಕರಿಸಿಕೊಂಡು ಅರ್ಥವನ್ನು ಮೀರಿ ನಿಲ್ಲುವ ಭಾವವನ್ನು ಯಶಸ್ವಿಯಾಗಿ ಅವತರಿಸಿಕೊಂಡಿದ್ದಾರೆ. ಇದರಿಂದಾಗಿ ಭಾವಸಾಮ್ಯದ ಜೊತೆಗೆ ಪರಿಣಾಮ ಸಾಮ್ಯವೂ ಏರ್ಪಟ್ಟು ಅನುವಾದ ಜೀವಂತವಾಗಿದೆ. ಇಂಗ್ಲೀಷಿನ ವಾಕ್ಯ ರಚನೆಯ ಕ್ರಮದಲ್ಲಿ ಸಾಮಾನ್ಯವಾಗಿ ಒಂದು ಪ್ರಧಾನ ವಾಕ್ಯವಿದ್ದು ಅದನ್ನು ಹಿಂಬಾಲಿಸಿ ಬೆಂಬಲಿಸಿ ಬರುವ ಉಪವಾಕ್ಯಗಳು ದೀರ್ಘ ಲಂಬಿತ ವಾಕ್ಯಗಳನ್ನು ಸೃಷ್ಟಿಸುತ್ತವೆ. ಕನ್ನಡಕ್ಕೆ ಚಿಕ್ಕ ಚೊಕ್ಕ ವಾಕ್ಯಗಳು ಅದರ ಜಾಯಮಾನಕ್ಕೆ ಒಗ್ಗುತ್ತವೆ. ಇದರಂತೆ ದೇಜಗೌರವರು ಚಿಕ್ಕಚೊಕ್ಕ ವಾಕ್ಯಗಳನ್ನು ರಚಿಸಿ ಸುಲಭವಾಗಿ ಓದಿಸಿಕೊಂಡು ಹೋಗುವಂತೆ ಮಾಡಿದ್ದಾರೆ.

ಭಾಷಾಂತರದಲ್ಲಿ ಅಗತ್ಯವಾಗಿ ಇರಲೇಬೇಕಾದ ಅಂಶಗಳಾದ ಯಥಾರ್ಥತೆ, ವಾಚನೀಯತೆ, ಶೈಲಿ ಹಾಗೂ ಅವಧಾರಣೆ 'ಯುದ್ಧ ಮತ್ತು ಶಾಂತಿ'ಯಲ್ಲಿ ನಾವು ಕಾಣುತ್ತೇವೆ. ಭಾಷಾಂತರ ಎಲ್ಲೂ ತಪ್ಪಾಗದೇ, ಮೂಲ ಲೇಖಕ ಕಲ್ಪಿಸಿಕೊಳ್ಳದ ವಿಚಾರಗಳು ಅನುವಾದದಲ್ಲಿ ನುಸುಳಿಕೊಳ್ಳದೇ ಯಥಾರ್ಥತೆಯನ್ನು ಕಾಪಾಡಲಾಗಿದೆ. ಯಥಾವತ್ತಾಗಿ ವಿದ್ವತ್ಪೂರ್ಣವಾಗಿ ಭಾಷಾಂತರಿಸಿದಾಗಲೂ, ಲಾಲಿತ್ಯಕ್ಕೂ, ಸರಳತೆಗೂ ಅನುವಾಗಿ ಬಂದ ವಾಚನೀಯತೆ ಸಾಧನೆಯಾಗಿದೆ. ಶೈಲಿ

ಯನ್ನು ಕಾಯ್ದುಕೊಂಡು ಬಂದಿದ್ದು, ಅನುವಾದಕರು ಸೂಕ್ಷ್ಮ ಸಂವೇದಿಗಳಾಗಿರುವುದರಿಂದ ಭಾವತೀವ್ರತೆಯನ್ನು ಗ್ರಹಿಸಿ, ಅಷ್ಟೇ ಧ್ವನಿ ಪೂರ್ಣವಾಗಿ ಅಳವಡಿಸಿಕೊಳ್ಳುವುದರಲ್ಲಿ ಯಶಸ್ಸನ್ನು ಕಂಡಿದ್ದಾರೆ.

'ಯುದ್ಧ ಮತ್ತು ಶಾಂತಿ' ಕೇವಲ ಒಂದು ಕಾದಂಬರಿಯಲ್ಲ, ಕಾವ್ಯವಲ್ಲ, ಐತಿಹಾಸಿಕ ಕಥನವಲ್ಲ. ಅದೊಂದು ಉತ್ತಮ ಕಲಾಕೃತಿ. ಯುಗದ ವೈಲಕ್ಷಣಗಳು ಈ ಕೃತಿಯಲ್ಲಿ ಅಭಿವ್ಯಕ್ತಿಗೊಂಡಿದ್ದು, ಸತ್ಯಕ್ಕೆ ದೂರವಾದ ವಿಚಾರಗಳನ್ನು ಅಲ್ಲಿ ಪ್ರತಿಬಿಂಬಿಸಿಲ್ಲ. ಕಾದಂಬರಿ ಕಥೆ ನಡೆದ ಕಾಲದ ಜನರ ಪ್ರೀತಿ, ಸತ್ಯಶೀಲತೆ ಭಾವಾವೇಶ, ಸಂಕೀರ್ಣ ಮಾನಸಿಕ ನೈತಿಕ ಜೀವನ, ದೌಷ್ಟ್ಯ ಹಾಗೂ ಕ್ರೂರ ಹಿಂಸೆಗಳನ್ನು ನಂಬಿಕೊಂಡಿದ್ದ ಸಂಪ್ರದಾಯಗಳು, ಸಾದಾರಣ ರೀತಿಯ ಹಿಂಸೆ, ಮೃಗೀಯತೆಗಳು ಇಲ್ಲಿ ದಾಖಲಾಗಿದೆ. ಉತ್ತಮವರ್ಗದ ಜನರು ಬೇರೆ ವರ್ಗದ ಜನರಿಂದ ಭಿನ್ನವಾಗಿದ್ದು ಫ್ರೆಂಚ್ ಭಾಷೆಯನ್ನು ಬಳಸುವ ಅಭ್ಯಾಸ ಹೊಂದಿದ್ದು, ಯುಗ ತನ್ನದೇ ಆದ ವೈಲಕ್ಷಣಗಳನ್ನು ಪಡೆದಿದ್ದು ಅವುಗಳನ್ನು ವರ್ಣಿಸಲು ಪ್ರಯತ್ನಿಸಲಾಗಿದೆ. ಈ ಕಥೆ ೧೯ನೇ ಶತಮಾನದ ಆರಂಭಕ್ಕೆ ಸಂಬಂಧಿಸಿದ್ದರಿಂದ ನೆಪೋಲಿಯನ್ ಮತ್ತು ಫ್ರೆಂಚ್‌ರ ಪ್ರಭಾವ ನೇರವಾಗಿ ಆಗಿರುವುದನ್ನು ಕಾಣುತ್ತೇವೆ. ಸಾಹಿತ್ಯದಲ್ಲಿ ಚಿತ್ರಣಗೊಳ್ಳುವ ವ್ಯಕ್ತಿಗಳು ನಿಜ ಜೀವನದಲ್ಲಿ ಕಾಣುವ ವ್ಯಕ್ತಿಗಳಂತೆ ತೋರುವುದು ಅನಿವಾರ್ಯ. ಟಾಲ್‌ಸ್ಟಾಯ್ ಪ್ರಕಾರ ಅವರೆಲ್ಲಾ ಕಾಲ್ಪನಿಕ ವ್ಯಕ್ತಿಗಳು. ಆದರೆ ಅವನ ಕುಟುಂಬಕ್ಕೆ ಸೇರಿದ ಜನ ಮಾತ್ರ ಕಾದಂಬರಿಯಲ್ಲಿ ನಿಜರೂಪದಲ್ಲಿ ಕಾಣಿಸಿಕೊಳ್ಳುತ್ತಾರೆ. ಕೆಲವೊಮ್ಮೆ ಅವರು ಸಮ್ಮಿಶ್ರ ಪ್ರತಿಕೃತಿಗಳಾಗಿ ಪ್ರತ್ಯಕ್ಷರಾಗುತ್ತಾರೆ. ಕಾದಂಬರಿಕಾರನ ದೃಷ್ಟಿಯಲ್ಲಿ ನಾಯಕರು ಮುಖ್ಯವಲ್ಲ. ಮಾನವರು ಮತ್ತು ಅವರ ಸರ್ವಮುಖ ಜೀವನ ಮುಖ್ಯ. ಅವನು ಅರ್ಥೈಸಿಸಲು ಪ್ರಯತ್ನಿಸಿರುವುದು ಯಾವುದೇ ಒಬ್ಬ ನಾಯಕನನ್ನಲ್ಲ ಮಾನವನನ್ನು.

ಮನುಷ್ಯನ ಕ್ರಿಯೆಗಳು ಸಂಪೂರ್ಣ ಸ್ವತಂತ್ರವಾದುವುಗಳಲ್ಲ. ಕೆಲವೊಂದು ಕ್ರಿಯೆಗಳು ಅವನ ಇಚ್ಛಾನುಸಾರವಿದ್ದರೆ ಕೆಲವೊಂದು ಇಚ್ಛೆಯನ್ನು ಅವಲಂಬಿಸಿರುವುದಿಲ್ಲ. ಇತರರ ಸಂಕಲ್ಪವೂ ಕೆಲವೊಮ್ಮೆ ನಮ್ಮ ಕ್ರಿಯೆಯೊಂದಿಗೆ ಸೇರಿರುತ್ತದೆ. ಮನುಷ್ಯನ ಕ್ರಿಯೆ ಹೆಚ್ಚು ಹೆಚ್ಚು ಅಮೂರ್ತವಾದಂತೆ ಪರಿಷ್ಯಾವಲಂಬನೆ ಕಡಿಮೆಯಾಗಿ ಸ್ವತಂತ್ರ ಹೆಚ್ಚುತ್ತದೆ. ಹೀಗಾಗಿ ಕಾದಂಬರಿಯಲ್ಲಿ 'ಯುದ್ಧ'ದಲ್ಲಿ ಭಾಗವಹಿಸಿದ ಜನರಿಗೆ ಹೆಚ್ಚು ಪ್ರಾಮುಖ್ಯತೆ ನೀಡಿದಂತೆ ಕಂಡು ಬಂದರೂ 'ಶಾಂತಿ'ಯಲ್ಲಿ ಭಾಗವಹಿಸಿದ ಜನ ಸಾಮ್ಯಾನರ 'ಕ್ರಿಯೆ' ಗಳಿಗೆ ಮಹತ್ವ ನೀಡಿದಂತಾಗಿದೆ. ಚರಿತ್ರೆಯನ್ನು ಮುನ್ನಡೆಸುವ ಶಕ್ತಿ ಈ ಜನ ಸಾಮಾನ್ಯರ ಕ್ರಿಯೆ ಎಂದು ತೋರಿಸಲಾಗಿದೆ. ಈ ಹಿನ್ನಲೆಯಲ್ಲಿ ಕಾದಂಬರಿ ಒಂದು ಮಹಾಕಾವ್ಯದ ಸ್ಥಾನಮಾನ ಪಡೆಯುತ್ತದೆ. ಮಹಾಕೃತಿಯ ಅನುವಾದ ಅಷ್ಟೇ ದೊಡ್ಡ ಕೃತಿಯಾಗಿ ಕನ್ನಡಿಗರ ಮುಂದೆ ಕುಳಿತುಕೊಳ್ಳುತ್ತದೆ. ಇಡೀ ಕಾದಂಬರಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಚಾರಿತ್ರಿಕ ವ್ಯಕ್ತಿಗಳಿಗಿಂತ ಹೆಚ್ಚಾಗಿ

ಜನ ಸಾಮ್ರಾಜ್ಯರು ಪ್ರಮುಖ ಪಾತ್ರ ವಹಿಸಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

೧೦. ದೇಜಗೌ ಭಾಷಾಂತರ ಶೈಲಿ

'ವ್ಯಕ್ತಿತ್ವವೇ ಶೈಲಿ' ಎಂಬ ಪ್ರಸಿದ್ಧ ಹೇಳಿಕೆಯ ಹಿನ್ನಲೆಯಲ್ಲಿ ವ್ಯಕ್ತಿತ್ವವಿದ್ದ ವರಿಗೆ ತನ್ನದೇ ಆದ ಶೈಲಿ ಇರುವುದನ್ನು ನಾವು ಗಮನಿಸಬಹುದು. ಶೈಲಿ ವ್ಯಕ್ತಿತ್ವದ ಪ್ರತಿಬಿಂಬವಾಗುತ್ತದೆ. ದೇಜಗೌ ಶೈಲಿಯಲ್ಲಿ ನಮಗೆ ಕಾಣುವುದು ಜಾನಪದದ ಸೊಗಡು ಮತ್ತು ಪ್ರಾಸಯುಕ್ತ ಶಬ್ದಯುಗಳ ಮಾಲೆಯ ಪ್ರಯೋಗ. ರಾಗಿಮುದ್ದೆ ನುಂಗಿ, ಕುರಿ ಮಂದೆ ಮೇಯಿಸಿ, ಕರಿ ಕೇಚು ತಿಂದು, ಮಣ್ಣಿನಲ್ಲಿ ಆಟವಾಡಿ, ಕೆರೆಯಲ್ಲಿ ಈಜಾಡಿ, ಪ್ರಕೃತಿ ಮಡಿಲಲ್ಲಿ, ಮಣ್ಣಿನ ಮಗನಾಗಿ ಬೆಳೆದ ಚೇತನ ತನ್ನ ಶೈಲಿಯಲ್ಲಿ ಜಾನಪದ ಸೊಗಡನ್ನು ರೂಢಿಸಿಕೊಂಡಿರುವುದು ತುಂಬಾ ಸಹಜವೆನಿಸುತ್ತದೆ. ಪ್ರಾಸಯುಕ್ತ ಶಬ್ದಗಳ ಪ್ರಯೋಗ ತಾನು ರೂಢಿಸಿಕೊಂಡ ನಾಗರೀಕತೆಯ ಪ್ರಭಾವ ಜಾನಪದ ಸೊಗಡಿಗೊಂದು ಉದಾರಹರಣೆ ಇಲ್ಲಿದೆ.

ಕುರುಬ ಪ್ರತಿದಿನ ಸಂಜೆ ಟಗರೊಂದನ್ನು ಪ್ರತ್ಯೇಕವಾದ ಕೊಟ್ಟಿಗೆಗೆ ಕೂಡಿ, ಹೆಚ್ಚಿಗೆ ಮೇವು ತಿನ್ನಿಸುತ್ತಾನೆ. ಅದು ಇತರ ಟಗರುಗಳಿಗಿಂತ ಎರಡರಷ್ಟು ಕೊಬ್ಬುತ್ತದೆ. ಇತರ ಟಗರುಗಳ ತಂಡಕ್ಕಿದು ದೈವಶಕ್ತಿಯೆಂಬಂತೆ ತೋರುತ್ತದೆ. ಸಂಜೆಯಲ್ಲಿ ಇತರ ಟಗರುಗಳ ಮಂದೆಯಿಂದ ಪ್ರತ್ಯೇಕಗೊಂಡು, ಬೇರೆ ಕೊಪ್ಪಲಿನಲ್ಲಿ ಹೊಟ್ಟೆ ಬಿರಿಯುವ ತನಕ ಓಟು ತಿಂದು ಕೊಬ್ಬಿದ ಅದೇ ಟಗರನ್ನು ಮಾಂಸಕ್ಕಾಗಿ ಕೊಲ್ಲುವಾಗ ಅದೆಲ್ಲಾ ಅಸಾದಾರಣ ಆಕಸ್ಮಿಕಗಳ ಇಡೀ ಸರಣಿ ಮತ್ತು ದೈವಶಕ್ತಿಯ ಅತ್ಯಾಶ್ಚರ್ಯಕರವಾದ ಸಂಗಮವೆಂದು ತೋರುತ್ತದೆ. (ಯುದ್ಧ ಮತ್ತು ಶಾಂತಿ ತೃತೀಯ ಸಂಪುಟ, ಪುಟ ೪೪೦)

ವಸಂತ, ಪ್ರೇಮ, ಸಂತೋಷ, ಅದೆಲ್ಲಾ ಅರ್ಥವಿಲ್ಲದ್ದು, ಅವಿವೇಕದ್ದು, ಅನವರತ ಪುನಃ ಪುನಃ ನಡೆಯುತ್ತಿರುವ ವಂಚನೆ. ಅವುಗಳ ಬಗೆಗೆ ನಿನಗಿನ್ನು ಬೇಸರವಾಗಿಲ್ಲವೇ? ಯಾವಾಗಲೂ ಅದೇ ಯಾವಾಗಲೂ ವಂಚನೆ ವಸಂತನೂ ಇಲ್ಲ, ಸೂರ್ಯನೂ ಇಲ್ಲ, ಸಂತೋಷವೂ ಇಲ್ಲ. ಸೆಡೆತುಕೊಂಡಿರುವ ಶವನದೃಶ್ಯವಾದ ಆ ಫರ್ ಮರಗಳನ್ನು ನೋಡು. ಅವು ಯಾವಾಗಲೂ ಹಾಗೆಯೇ ಇದೆ. ಹಿಂದೆಯೋ ಪಕ್ಕದಲ್ಲಿಯೇ ಹುಟ್ಟಿದಲ್ಲಿಯೇ ಬೆಳೆದು ಇದರಲ್ಲಿಯೇ ಇರುವ, ಮುರಿದ, ತೊಗಟೆ ಯಿಂದ ಬೆರಳುಗಳು ಹೊರಟುಕೊಂಡಿರುವ ನನ್ನ ಕಡೆಗೂ ನೋಡು, ಅವು ಬೆಳೆಯುತ್ತಿದ್ದರೂ ನಾನು ಮಾತ್ರ ನಿಂತಲ್ಲಿಯೇ ನಿಂತಿದ್ದೇನೆ. ನಿನ್ನ ಭರವಸೆಗಳಲ್ಲಾಗಲೀ ಸುಳ್ಳುಗಳಲ್ಲಾಗಲೀ ನನಗೆ ನಂಬಿಕೆ ಇಲ್ಲ ಎಂಬುದಾಗಿ ಆ ಓಕ್ ಮಾತನಾಡಿದ್ದಂತೆ ತೋರಿತು" (ಯುದ್ಧ ಮತ್ತು ಶಾಂತಿ, ದ್ವಿತೀಯ ಸಂಪುಟ ಪುಟ ೫)

ಪ್ರಾಸಯುಕ್ತ ಪದಗಳ ಬಳಕೆಗೆ ಉದಾಹರಣೆ ಇಲ್ಲಿದೆ :

"ಅಧಿಕಾರದ ಅಮಲೇರಿದಾಗ ಆತ್ಮಸಾಕ್ಷಿ ಮೂಲೆ ಗುಂಪಾಗುತ್ತದೆ."

"ಕಳೆದಿರಳು ಕವಿಯು ಕಗ್ಗತ್ತಲೆತ್ತಲುಂ ಹಗುರಾಗಿ ಮೃದುವಾಗಿ ನಂದಿತ್ತು ಮಂಜು" (ದ್ವಿತೀಯ ಸಂಪುಟ ಪುಟ ೧೪೩)

ದೇಜಗೌರವರ ವಿಶಿಷ್ಟ ಶೈಲಿಯ ಗದ್ಯಕ್ಕೆ ಒಂದು ಉದಾಹರಣೆ ಇಲ್ಲಿದೆ.

"ಚಳಿಗಾಲ ದಿನೇ ದಿನೇ ಬಲಿಯುತ್ತಿತ್ತು. ಶರತ್ಕಾಲದ ವರ್ಷದಿಂದ ತೊಯ್ದಿದ್ದ ನೆಲದ ಮೇಲೆ ಬೆಳಗಿನ ಹಿಮ ಸುರಿದು, ಮಂಜು ಗಡ್ಡೆ ಕವಿದುಕೊಂಡಿತ್ತು. ಹಸುರು ಘನೀಭೂತವಾದಂತಿತ್ತು. ದನಕರುಗಳು ತುಳಿದ ಚಳಿಗಾಲದ ರೈ ಹುಲ್ಲಿನ ಕಂದು ತುಂಡುಗಳ, ವಸಂತಮಾಸದ ಬೆಳೆಗಳ ಮಾಸಲು ಹಳದಿಯ ಕೊಳಗಳ ಹಾಗೂ ಕುದುರೆ ಗೋಧಿಯ ಕೆಂಪುಚೂರು ಕಡ್ಡಿಗಳ ಹಿನ್ನಲೆಯಲ್ಲಿ ಪಚ್ಚೆಯ ಕಾಂತಿ ರಾರಾಜಿಸುತ್ತಿತ್ತು. ಆಗಸ್ಟ್ ತಿಂಗಳ ಕೊನೆಯಲ್ಲಿ ಕಪ್ಪು ಹೊಲ ಮತ್ತು ಕೂಳೆ ಗದ್ದೆಗಳ ಮಧ್ಯೆ ಹಸುರು ದೀವಿಗಳಾಗಿ ಕಂಗೊಳಿಪಿಸುತ್ತಿದ್ದ ವೃಕ್ಷಮಯ ಕಂದಕಗಳೂ ಕುರುಚಲು ಗಿಡಗಳೂ ಚಳಿಗಾಲದ ಹಸಿರು ರೈ ಹೊಲಗಳ ನಡುವೆ ಹೊಂಬಣ್ಣದ ಅರುಣಕಾಂತಿಯ ದ್ವೀಪಗಳಾಗಿ ಪರಿವರ್ತನೆಗೊಂಡಿದ್ದವು" (ಪುಟ ೧೧೧, ದ್ವಿತೀಯ ಸಂಪುಟ)

ಭಾಷಾಂತರ ಕೆಲವೆಡೆ ಕೇವಲ ಶಬ್ದಾನುವಾದವಾಗಿ ಮುಗ್ಗರಿಸಿ ನೀರಸವಾಗಿರುವುದನ್ನೂ ನಾವು ಕಾಣಬಹುದು:

"ಹೆಲೆನ್ ನಿನ್ನೊಂದಿಗೆ ಮಾತೊಂದಿದೆ" ಎಂದವನು ಅವಳ ಕೈ ಹಿಡಿದುಕೊಂಡು ಪಕ್ಕಕ್ಕೆ ಕರೆದೊಯ್ಯುತ್ತಿದ್ದನು. "ಕೆಲವು ಕಲ್ಪನೆಗಳು ನನ್ನ ಕಿವಿಗೆ ಬಿದ್ದಿವೆ. ಅವು.... ನಿನಗೆ ಗೊತ್ತಿದೆ. ನನ್ನ ಮುದ್ದಿನ ಮುದ್ದೆ, ನೀನು....ಎಂದು ತಿಳಿದಾಗ ತಂದೆಯ ಹೃದಯಕ್ಕೆಷ್ಟು ಆನಂದವಾಯಿತೆಂಬುವುದು ನಿನಗೆ ಗೊತ್ತಿದೆ. ನೀನು ತುಂಬಾ ಯಾತನೆಯನ್ನು ಅನುಭವಿಸಿದ್ದೀಯ. ಆದರೆ ನನ್ನ ಚಿನ್ನ, ನಿನ್ನೆದೆಯ ದನಿಯೇ ನಿನಗೆ ಗುರುವಾಗಲಿ. ಅಷ್ಟೇ ನಾನು ಹೇಳುವಂಥದು." ಮಾರ್ಪಾಡಾಗದ ಭಾವೋದ್ರೇಕವನ್ನು ಸಂಯಮಿಸಿಕೊಂಡು ಅವನು ತನ್ನ ಮಗಳ ಕೆನ್ನೆಗೆ ತನ್ನ ಕೆನ್ನೆಯನ್ನೊತ್ತಿ, ಮುಂದೆ ಸರಿಯುತ್ತಿದ್ದನು" (ಪುಟ ೨೬, ತೃತೀಯ ಸಂಪುಟ)

ಕಾದಂಬರಿಯಲ್ಲಿ ಅನೇಕ ಸೂಕ್ತಿಗಳು ಕಾಣಿಸಿಕೊಂಡಿದ್ದು ಅವು ಮನಸ್ಸಿನೊಳಕ್ಕೆ ಇಳಿಯುವುದಲ್ಲದೆ ವಿಚಾರವನ್ನು ಮೂಡಿಸುತ್ತವೆ.

"ರಾಜರ ಚರಿತ್ರೆ ನಿಜವಾದ ಚರಿತ್ರೆಯಲ್ಲ."

"ಕೇಡಿನಿಂದ ಕೇಡನ್ನು ಗೆಲ್ಲಲಾಗದು. ಸತ್ಯದಿಂದ ಮಾತ್ರ ಸಾಧ್ಯ". ಜಮೀನ್ದಾರ ಬಡವರ ಜಗಣೆ.

"ನೀತಿ ಧರ್ಮಕ್ಕೆ ಚಕ್ರ." ಪ್ರಚಲಿತ ಸಮಾಜಕ್ಕನುಗುಣವಾಗಿ ಅದು ನಿತ್ಯ ಪರಿವರ್ತನ ಶೀಲವಾಗುತ್ತದೆ.

"ಆಧುನಿಕ ಜ್ಞಾನ ವಿಜ್ಞಾನಗಳು ಧರ್ಮಕ್ಕೆ ಪೂರಕವಾಗುತ್ತವೆ."

"ಅಗತ್ಯಕ್ಕೆ ಮಿತಿಯುಂಟು, ಭೋಗಕ್ಕೆ ಗಡಿಯಿಲ್ಲ" ದೇಜಗೌರವರು ಭಾಷಾಶಾಸ್ತ್ರ ತಜ್ಞರು. ಶಬ್ದ ಅರ್ಥಗಳ ಜಾತಕ ಬಲ್ಲವರು. ಸಹೃದಯರು, ಕಾವ್ಯರಸಗಳ ಸವಿ ಉಂಡವರು, ಉಂಡು ಅರಗಿಸಿಕೊಂಡವರು. ಹಳೆಯ ಪದಗಳಿಗೆ ಹೊಸ ಅರ್ಥ, ಹೊಸ ಪದಗಳಿಗೆ ಹಳೆಯ ಅರ್ಥ, ಹೊಸ ಪದಗಳ ಸೃಷ್ಟಿ. ರಮ್ಯತೆಯ ದೃಷ್ಟಿ ಇವರ ಕಾವ್ಯ ಸೃಷ್ಟಿಯಲ್ಲಿದೆ. ಓಜೋಮಯ

ವಾದ ಗದ್ಯ, ಲಲಿತ ಗಂಭೀರ ಪ್ರಬಂಧ, ನಿರ್ಭಂಧ ಬಂಧ ಇವರ ಬರಹಕ್ಕಿರುವುದನ್ನು ಕಾಣಬಹುದು.

ನಿಜವಾದ ಅರ್ಥದಲ್ಲಿ ಮಣ್ಣಿನ ಮಗನಾದ, ಹಳ್ಳಿಯ ಹೃದನಾದ ಇವರು ಹುಟ್ಟಿನಿಂದ ಬಂದ ಅನೇಕ ಕ್ರಿಯಾಶೀಲತೆಯಿಂದಾಗಿ ಚೈತನ್ಯದ ಚಿಲುಮೆಯಾಗಿದ್ದಾರೆ. ತಮಗೆ ತಿಳಿದ, ಪ್ರಿಯವಾದ ವಿಚಾರಗಳಲ್ಲಿ ಮುಗಿಲಿನಷ್ಟು ಎತ್ತರಕ್ಕೆ ಏರುತ್ತಾರೆ. ತಮಗೆ ತಿಳಿಯದ ವಿಚಾರಗಳಲ್ಲಿ ಮುನ್ನೆಚ್ಚರಿಕೆ, ತಾಟಸ್ಥ್ಯ ವಹಿಸುತ್ತಾರೆ. ಅವರ ಶೈಲಿಯಲ್ಲಿ ಅವರ ವ್ಯಕ್ತಿತ್ವದ ಪ್ರತಿಬಿಂಬ ಕಾಣುತ್ತದೆ.

ದೇಜಗೌ ಮೂಲತಃ ಭಾವುಕರು. ಅವರ ಭಾವುಕತೆ ಬಹುಬೇಗ ಮನಸ್ಸನ್ನು ಭಾಗಿಸಿ ಬಳಕಿಸುತ್ತದೆ, ಕಣ್ಣೀರು ತರಿಸುತ್ತದೆ. ಹೊರ ಪ್ರಪಂಚದ ನಿಷ್ಠುರ ಕಠೋರತೆ, ನಡು-ಬೇಸಗೆಯ ಮಧ್ಯಾಹ್ನದ ತಾಪ ಭಾವುಕತನವನ್ನು ಒಣಗಿಸದೇ ಇರುವುದನ್ನು ಅವರ ಬರಹದಲ್ಲಿ ಕಾಣುತ್ತೇವೆ. ಆದ್ದರಿಂದ ವಸ್ತುವಿಗೆ ತಕ್ಕಂತೆ ಒಡಲು ಧರಿಸುವ ವಿಶೇಷ ಗುಣ ಅವರ ಶೈಲಿಗೆ ಇದೆ ಎಂಬ ಮಾತು ನಿಜವಾದುದು.

"ದೇಜಗೌ ಶೈಲಿ" ಎಂದೇ ಸಾಹಿತ್ಯ ಕ್ಷೇತ್ರದಲ್ಲಿ ಪ್ರಖ್ಯಾತವಾದ ಗದ್ಯಶೈಲಿ ದೇಜಗೌರವರದು. ಸಂಪ್ರದಾಯಬದ್ಧವಾದ ಶೈಲಿಯ ಬಿಗಿ ಹಿಡಿತದಿಂದ ಹೊರಬಂದು ಜಾನಪದ ಭಾಷೆಯ ಪರಕಾಯ ಪ್ರವೇಶ ಮಾಡಿ ಹೊಸ ರೂಪ ತಾಳಿ ದೇಸೀಯ ಸೊಗಡನ್ನು ಹೊರ ಸೂಸುವ ಕಾವ್ಯದ ಕಂಪನ್ನು ಲೇಪಿಸಿಕೊಂಡ ಗಟ್ಟಿ ಪದಗಳ ಗದ್ಯ ಶೈಲಿಯೇ "ದೇಜಗೌ ಶೈಲಿ". ಈ ಶೈಲಿ ದೇಜಗೌರವರ ಎಲ್ಲಾ ಸಾಹಿತ್ಯ ಕೃತಿಗಳಲ್ಲಿ ಆದರಲ್ಲೂ ಮುಖ್ಯವಾಗಿ "ಯುದ್ಧ ಮತ್ತು ಶಾಂತಿ"ಯ ಭಾಷಾಂತರದಲ್ಲಿ ನಾವು ಕಾಣುತ್ತೇವೆ.

ಎಗ್ಗ, ತಾಕತ್ತು, ಚಪ್ಪೋಡು, ಪೊಗರು, ಮರ್ಜಿ, ಕಣ್ಗೆಲೆಹಿಡಿಮುಂದಿ, ತಿಸ್ಸತಿಪ್ಪ ಮೊದಲಾದ ದೇಸಿನುಡಿಗಳು, ವಾರಿಕೆ(ವೀಕ್ಲಿ) ಪಾಕ್ಷಿಕೆ (ಕ್ವಾರ್ಟರ್ಲಿ) ಮಾಸಿಕೆ (ಮಂತ್ಲಿ) ಸಂದೇಹಮತಿ (ಸಿನಿಕ್) ಜಾರೀಕರಣ (ಎಸ್ಕೇಪ್) ಮುಂತಾದ ಹೊಸ ಶಬ್ದಗಳನ್ನು ಕನ್ನಡಮ್ಮನ ಉಡಿಗೆ ಹಾಕಿದವರು ದೇಜಗೌ.

೧೧. ಕನ್ನಡ ಭಾಷಾಂತರ ಸಾಹಿತ್ಯದಲ್ಲಿ "ಯುದ್ಧ ಮತ್ತು ಶಾಂತಿ" ಎಲ್ಲಿ ನಿಂತಿದೆ ?

ಕನ್ನಡ ಭಾಷಾಂತರ ಸಾಹಿತ್ಯದಲ್ಲಿ "ಯುದ್ಧ ಮತ್ತು ಶಾಂತಿ" ಬಹಳ ಎತ್ತರಕ್ಕೆ ನಿಂತಿದೆ. ಟಾಲ್‌ಸ್ಟಾಯ್ ಸಾಹಿತ್ಯ ಕೃತಿಗಳು ಪ್ರಪಂಚ ಸಾಹಿತ್ಯ ಕೃತಿಗಳಲ್ಲಿ ಹೇಗೆ ಶ್ರೇಷ್ಠ ಸ್ಥಾನ ಪಡೆದಿದೆಯೋ ಅದೇ ರೀತಿ ಅವನ ಭಾಷಾಂತರ ಕೃತಿಗಳು ಕೂಡ ಆಯಾ ಭಾಷಾ ಸಾಹಿತ್ಯ ಕ್ಷೇತ್ರದಲ್ಲಿ ಮಹತ್ತರ ಸ್ಥಾನ ಮಾನ ಪಡೆದಿದೆ. ಅದರಲ್ಲೂ ಭಾಷಾಂತರಕಾರರು ದೇಜಗೌರಂತಹ ಸಾಹಿತ್ಯ ದಿಗ್ಗಜಗಳಾದಾಗ ಭಾಷಾಂತರ ಕೃತಿ ಮೂಲ ಲೇಖನದ ಸ್ಥಾನ ಮಾನವನ್ನು ಪಡೆಯುತ್ತದೆ. ಇಲ್ಲಿ ಕೇವಲ ಒಂದು ಸಾಹಿತ್ಯ ಕೃತಿಯ ಭಾಷಾಂತರವಾಗಿಲ್ಲ. ಟಾಲ್‌ಸ್ಟಾಯ್‌ನ ವ್ಯಕ್ತಿತ್ವ, ಅವನ ವಿಚಾರಗಳು, ಅವನ ಬದುಕು ದೇಜಗೌರವರ ವ್ಯಕ್ತಿತ್ವ, ವಿಚಾರ ಹಾಗೂ ಬದುಕಿನಲ್ಲಿ ಭಾಷಾಂತರಗೊಂಡು ಕೃತಿ ರೂಪದಲ್ಲಿ ಹೊರ ಬಂದಿದೆ. ಅದರಿಂದಾಗಿ ಈ ಕೃತಿ ಒಂದು ಮಹತ್ಸಾಧನೆಯಾಗಿ ಕನ್ನಡಿಗರಿಗೆ

ಲಭ್ಯವಾಗಿದೆ. ಇದೊಂದು ತಪಸ್ಸಿನ ಫಲ. ಈ ತಪಸ್ಸಿನಲ್ಲಿ ಸಾಹಿತ್ಯದೇವಿಯ ಸಾಕ್ಷಾತ್ಕಾರವಾಗಿದೆ. "ಯುದ್ಧ ಮತ್ತು ಶಾಂತಿ" ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಜರಾಮರ ಕೃತಿಯಾಗಿ ನಿಲ್ಲುತ್ತದೆ.


ದೇಜಗೌ ಸಾಹಿತ್ಯದ ಬಗೆಗೆ ಸಿ.ಪಿ.ಕೆ. ಯವರು "ಸಮಾವೇಶ"ದಲ್ಲಿ ಆಡಿದ ಮಾತುಗಳನ್ನು ಇಲ್ಲಿ ಪುನರುಚ್ಚರಿಸುವುದು ಉಚಿತವೆಂದು ತೋರುತ್ತದೆ.

"ಭಾಷಾಂತರ ದೇಜಗೌ ಅವರಿಗೆ ಬಹು ಇಷ್ಟವಾದ ಕ್ಷೇತ್ರ. ಭಾಷಾಂತರದ ಹಲವು ಬಗೆಯ ಪ್ರಯೋಜನಗಳಲ್ಲಿ ಅವರಿಗೆ ದೃಢವಾದ ನಂಬಿಕೆ. ಅದು ಸರ್ವಭಾಷಾಭ್ಯುದಯವನ್ನು ಸಾಧಿಸಿ, ಭಾಷೆಗಳ ಸಮವಾಯ ಸಂಬಂಧವನ್ನು ಕುದುರಿಸಿ, ಭಾವೈಕ್ಯ, ರಾಷ್ಟ್ರೈಕ್ಯವನ್ನು ಸಂಘಟಿಸುವ ಸಮಾಚೀನ ತಂತ್ರ"ವೆಂದು ಅವರ ನಿಲುವು. ಸಾಹಿತ್ಯಕ್ಕೆ ಅವರು ಪಾದಾರ್ಪಣ ಮಾಡಿದ್ದೆ ಭಾಷಾಂತರದಿಂದ "ನೆನಪು ಕಹಿಯಲ್ಲ", "ಹಮ್ಮು ಬಿಮ್ಮು" "ಅಕ್ಬರ್" "ಪುನರುತ್ಥಾನ" "ಗುರುನಾನಕ್". ಇವುಗಳಲ್ಲಿ ದೇಜಗೌರವರ ಭಾಷಾಂತರ ಕಲೆಯ ಮೇಲೆ ಇರುವ ತುಂಬು ಪ್ರಭುತ್ವ ಪ್ರಕಟವಾಗುತ್ತದೆ. "ಪುನರುತ್ಥಾನ" ಮಹಾಕಾದಂಬರಿಯಂತೂ ಅವರ ಭಾಷಾಂತರ ಸಿದ್ಧಿಯ ವಿಜಯಸ್ತಂಭ" ಈ ಮಾತುಗಳನ್ನು ಸಿ.ಪಿ.ಕೆ. ಆಡುವಾಗ "ಯುದ್ಧ ಮತ್ತು ಶಾಂತಿ" ಇನ್ನೂ ಹುಟ್ಟಿ ಬಂದಿರಲಿಲ್ಲ. ಇದು ದೇಜಗೌರವರ ತಪಸ್ಸಿದ್ಧಿಯ ಮೇರು ವಿಜಯಸ್ಥಂಭವಾಗಿದೆ.

ಕುವೆಂಪುರವರು ಟಾಲ್‌ಸ್ಟಾಯ್ ಬಗ್ಗೆ ಹೇಳಿದ ಮಾತುಗಳು ದೇಜಗೌರವರಿಗೂ ಸಮರ್ಥವಾಗಿ ಅನ್ವಯಿಸುತ್ತದೆ.

"ಕ್ರಾಂತಿಕಾರನೆ ಮಾತ್ರ ನೀನಲ್ತು ;
ಕಾವ್ಯರಸನಂದನ ಕೃಷಿಕನಾದೆ.
ಮನುಜ ಜೀವನ ರಂಗಭೂಮಿಯಲಿತವ ಪಾತ್ರ
ನೈಕಮುಖಿ. ಸಾಧಕವರೇಣ್ಯ. ಸತ್ಯದ ಬೋಧೆ
ನಿನ್ನಿಂದೆ ಮಿಂಚಾಯ್ತು".

(ಮುಗಿಯಿತು)



ಅನಕ್ಷರಸ್ಥರು ಯಾವ ರಾಜಕೀಯ ಪಕ್ಷಕ್ಕೂ ಸೇರಿದವರಲ್ಲ; ಅವರಿಗೆ ಮೊದಲು ಅಕ್ಷರ ಕಲಿಸಬೇಕು

—ಲೆನಿನ್

ಲ್ಯಾಂಡ್ ಸ್ಟೇಯ್ನರ್ ಮಾನವ ರಕ್ತದ ವಿಂಗಡಣಾಕಾರ

ಟಿ. ಎಸ್. ಲಲಿತ

೭೨೭, ಮೊದಲನೆ ಮಹಡಿ
೧ ನೇ ಮೇನ್, ಸರಸ್ವತೀಪುರ
ಮೈಸೂರು–೫೭೦ ೦೦೯

೧೯೩೯ ರ ಒಂದು ದಿನ, 'ರಾಕ್‌ಫೆಲ್ಲರ್ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ರೀಸರ್ಚ್‌ನ, ಎರಡನೆಯ ಅಂತಸ್ತಿನ ಕಾರಿಡಾರ್‌ನಲ್ಲಿ ನಡೆಯುತ್ತಿದ್ದ ನನ್ನ ಮೊಣಕಾಲುಗಳು ನಡುಗುತ್ತಿದ್ದವು. ತೀವ್ರ ಹೆದರಿದ್ದ ನಾನೊಬ್ಬ ವೈದ್ಯಕೀಯ ವಿದ್ಯಾರ್ಥಿ. ದೂರವಾಣಿಯ ಕರೆಯೊಂದು, ನನ್ನನ್ನು, ಆ ಕಾಲದ ಅತಿ ದೊಡ್ಡ ಸಂಶೋಧಕರಾದ, ಡಾ|| ಕಾರ್ಲ್ ಲ್ಯಾಂಡ್ ಸ್ಟೇಯ್ನರ್‌ರ ಪ್ರಯೋಗಾಲಯಕ್ಕೆ ಕರೆತಂದಿತ್ತು.

ಆ ಸಮಯದಲ್ಲಿ ವಿವಿಧ ಬಗೆಯ ರಕ್ತ ಹೇಗೆ ಆನುವಂಶಿಕವಾಗಿ ಬರುತ್ತದೆನ್ನುವ ಬಗ್ಗೆ, ಎರಡು ಮುಖ್ಯ ಊಹೆಗಳಿದ್ದವು. ನಾನು ವಾದಗಳನ್ನು ವಿಶ್ಲೇಷಿಸಿ ೧೩ ನೇ ಶತಮಾನದಲ್ಲಿ ಚೀನಿಯರು ರಕ್ತದ ಗುಂಪನ್ನು ಕಂಡುಹಿಡಿದಿದ್ದರೆಂಬ ವಾದವನ್ನು ಮುಂದೊಡ್ಡಿದೆ.

ಆರಡಿ ಎತ್ತರದ, ತೀಕ್ಷ್ಣ ನೋಟದ ಕಪ್ಪು ಕಣ್ಣುಗಳು, ಪೊದೆಯಂತಿದ್ದ ಹುಬ್ಬು ಇಳಿಬಿದ್ದ ಮೀಸೆಯ ಲ್ಯಾಂಡ್ ಸ್ಟೇಯ್ನರ್ ಎದುರು ನಾನೀಗ ನಿಂತಿದ್ದೆ. ಪ್ರಯೋಗಾಲಯದ ಕಿಟಕಿ ಅಪಾರದರ್ಶಕ ಗಾಜಿನಿಂದ ಮಾಡಿತ್ತು. ಕೆಲಸದ ನಡುವೆ ಅಡಚಣೆ ತರುವ ದೃಶ್ಯಗಳನ್ನು ನೋಡುವುದು ಸ್ಟೇಯರ್‌ಗೆ ಬೇಕಿರಲಿಲ್ಲ.

"ಚೀನಿಯರು ರಕ್ತದ ಗುಂಪನ್ನು ಕಂಡು ಹಿಡಿದವರೆಂದು ನೀನೆಲ್ಲಿ ಕಲಿತೆ? ಎಂದರು ವೃತ್ತ ಪತ್ರಿಕೆಯೊಂದರಲ್ಲಿ ನಾನು ಓದಿದ್ದನ್ನು ತಿಳಿಸಿದೆ. ಮೆಲು ನಗೆಯು ಅವರ ಮುಖದಲ್ಲಿ ಮೂಡಿ ಮರೆಯಾಯ್ತು.

ಯಾವಾಗಲೂ ವಿಷಯವನ್ನು ಸರಿಯಾದ ಮೂಲದಿಂದ ತಿಳಿಯುವ ಪ್ರಯತ್ನ ಮಾಡಬೇಕು. ಗ್ರಂಥಾಲಯದಲ್ಲಿರುವ ಪುಸ್ತಕದಿಂದ ವಿಷಯಗಳು ತಿಳಿಯುತ್ತವೆ. ನೀನದನ್ನು ಓದಬಹುದೆಂದರು. ಸಂದರ್ಶನ ಅಲ್ಲಿಗೆ ಮುಗಿದಿತ್ತು.

ಚೀನೀಯರು ರಕ್ತದ ಗುಂಪನ್ನು ಕಂಡು ಹಿಡಿದಿರಲಿಲ್ಲ. ಕಂಡು ಹಿಡಿದವರು ಲ್ಯಾಂಡ್ ಸ್ಟೇಯ್ನರ್ !

ಮೂಲ : 'ರೀಡರ್ಸ್ ಡೈಜೆಸ್ಟ್' ಸಂಚಿಕೆಯ 'ಅಲೆಕ್ಸಾಂಡರ್ ವೈನರ್ ಅವರ 'ದಿ ಮ್ಯಾನ್ ಹೂ ಟೈಪ್ಡ್ ಹ್ಯುಮನ್ ಬ್ಲಡ್' ಲೇಖನ.

ಪ್ರಾರಂಭದ ಛೇಡಿಸುವಿಕೆಯ ನಂತರ ನಾವು ಉತ್ತಮ ಸ್ನೇಹಿತರಾದೆವು. ಎಂಟು ವರ್ಷಗಳು ಒಟ್ಟಿಗೆ ಕೆಲಸ ಮಾಡಿ Rh ಗುಂಪನ್ನು–ತಾಯ ಗರ್ಭದಲ್ಲೇ ಅಥವಾ ಹುಟ್ಟಿದ ಕೆಲವೇ ತಾಸುಗಳಲ್ಲಿ ಸಾವನ್ನಪ್ಪುವ, ಸಾವಿರಾರು ಮಕ್ಕಳ ನಿಗೂಢ ಸಾವಿಗೆ ಕಾರಣವಾಗುವುದರ ಮೂಲವನ್ನು ಕಂಡುಹಿಡಿದೆವು.

ವೈದ್ಯಕೀಯ ಇತಿಹಾಸದಲ್ಲಿ ಇವರ ಸಾಧನೆಗಳನ್ನು ಸರಿಗಟ್ಟುವವರು ವಿರಳ. ಪೋಲಿಯೋ ಲಸಿಕೆಗಳ ಬಗ್ಗೆ ಸಂಶೋಧನೆ ಬುನಾದಿ ಹಾಕಿದವರು, ಚರ್ಮದ ಅಲರ್ಜಿಗಳ ತಂತ್ರ ರೂಪಿಸಿದವರು, ಸ್ಟೇಯ್ನರ್. ಮೈಕ್ರೋಬ್‌ಗಳ ಮೇಲಿನ ಇವರ ಸಂಶೋಧನೆಗಳು ಟೈಫಸ್, ಹಾಗೂ ಬೆಟ್ಟ ಪ್ರದೇಶದಲ್ಲಿ ಕಂಡುಬರುವ ಜ್ವರ ನಿರೋಧಿಸಲು, ಲಸಿಕೆಗಳನ್ನು ಕಂಡು ಹಿಡಿಯಲು ಸಹಾಯವಾಯ್ತು. ರಕ್ತದ ಗುಂಪುಗಳ ವರ್ಗೀಕರಣ, ಜೀವ ಉಳಿಸುವ ರಕ್ತ ಸಂಯೋಜನೆಗೆ ದಾರಿಯಾಯ್ತು. ಇವುಗಳಲ್ಲಿ ಕೇವಲ ಯಾವುದಾದರೊಂದು ಕೆಲಸ ಸ್ಟೇಯ್ನರ್‌ನನ್ನು ಅಮರತ್ವಕ್ಕೇರಿಸಲು ಸಾಕಿತ್ತು. ಆದರೂ ಅವರ ಸಾಧನೆಗಳಲ್ಲಿ ಇದು ಕೇವಲ ಒಂದಂಶ.

ಪತ್ರಿಕೋದ್ಯಮಿಯೊಬ್ಬರ ಮಗನಾಗಿ ಆಸ್ಟ್ರೇಲಿಯಾದ ಬೇಡನ್‌ನಲ್ಲಿ ಹುಟ್ಟಿದ ಲ್ಯಾಂಡ್ ಸ್ಟೇಯ್ನರ್, ವೈದ್ಯಕೀಯ ಪದವೀಧರನಾಗಿ, ಅನಂತರ ನಾಲ್ಕು ವರ್ಷಗಳು ರಸಾಯನ ಶಾಸ್ತ್ರದ ಅಭ್ಯಾಸ ಮಾಡಿದರು. ಮುಂದೆ ವಿಯನ್ನ ವಿಶ್ವವಿದ್ಯಾಲಯವನ್ನು ಸೇರಿ ಅವರ ಜೀವನದ ಆಸಕ್ತಿಯ ವಿಷಯವಾದ, ರಕ್ತದ ನಿಗೂಢತೆಯ ಮೇಲೆ ಸಂಶೋಧನೆ ಆರಂಭಿಸಿದರು.

೧೯೦೦ ರವರೆಗೂ ಸಾಹಸಿ ವೈದ್ಯರು, ರಕ್ತ ಸಂಯೋಜನೆಯ ಬಗ್ಗೆ ಪ್ರಯತ್ನಿಸಿದ್ದು ಪರಿಣಾಮ ಎಷ್ಟು ಅಪತ್ಕಾರಿಯಾಗಿತ್ತೆಂದರೆ, ಫ್ರಾನ್ಸ್ ಇಟಲಿ ಹಾಗೂ ಇಂಗ್ಲೆಂಡ್ ಅಂಥ ಪ್ರಯೋಗಗಳನ್ನು ನಿಷೇಧಿಸುವ ಕಾನೂನನ್ನು ಜಾರಿಗೆ ತಂದವು. ವಿಯನ್ನಾದ ವೈದ್ಯಕೀಯ ಪರಿಣತರು ಈ ತೊಂದರೆಗಳ ಬಗ್ಗೆ ವಿವರಣೆ ಇತ್ತರು. ಅವರ ಪ್ರಕಾರ ಎಲ್ಲ ರಕ್ತವೂ ಒಂದೇ ರೀತಿ ಇರುತ್ತದೆ. ದಾನಿಗಳ ರಕ್ತ ರೋಗಿಷ್ಟವಾಗಿದ್ದರೆ, ಸಂಯೋಜನೆ ಅನರ್ಥಕಾರಿಯಾಗುತ್ತದೆ. ಲ್ಯಾಂಡ್ ಸ್ಟೇಯ್ನರ್‌ನಲ್ಲಿ ಈ ದೇವವಾಣಿಯನ್ನು ಪ್ರಶ್ನಿಸುವಷ್ಟು ಎದೆಗಾರಿಕೆಯಿತ್ತು.

ಸ್ಟೇಯ್ನರ್ ರಕ್ತದ ಮಾದರಿಯನ್ನು ಶೇಖರಿಸಿ, ಅದು ಗರಣೆಗಟ್ಟಲು ಒಟ್ಟು ಗರಣೆಯನ್ನು ರಕ್ತದ ತೆಳು ದ್ರವದಿಂದ ಬೇರ್ಪಡಿಸಿದರು. ಅನಂತರ ಒಬ್ಬ ವ್ಯಕ್ತಿಯ ಕೆಂಪು ರಕ್ತ ಕಣಗಳನ್ನು ಮತ್ತೊಬ್ಬ ವ್ಯಕ್ತಿಯ ಸೆರಂನೊಂದಿಗೆ ಸಮ್ಮಿಶ್ರಣ ಮಾಡಿದರು. ಫಲಿತಾಂಶಕ್ಕಾಗಿ ಇಣುಕಿದಾಗ, ಸೂಕ್ಷ್ಮದರ್ಶಕದಲ್ಲಿ ಹೊಸತೊಂದು ವಿಷಯವೇ ಗೋಚರಿಸಿತು. ಸಾಮಾನ್ಯವಾಗಿ ರಕ್ತಕಣಗಳು ಬಿಡಿ ಬಿಡಿಯಾದ ರಕ್ತ ಮರಳ ಕಣಗಳಂತೆ ಗೋಚರಿಸಿದರೂ ಪಾರದರ್ಶಕ ಗಾಜುಗಳ ಮೇಲೆ ಕೂಡಿಕೊಂಡ ದ್ರಾಕ್ಷಿ ಗೊಂಚಲಿನಂತೆ ಕಾಣುತ್ತಿತ್ತು!

ತಮ್ಮದೇ ಬರವಣಿಗೆಯಲ್ಲಿ, ತಾವು ಕಂಡುಹಿಡಿದುದನ್ನು ನಮೂದಿಸಿ ಚಿತ್ರ

ಗಳನ್ನು ರಚಿಸಿ, ಬಹು ಮುಖ್ಯವಾದ ಸಿದ್ಧಾಂತಗಳನ್ನು ಸ್ಟೇಯ್ನರ್ ಬರೆದಿಟ್ಟರು. ರಕ್ತ ಎಲ್ಲರದೂ ಒಂದೇ ರೀತಿಯಾಗಿರುವುದಿಲ್ಲ. ಕೆಲವು ರಕ್ತ ಕಣಗಳು ನಿಗೂಢವಾದ ಎ ವಸ್ತುವನ್ನು ಹೊಂದಿದ್ದರೆ, ಮತ್ತೆ ಕೆಲವು ಬಿ ವಸ್ತುವನ್ನು ಹೊಂದಿರುತ್ತವೆ. ಇವೆರಡನ್ನು ಹೊಂದದವರನ್ನು ಒ ಎಂಬ ಮೂರನೆಯ ಗುಂಪಿಗೆ ಸೇರಿಸಲಾಯ್ತು. ನಾಲ್ಕನೆಯ ಗುಂಪು ಎ ಬಿ ಅವರಿಗೆ ಗೋಚರಿಸಲಿಲ್ಲ. ಕಾರಣ ಪರೀಕ್ಷೆಗೊಳಪಟ್ಟ ಯಾರಲ್ಲೂ ಈ ವಿರಳವಾದ ರಕ್ತದ ಗುಂಪು ಕಂಡು ಬರದಿದ್ದುದು. ಆದರೆ ಒಂದು ವರ್ಷದ ನಂತರ, ಅವರ ವಿದ್ಯಾರ್ಥಿಯೊಬ್ಬ ಇದನ್ನು ಕಂಡುಹಿಡಿದ. ಇದರಿಂದ ಕಂಡು ಬಂದ ಸಿದ್ಧಾಂತ, ಎ ಗುಂಪಿನ ರಕ್ತವನ್ನು, ಅದೇ ಗುಂಪಿನ ರಕ್ತ ಹೊಂದಿದ ವ್ಯಕ್ತಿಯ ರಕ್ತದೊಂದಿಗೆ ಸಂಯೋಜಿಸಿದಾಗ, ಬಿ ಗುಂಪಿನ ರಕ್ತವನ್ನು ಬಿ ಗುಂಪಿನ ರಕ್ತದೊಂದಿಗೆ ಸಂಯೋಜಿಸಿದಾಗ ಏನೂ ತೊಂದರೆಯಾಗುವುದಿಲ್ಲ. ಆದರೆ ಎ ಗುಂಪನ್ನು ಬಿ ಗುಂಪಿನ ರಕ್ತದೊಂದಿಗೆ ಸಂಯೋಜಿಸಲೇಬಾರದು.

ಯಶಸ್ವೀ ಸಂಯೋಜನೆಯೀಗ ಸಾಧ್ಯವಿತ್ತು. ಆದರೆ ಈ ಕ್ರಾಂತಿಕಾರಕ ಸಂಶೋಧನೆಯನ್ನು ಉಪಯೋಗಿಸಿಕೊಳ್ಳಲು ಔಷಧ ತಯಾರಿರಲಿಲ್ಲ. ವಿಶ್ವದ ಲಕ್ಷ್ಯ ಈ ವಿಷಯದತ್ತ ಹರಿಯಲೂ ಇಲ್ಲ.

ಉತ್ತೇಜನವಿಲ್ಲದೆ ಲ್ಯಾಂಡ್ ಸ್ಟೇಯ್ನರ್ ದೈವದತ್ತ ಪ್ರತಿಭೆಯನ್ನು ಸರಿಯಾಗಿ ಉಪಯೋಗಿಸಿಕೊಳ್ಳಲಾಗಲಿಲ್ಲ. ಆದರೆ ನಿರಂತರ ಸಂಶೋಧನೆಗಳಿಂದ ಮಾನವನ ಜ್ಞಾನ ಹೆಚ್ಚಿಸಲು ಅವರಿತ್ತ ಕೊಡುಗೆ ಅಪಾರ. ಅವರದು ಅವಿಶ್ರಾಂತ ದುಡಿಮೆ. ಉಪನ್ಯಾಸಗಳನ್ನು ಮಾಡುತ್ತ, ಕಲಿಸುತ್ತ, ೩೬೩೯ ಶವ ಪರೀಕ್ಷೆ ನಡೆಸಿದರು.

೧೯೦೮ರಲ್ಲಿ ಲ್ಯಾಂಡ್ ಸ್ಟೇಯ್ನರ್ ಮುಖ್ಯ ಪೆಥೋಲಜಿಸ್ಟ್ ಆಗಿ 'ವಿಲ್ ಹೆಲ್ಮಿನಸ್ ಆಸ್ಪತ್ರೆ ಸೇರಲು, ವಿಶ್ವವಿದ್ಯಾಲಯವನ್ನು ಬಿಡಬೇಕಾಯ್ತು. ಅವರ ಕೈಲೀಗ ಹೊಸ ಯೋಜನೆಗಳಿದ್ದವು, ಭೀಕರ ಪೋಲಿಯೋದಿಂದಾಗಿ ವಿಯನ್ನಾ ತಳಮಳಿಸಿತ್ತು.

ಯಾವುದರಿಂದ ಪೋಲಿಯೋ ಪ್ರಾರಂಭವಾಯಿತು ಯಾರಿಗೂ ತಿಳಿಯದು. ಪರೀಕ್ಷೆಗಾಗಿ, ಆ ರೋಗವನ್ನು ಪ್ರಾಣಿಗಳಲ್ಲಿ ಹರಡಿಸುವ ಹಿಂದಿನ ವಿಧಾನ ಯಶಸ್ವಿಯಾಗಿರಲಿಲ್ಲ. ಆದರೀಗ ಸ್ಟೇಯ್ನರ್ ಆ ಕೆಲಸ ವಹಿಸಿಕೊಂಡರು. ರೋಗಕ್ಕೆ ಬಲಿಯಾಗಿ ಇತ್ತೀಚೆಗೆ ಸತ್ತ ವ್ಯಕ್ತಿಯೊಬ್ಬನ ಮೆದಳು ಬಳ್ಳಿಯನ್ನು ಪುಡಿಮಾಡಿ, ಅದನ್ನು ಇಂಜೆಕ್ಷನ್ ಮೂಲಕ ಕೋತಿಗಳಿಗೆ ಕೊಟ್ಟು, ಪರಿಣಾಮಕ್ಕಾಗಿ ಕಾದಿದ್ದು ವ್ಯರ್ಥವಾಯ್ತು. ಈ ಎಲ್ಲ ಕಾರ್ಯಕ್ರಮಗಳನ್ನು ಕೈಬಿಡಬೇಕೆಂದುಕೊಂಡಾಗಲೇ, ಕೋತಿಯೊಂದರ ಹಿಂದಿನ ಕಾಲುಗಳು ಪಾರ್ಶ್ವವಾಯುವಿಗೆ ತುತ್ತಾಯ್ತು. ಅದು ಪೋಲಿಯೋ ಆಗಿತ್ತು.

ಪ್ರಾಣಿಗಳ ಮೇಲಿನ ಪ್ರಯೋಗ ಮುಂದುವರಿದು, ಪ್ರಯೋಗ ಶಾಲೆಯಲ್ಲಿ ಅಧ್ಯಯನ ಮಾಡುವಷ್ಟು ರೋಗ ಬೇರೂರಿದಾಗ, ಪುಡಿಮಾಡಿದ ಕಾರ್ಡ್ ಸಸ್ಪೆನ್ಷನ್ ಅನ್ನು ಶೋಧಿಸಿ, ಸಾಮಾನ್ಯ ಬ್ಯಾಕ್ಟೀರಿಯಾಗಳನ್ನು ಹೊರತುಪಡಿಸಿದ ಮತ್ತಷ್ಟು ಸೂಜಿಮದ್ದು ನೀಡಿದಾಗ ಆ ಕೋತಿಗಳು ಪಾರ್ಶ್ವವಾಯುವಿಗೆ ತುತ್ತಾದವು, ಅದೊಂದು

ಮುಖ್ಯ ಹೆಜ್ಜೆಯಾಗಿತ್ತು. ಪೋಲಿಯೋ ವೈರಸ್‌ನಿಂದ ಹರಡಲ್ಪಡುವ ಒಂದು ರೋಗ ವೆಂದು ಖಚಿತವಾಯ್ತು.

ಈ ಘಟ್ಟದಲ್ಲಿ ಲ್ಯಾಂಡ್ ಸ್ಟೇಯ್ನರ್‌ರ ಆಸಕ್ತಿ ಕಡಿಮೆಯಾಯ್ತು. ತಾವು ಮಾಡಲಿಚ್ಛಿಸಿದ ಮುಖ್ಯ ಕೆಲಸವನ್ನುಮಾಡಿ ಮುಗಿಸಿದ್ದರು. ಲಸಿಕೆಯನ್ನು ಕಂಡು ಹಿಡಿಯುವ ಕೆಲಸದ ಮುಂದಿನ ಭಾಗವನ್ನು ಇತರರು ಮಾಡಬೇಕಿತ್ತು.

೧೯೧೯ರಲ್ಲಿ ಮೊದಲ ಮಹಾಯುದ್ಧ ದಲ್ಲಿ ಸೋತ ಪರಿಣಾಮವಾಗಿ ವಿಯನ್ನಾ ದಲ್ಲಿ ಅರಾಜಕತೆಯುಂಟಾಗಿತ್ತು. ಕಮ್ಯೂನಿಸ್ಟರು ಅಧಿಕಾರ ವಹಿಸಿಕೊಳ್ಳುವ ಬೆದರಿಕೆ ಹಾಕಿದರು. ಕಂಡಲ್ಲಿ ಗುಂಡಿಕ್ಕ ಲಾಗುತ್ತಿತ್ತು. ಹಣದುಬ್ಬರ ವಿಪರೀತ ವಾಗಿತ್ತು. ತನ್ನ ಸಂಬಳದ ಹಣವನ್ನು, ಸ್ಟೇಯ್ನರ್, ಸೂಟ್‌ಕೇಸ್‌ನಲ್ಲಿ ತುಂಬಿ ತರುತ್ತಿದ್ದರೂ ಅದೊಂದು ಬ್ರೆಡ್ಡಿನ ತುಣುಕಿಗೂ ಸಾಲುತ್ತಿರಲಿಲ್ಲ. ತನ್ನ ಎರಡು ವರ್ಷದ ಮಗನಿಗಾಗಿ, ಚಿಕ್ಕ ಬಟ್ಟಲು ಮೇಕೆಯ ಹಾಲು ಕೊಳ್ಳಲು ಮೂರು ಕಿ.ಮೀ. ದೂರ ನಡೆಯಬೇಕಿತ್ತು. ಒಂದು ದಿನ ಅವನ ಮನೆಯ ಸುತ್ತಲ ಬೇಲಿ ಮಾಯವಾಯ್ತು. ಯಾರದೋ ಮನೆಯ ಒಲೆಗೆ ಉರಿವ ಇಂಧನವಾಯ್ತೇನೋ? ಇನ್ನೂ ಕೆಡುಕೆಂದರೆ, ಪ್ರಯೋಗಶಾಲೆಗೆ ಯಾವ ವಸ್ತುವಿನ ಪೂರೈಕೆಯೂ ಇರಲಿಲ್ಲ. ಸಂಶೋಧನೆಗೆ ಅವಶ್ಯಕವಾದ ಪ್ರಾಣಿಗಳಿರ ಲಿಲ್ಲ. ಕೆಲಸ ಸಂಪೂರ್ಣ ತಟಸ್ಥವಾಯ್ತು.

ಹಾಲೆಂಡ್‌ನ ಆಸ್ಪತ್ರೆಯೊಂದರಿಂದ, ಸ್ಟೇಯ್ನರ್‌ಗೆ ತೀರಾ ಸಾಧಾರಣವಾದ, ರಕ್ತ ಹಾಗೂ ಮೂತ್ರ ಪರೀಕ್ಷೆ ಮಾಡುವ ಕೆಲಸ ವೊಂದಕ್ಕೆ ಕರೆ ಬಂತು. ಇದು ಸ್ಟೇಯ್ನ ರನ್ನು ಮುಗ್ಗ ಕಲಿಸುವಂತೆ ಕೇಳಿದಂತಾಯ್ತು, ಆದರೆ ಸ್ಟೇಯ್ನರ್ ತಕ್ಷಣ ಕೆಲಸಕ್ಕೆ ಒಪ್ಪಿ ದರು. ಈ ಘಟ್ಟದಲ್ಲಿ, ಆವರು ತಮ್ಮ ಅತಿ ದೊಡ್ಡ ಕೊಡುಗೆಯಾಗಬಹುದಾದ ಕೆಲಸ ದಲ್ಲಿ ನಿರತರಾಗಿದ್ದರು—ಪ್ರತಿ ವಿಷಜನಕ ಹಾಗೂ ಪ್ರತಿ ವಿಷವಸ್ತು ಪ್ರತಿಕ್ರಿಯೆಯ ತಪಾಸಣೆ ನಡೆಸುವುದು. ಇದು ಕೇಳುವಷ್ಟು ಕಷ್ಟಕರವಾದ್ದೇನಲ್ಲ. ಆಂಟಿಜನ್‌ಗಳು ಸಾಮಾನ್ಯವಾಗಿ ಪ್ರೋಟೀನ್‌ಗಳು. ಯಾವಾಗ ಹೊರಗಿನ ಈ ಪ್ರೋಟೀನ್‌ಗಳು ಶರೀರವನ್ನು ಪ್ರವೇಶಿಸುತ್ತವೆಯೋ ಆಗ ಶರೀರ, ಅವುಗಳನ್ನೆದುರಿಸಲು ವಿಶಿಷ್ಟವಾದ ಆಂಟಿಬಾಡಿಗಳನ್ನು ಉತ್ಪತ್ತಿಮಾಡುವುದರ ಮೂಲಕ ಪ್ರತಿಕ್ರಿಯೆ ತೋರುತ್ತದೆ, ನೀವು ಸಿಡುಬಿನ ಲಸಿಕೆಯನ್ನು ತೋಳಿನ ಚರ್ಮಕ್ಕೆ ಒತ್ತಿದರೆ, ಶರೀರವು ಆಂಟಿಬಾಡಿಗಳನ್ನು ಸೃಷ್ಟಿಮಾಡುವುದರೊಂದಿಗೆ ಪ್ರತಿಕ್ರಿಯೆ ತೋರಿಸುತ್ತದೆ. ಇದು ಶರೀರವನ್ನು ಅನೇಕ ವರ್ಷಗಳವರೆಗೂ ರೋಗದ ವಿರುದ್ಧ ಕಾಪಾಡುತ್ತದೆ.

ಸ್ಟೇಯ್ನರ್‌ನನ್ನು ಎಲ್ಲಕ್ಕಿಂತ ಹೆಚ್ಚು ಪ್ರಭಾವಿತಗೊಳಿಸಿದ್ದು, ಈ ವಿಷಯಗಳಲ್ಲಿದ್ದ ಅಸಾಮಾನ್ಯ ನಿಖರತೆ, ಪ್ರತಿಯೊಂದು ಪ್ರತಿ ವಿಷಜನಕಕ್ಕೂ, ಬೇರೆಯೊಂದು ಪ್ರತಿ ವಿಷ ವಸ್ತು ಇರುವಂತೆ ತೋರುತ್ತದೆ. ಸೋಂಕು ರಕ್ಷಣೆ ಹಾಗೂ ಅಲರ್ಜಿಗಳ ಬಗ್ಗೆ ಅವರ ಕೆಲಸ, ಅದರ ಇಡಿಯ ಗೂಢಾರ್ಥಕ್ಕೊಂದು ವಿವರಣೆ ನೀಡುವುದೇ ಆಗಿತ್ತು. ಅವರ ಪುಸ್ತಕ ವೈದ್ಯಕೀಯ ವಿಜ್ಞಾನದ 'ಬೈಬಲ್' ಎನಿಸಿತು.

ರಾಕ್‌ಫೆಲ್ಲರ್ ವಿಶ್ವವಿದ್ಯಾಲಯದ ತಮ್ಮ ಸಂಶೋಧನೆಯ ಪ್ರಯೋಗಾಲಯಕ್ಕೆ ಮುಖ್ಯಸ್ಥರಾಗುವಂತೆ ಆಹ್ವಾನಿತರಾದಾಗ, ೧೯೨೨ರಲ್ಲಿ, ಸ್ಟೀಯ್ನರ್ ನ್ಯೂಯಾರ್ಕ್‌ಗೆ ಹೋದರು. ಅವರಿಗೆ ಆ ಇನ್‌ಸ್ಟಿಟ್ಯೂಟ್, ತಮ್ಮ ಕನಸಿನ ಸಾಕಾರ ರೂಪದಂತಿತ್ತು. ತಾವು ಹಿಂದೆಂದೂ ನೋಡದಂಥ ಪ್ರಯೋಗಶಾಲೆ ಸೌಲಭ್ಯಗಳು, ಪ್ರಾಣಿಗಳು, ತಮಗೆ ಅವಶ್ಯಕವಾದಷ್ಟು ಸಹಾಯಕರು, ಸಮಾಲೋಚಿಸಲು ತಕ್ಕ ಮೇಧಾವಿಗಳು ಇದ್ದರು. ಹಿಂದಿನ ತಮ್ಮ ಪ್ರಿಯ ವಿಷಯವಾಗಿದ್ದ 'ರಕ್ತ'ದ ಬಗೆಗೆ ಪ್ರಯೋಗ ನಡೆಸಲು ಅವರೀಗ ಹಿಂತಿರುಗಬಹುದಿತ್ತು.

ಪ್ರಯೋಗಗಳು ಎ ಹಾಗೂ ಬಿ ಗುಂಪಿನ ರಕ್ತಕ್ಕಷ್ಟೇ ಸೀಮಿತವಾಗಿಲ್ಲ ಇನ್ನೂ ಅನೇಕ ವಿಷಯಗಳನ್ನೊಳಗೊಂಡಿದೆ ಎಂಬುದು ಸ್ಟೀಯ್ನರ್‌ಗೆ ಖಚಿತವಾಗಿತ್ತು. ಕಾಲಕ್ರಮದಲ್ಲಿ ರಕ್ತ ಬೆರಳಚ್ಚಿನಂತೆಯೇ ವೈಯ್ಯಕ್ತಿಕ ವಿಶೇಷತೆ ಹೊಂದುವುದೆನ್ನುವುದೂ ಆತನಿಗೆ ಖಾತ್ರಿಯಾಗಿತ್ತು. ಪ್ರತಿಭಾಶಾಲಿಯಾದ ತರುಣ ಸಹಾಯಕ ಡಾ॥ ಫಿಲಿಫ್ ಲಿವೈನ್‌ನ ಸಹಾಯದೊಂದಿಗೆ, ಹೊಸ ಹೊಸ ವಿಷಯಗಳ ಬಗ್ಗೆ ಸಂಶೋಧನೆ ನಡೆಸತೊಡಗಿದ. ಬೇಗನೆ ಎಂ.ಎನ್.ಪಿ. ಎಂಬ ಮತ್ತೂ ಮೂರು ರಕ್ತದ ಗುಂಪುಗಳು ಕಂಡುಬಂದವು. ಅವು ರಕ್ತ ಸಂಯೋಜನೆಯಲ್ಲಿ ಎ ಮತ್ತು ಬಿ ಗುಂಪಿನಷ್ಟು ಮುಖ್ಯವಾಗಿರಲಿಲ್ಲ. ಅವು ಯಾವುದೇ ಪ್ರತಿಕ್ರಿಯೆ ಉಂಟುಮಾಡುತ್ತಿರಲಿಲ್ಲ. ಆದರೆ ನ್ಯಾಯಾಂಗ ತನಿಖೆಯ ವಿಷಯದಲ್ಲಿ ಪಿತೃತ್ವ ಪ್ರತಿಪಾದನೆ ವಿಷಯದಲ್ಲಿ ಹಾಗೂ ರಕ್ತದ ಕಲೆಗಳನ್ನು ಗುರುತಿಸುವ ಬಗ್ಗೆ ಪ್ರಮುಖಪಾತ್ರ ವಹಿಸುತ್ತಿದ್ದವು.

೧೯೩೦ರ ಅಂತ್ಯಭಾಗದಲ್ಲಿ, ಮುಖ್ಯ ವೈದ್ಯಕೀಯ ತಪಾಸಣಾಧಿಕಾರಿಯ ಕಛೇರಿಯಲ್ಲಿದ್ದ ನನ್ನ ಪ್ರಯೋಗಶಾಲೆಯಲ್ಲಿ, ನಾನು ಸ್ಲೆಡರ್, ವುಲ್ಲಿ ಕೋತಿ, ರಿಸೆಸ್ ಕೋತಿ, ಹಸಿರು ಮಂಗ ಮುಂತಾದುವುಗಳ ಬಗ್ಗೆ ಸಂಶೋಧನೆ ನಡೆಸುತ್ತಿದ್ದೆ. ಸ್ಟೀಯ್ನರ್‌ನ ಸಹಾಯ ಕೇಳಿ, ಇಬ್ಬರೂ ಒಟ್ಟಿಗೆ ಕೆಲಸ ಮಾಡತೊಡಗಿದೆವು.

೧೯೩೭ರಲ್ಲಿ ನಾವು ರಿಸೆಸ್ ಕೋತಿಯ ರಕ್ತವನ್ನು ಮೊಲಗಳಿಗೆ ಇಂಜೆಕ್ಷನ್ ಮಾಡಿ ನಂತರ, ಆ ಮೊಲಗಳ ರಕ್ತವನ್ನು ತೆಗೆದು, ಆ ರಕ್ತ, ಮನುಷ್ಯನ ಕೆಂಪು ರಕ್ತ ಕಣದ ಮೇಲೆ ಹೇಗೆ ಪ್ರತಿಕ್ರಿಯೆ ತೋರುತ್ತದೆಂದು ಪರೀಕ್ಷಿಸುತ್ತಿದ್ದೆವು. ನೂರಕ್ಕೆ ೮೫ ಬಾರಿ ಸಿರಂ ಮನುಷ್ಯನ ಕೆಂಪು ರಕ್ತ ಕಣವನ್ನು ಗುಂಪುಗೂಡಿಸುತ್ತಿದ್ದೆವು. ರಿಸೆಸ್ ಮಂಗಗಳು ಮನುಷ್ಯನೊಂದಿಗೆ ರಕ್ತದ ಹೊಸ ವಿಷಯವೊಂದನ್ನು ಹಂಚಿಕೊಂಡಂತಿತ್ತು. ರಿಸೆಸ್ ಎನ್ನುವುದಕ್ಕಾಗಿ ನಾವು ಅದನ್ನು ಆರ್‌ಹೆಚ್ ಎಂದು ಕರೆದೆವು.

ಸಂಯೋಜನೆಯ ವಿಷಯದಲ್ಲಿ ಆರ್‌ಹೆಚ್ ವಿಷಯ ಎ ಮತ್ತು ಬಿ ಗುಂಪಿನಷ್ಟೇ ಮುಖ್ಯವಾಗಿರಲಿಲ್ಲವೆ? ಬಾಲ್ಟಿಮೋರ್‌ನಿಂದ ಡಾ॥ ರೇಮಂಡ್ ವೀಟರ್ಸ್, ಮೊದಲ ನಾಲ್ಕು ಗುಂಪುಗಳ ರಕ್ತ ಹೊಂದಿಕೆಯಾದರೂ, ಅವರ ಅನುಭವಕ್ಕೆ ಬಂದ, ಸಂಯೋಜನೆಯ ಉಗ್ರ ಪ್ರತಿಕ್ರಿಯೆಯ ಬಗ್ಗೆ ಬರೆದಿದ್ದರು. ಆರ್‌ಹೆಚ್ ಹೊಂದಾಣಿಕೆ ಇಲ್ಲದಿರುವುದೆ? ಅವರ ಉತ್ತರ 'ಹೌದು' ಎಂಬುದನ್ನು ನಾನು ಕಂಡು ಹಿಡಿದಿದ್ದೆ.

ಸ್ವಲ್ಪ ಸಮಯದಲ್ಲೇ ನ್ಯೂಜರ್ಸಿಯ ನೆವಾರ್ಕ್‌ನಲ್ಲಿ ಡಾ|| ಅವೆಸ್ ಬರ್ನ್ ಹ್ಯಾಮ್ ಹಾಗೂ ಲಿವೈನ್ ಅಸಾಮಾನ್ಯವಾದ ವಿಷಯವೊಂದನ್ನು ಎದುರಿಸಬೇಕಾಯಿತು. ಹೆಂಗಸೊಬ್ಬಳಿಗೆ 'ಎರಿತ್ರೋಬ್ಲಾಸ್ಟೋಸಿಸ್' ಎಂಬ ವಿಚಿತ್ರ ಖಾಯಿಲೆಯಿಂದ ಸತ್ತ ಮಗು ಹುಟ್ಟಿತ್ತು. ವಿಪರೀತ ನಿಶ್ಯಕ್ತಿ ಇದ್ದ ಅವಳಿಗೆ, ಹಿಂದೆ ಅವಳ ಗಂಡನ ರಕ್ತ ಸಂಯೋಜನೆ ಮಾಡಿದಾಗ, ಅವರಿಬ್ಬರ ರಕ್ತದ ಗುಂಪುಗಳು ಹೊಂದಿಕೊಳ್ಳುತ್ತಿದ್ದರೂ ಆ ಹೆಂಗಸು ಸಾಯುವ ಸ್ಥಿತಿಗೆ ಬಂದಿದ್ದಳು.

ತಂದೆಯಿಂದ ಪಡೆದುಕೊಂಡ ರಕ್ತದ ಗುಂಪಿನಿಂದಾಗಿ ಮಗುವಿನ ರಕ್ತ ತಾಯಿಯಿಂದ ಪಡೆದುಕೊಂಡ ರಕ್ತದ ಗುಂಪಿನ ಮೇಲೆ ಹೋರಾಟ ನಡೆಸಿತ್ತೆ. ಅದರ ಫಲವಾಗಿ ಮಗು ಸತ್ತಿರುವ ಸಾಧ್ಯತೆ ಇದೆಯೇ ಎಂದು ಆಶ್ಚರ್ಯವಾಯ್ತು ಲೆವೈನ್‌ಗೆ. ಅವಳ ಗಂಡನ ರಕ್ತದೊಂದಿಗೆ, ಆ ಹೆಂಗಸಿನ ರಕ್ತದ ಉಗ್ರಪ್ರತಿಕ್ರಿಯೆ ಈ ವಿಷಯವನ್ನು ಸೂಚಿಸಿತ್ತು. ಆ ವಿಷಯ ನಿಜವೂ ಆಗಿತ್ತು. ಲ್ಯಾಂಡ್ ಸ್ಟೇಯ್ನರ್ ಮತ್ತು ನಾನು, ರಿಸೆಸ್ ಮಂಗಗಳಲ್ಲಿ ಕಂಡುಕೊಂಡ ಆರ್‌ಹೆಚ್ ವಿಷಯ ಇಲ್ಲಿ ಸಂಬಂಧಪಟ್ಟುದಾಗಿತ್ತು. ಹಿಂದೆ ವ್ಯತ್ಯುರೂಪದ್ದಾದ ರಕ್ತದಹೊಂದಾಣಿಕೆಯಾಗದ ವಿಷಯವನ್ನು ಜಯಿಸುವ ದಾರಿಯೀಗ ನಿಚ್ಚಳವಾಗಿತ್ತು. ಲಕ್ಷಾಂತರ ಜನ ರೋಗಿಗಳು ಹಾಗೂ ರಕ್ತದಾನಿಗಳು ಆರ್‌ಹೆಚ್ ವಿಷಯಕ್ಕಾಗಿ ಈಗ ಪ್ರತಿವರ್ಷ ಪರೀಕ್ಷೆಗೊಳಪಡುತ್ತಾರೆ.

ಪ್ರತಿಯೊಬ್ಬರಿಂದಲೂ ಸ್ಟೇಯ್ನರ್ ಅತ್ಯಂತ ಪ್ರತಿಭಾಶಾಲಿ ಎಂದು ಗುರುತಿಸಲ್ಪಟ್ಟ. ಮೇಲಿನ ಒರಟುತನದ ಆಳದಲ್ಲಿ, ಸಂಶೋಧನೆಗಾಗಿಜೀವನವನ್ನು ಮುಡುಪಿಟ್ಟ ಸಂಕೋಚ ಪ್ರವೃತ್ತಿಯ ವ್ಯಕ್ತಿಯಾಗಿದ್ದ ಸ್ಟೇಯ್ನರ್ ೧೯೩೦ರಲ್ಲಿ ರಕ್ತದ ಗುಂಪಿನ ವಿಂಗಡಣೆಗಾಗಿ, ನೊಬೆಲ್ ಪ್ರಶಸ್ತಿ ಪಡೆದ ಸ್ಟೇಯ್ನರ್ ಬಗೆಗೆ ವಿಚಾರಿಸಿ ವೃತ್ತಪತ್ರಿಕೆಗಳು ಹಾಗೂ ಇತರೆಡೆಗಳಿಂದ ದೂರವಾಣಿ ಕರೆಗಳು ಇನ್ಸ್‌ಟಿಟ್ಯೂಟಿನ ಸ್ವಿಚ್ ಬೋರ್ಡ್ ಅನ್ನು ತುಂಬಿದವು. ಆತ ಯಾರೊಂದಿಗೂ ಮಾತಾಡಲು ನಿರಾಕರಿಸಿ, ತನ್ನಷ್ಟಕ್ಕೆ ಕೆಲಸದಲ್ಲಿ ತೊಡಗಿದ್ದರು. ಅಂದು ಸಂಜೆ ಮನೆಗೆ ಹೋದಾಗ ಆ ವಿಷಯವನ್ನು ಮನೆಯವರಿಗೂ ತಿಳಿಸಲೂ ಇಲ್ಲ. ಸ್ಟಾಕ್ ಹೋಮ್‌ನಿಂದ ಪ್ರಶಸ್ತಿ ಸಿಕ್ಕ ಬಗ್ಗೆ ಕೇಬಲ್ ಬಂದಾಗ "ನಾನು ನೊಬೆಲ್ ಬಹುಮಾನ ಪಡೆದಿದ್ದೇನೆ" ಎಂದಷ್ಟೇ ಹೆಂಡತಿ ಹೆಲನ್‌ಳಿಗೆ ಹೇಳಿ, ತನ್ನ ವಿಜ್ಞಾನ ಪತ್ರಿಕೆಗಳತ್ತ ಗಮನ ಹರಿಸಿದ.

ಬೆಳಿಗ್ಗೆ ೯ ರಿಂದ ಸಂಜೆ ೫ರವರೆಗೂ, ತನ್ನ ಪ್ರಯೋಗ ಶಾಲೆಯಲ್ಲಿ ಕೆಲಸ ಮಾಡಿದರೂ, ರಾತ್ರಿ ಊಟದ ನಂತರ, ಇನ್ನೂ ನಾಲ್ಕು ತಾಸುಗಳ ಕೆಲಸ ಕಾದಿರುತ್ತಿತ್ತು. ಹತ್ತು ವರ್ಷಗಳ ತನಕ ಬುಧವಾರದ ಸಂಜೆಯನ್ನು ನಾನವನೊಂದಿಗೆ ಕಳೆಯುತ್ತಿದ್ದೆ. ಊಟದ ಕೋಣೆಯಲ್ಲಿ ಕುಳಿತು, ಸೇಬು ತಿನ್ನುತ್ತಲೇ ಸಂಶೋಧನೆಯ ಬಗ್ಗೆ ಅಥವಾ ಪ್ರಕಟವಾಗಬೇಕಿದ್ದ, ಸಂಶೋಧನಾ ಪತ್ರಿಕೆಗಳ ಬಗ್ಗೆ ವಿಚಾರ ಮಾಡುತ್ತಿದ್ದೆವು.

೭೫ನೆಯ ವಯಸ್ಸಿನಲ್ಲೂ ಸ್ಟೇಯ್ನರ್‌ಗೆ ಬಿಡುವಿಲ್ಲದ ಕಾರ್ಯಕ್ರಮಗಳು. ೧೯೪೩ರ ಜೂನ್ ೨೪ ರಂದು ತೀವ್ರ ಹೃದಯಾಘಾತಕ್ಕೊಳಗಾದಾಗಲೂ, ಆತ ತನ್ನ ಪ್ರಯೋಗ

ಶಾಲೆಯಲ್ಲೇ ಕಾರ್ಯನಿರತನಾಗಿದ್ದ. ನೋವಿನಿಂದ ಕೂಡಿದ ಮುಂದಿನೆರಡು ದಿನಗಳಲ್ಲೂ, ಆತ ತನ್ನ ಪುಸ್ತಕದ ಬಗ್ಗೆ ಅಂದಿನ ಪ್ರಯೋಗಗಳ ವಿಷಯವಾಗಿ ತನ್ನ ಸಹಾಯಕರಿಗೆ ಸಲಹೆಗಳನ್ನು ಕೊಡುತ್ತಿದ್ದಾಗಲೇ ಆತನ ಪ್ರಾಣಪಕ್ಷಿ ಹಾರಿತು.

ಲ್ಯಾಂಡ್ ಸ್ಟೈಯ್ನರ್‌ನ ಇಚ್ಛೆಯಂತೆ, ಅವನ ಅಂತ್ಯಕ್ರಿಯೆ 'ನಾನ್‌ಟಕೆಟ್' ದ್ವೀಪದ ಚಿಕ್ಕ ಸ್ಮಶಾನವೊಂದರಲ್ಲಿ ನಡೆಯಿತು. ಸಮುದ್ರದ ಗಾಳಿಗೆದುರಾಗಿ ಹುಲ್ಲಿನಿಂದ, ಮುಚ್ಚಲ್ಪಟ್ಟ ಅವನ ಸಮಾಧಿ ಜನರ ಕಣ್ಣಿಂದ ಮರೆಯಾಗಿದೆ. ಪ್ರಶಾಂತವಾದ ಆ ಜಾಗ ನಿಜಕ್ಕೂ ಈ ಶತಮಾನದ ವೈದ್ಯಕೀಯ ಸಂಶೋಧನಾ ದಿಗ್ಗಜನಿಗೊಪ್ಪುವ ವಿಶ್ರಾಂತಿ ಧಾಮ. ಈ ವ್ಯಕ್ತಿಯ ಅತ್ಯುನ್ನತ ಸಂಶೋಧನೆ, ಜೀವಿಸಿರುವ ಪ್ರತಿ ವ್ಯಕ್ತಿಯ ಜೀವನವನ್ನು ಸ್ಪರ್ಶಿಸುತ್ತಿದೆ.



ನೀನೇನು ಕೊಡಬಲ್ಲೆ ಎನ್ನುವುದರ ಮೇಲೆ ನಿನ್ನ ಸುಖ ನಿಂತಿದೆಯೇ ಹೊರತು ನೀನೇನು ತೆಗೆದುಕೊಳ್ಳಬಲ್ಲೆ ಎನ್ನುವುದರ ಮೇಲಲ್ಲ.

—ಗಾಂಧೀಜಿ

ನೀರು ನುಂಗಿದ ನಾಣಿ

ಕೆ. ಸುಕನ್ಯಭಟ್
"ಶ್ರೀ ಶಾಕಾಂಬರಿ"
ಶಂಕರಮಠ ರಸ್ತೆ, ಧಾರವಾಡ-೪

ಕಾರ್ಮುಗಿಲುಗಳು ದಟ್ಟೈಸಿ, ಗರ್ಜಿಸಿ, ಸುರಿಸಿದ್ದ ಮಳೆಯಿಂದಾಗಿ ವಸುಂಧರೆ ಹಸಿರುಟ್ಟು ನಲಿದರೆ ಶಾಸ್ತ್ರಿಗಳಿಗೆ ಹೊತ್ತು ಹೋಗದಂತಾಗಿತ್ತು, ಯಾವಾಗ ಬಿಸಿಲು ಕಂಡೇನೊ....ಎಂದು ಚಡಪಡಿಸುತ್ತಿದ್ದ ವರಿಗೆ ಮಳೆ ಕಡಿಮೆಯಾದಾಗ ಖುಷಿ ಯಾಗಿತ್ತು. ನಾಲ್ಕು ದಿನಗಳಿಂದ ಮನೆ ಯೊಳಗೇ ಕೂತೂ-ಕೂತೂ ಕಾಲುಗಳು ಜಡ್ಡುಗಟ್ಟಿದಂತಾಗಿತ್ತು. "ಇವತ್ತಾದ್ರೂ ಒಂದಿಷ್ಟು ಸುತ್ತಾಡಿಕೊಂಡು ಬರ್ತೇನೆ"— ಎಂದುಕೊಂಡು ಮೇಲೆದ್ದರು.

"ಏ....ಸತ್ಯಾ, ನನ್ನ ಕೊಡೆ ಎಲ್ಲಿದ್ಯೇ? ಹುಡುಕಿ ಬೇಗ ತಂದ್ಕೊಡ್ತೀಯೂ? ಎಂದು ಪತ್ನಿಯನ್ನ ಕರೆದರು, ಉತ್ತರ ಬಾರ ದಿದ್ದಾಗ, "ಇವ್ಳಿಗೆ ಯಾವಾಗ್ಲೂ ಕೆಲ್ಸ ಇದ್ದದ್ದೆ"—ಎಂದುಕೊಳ್ಳುತ್ತಾ ಮತ್ತೊಮ್ಮೆ ಜೋರಾಗಿ ಕರೆದರು. "ಸ್ವಲ್ಪ ಮೆಲ್ಲಗೆ ಕರೀಬಾರ್ದೆ. ನಿಮ್ಗೆ ಕಿವಿ ಸ್ವಲ್ಪ ಹಾಗೇಂತ ಹೇಳಿ, ಎಲ್ರನ್ನು ಯಾಕೆ ಜೋರಾಗಿ ಕರೀ ಬೇಕು?"—ಎಂದು ಹುಸಿ ಮುನಿಸುತೋರಿ ಅಲ್ಲೇ ಮೂಲೆಯಲ್ಲಿ ಅವರನ್ನು ನೋಡಿ ನಗುತ್ತಿದ್ದ, ಜೀರ್ಣವಾಗಿದ್ದ ಕೊಡೆಯನ್ನ ಸತ್ಯಭಾಮ ತೆಗೆದುಕೊಟ್ಟರು.

"ಇವತ್ತು ತಾನೇ ಮಳೆ ಬಿಟ್ಟಿದೆ. ಹೊಸ ಮಣ್ಣು ಹಾಕಿದ್ರಿಂದ ಎಲ್ಲಾ ಕಡೆ ಜಾರ್ತಿದೆ. ವಾಕಿಂಗ್ ಹೋಗ್ಲಿಕ್ಕೆ ಅಷ್ಟು ಅರ್ಜೆಂಟ್ ಯಾಕೇಂತ? ಬಿದ್ದು ಕೈ ಕಾಲು ಮುರಿದ್ರೆ ದೇವ್ರೇ....ಗತಿ."—ಎಂದವಳಿಗೆ, "ಬಿದ್ರೆ ಎದ್ದು ಬರ್ತೇನೆ ಆಯ್ತಾ? ಹೆದರ್ಬೇಡಿ" ಎಂದು ತಾನೇ ಧೈರ್ಯ ಹೇಳಿದರು ನಗುತ್ತಾ. "ಈ ವಯಸ್ಸಲ್ಲಿ ಬೀಳೋದು ಸುಲಭ. ಆದ್ರೆ ಏಳೋದು ಅಷ್ಟು ಸುಲಭವಲ್ಲ ತಿಳೀತಾ? ಇನ್ನು ನಿಮ್ಮಿಷ್ಟ. ಏನು ಬೇಕಾದ್ರೂ ಮಾಡಿಕೊಳ್ಳಿ, ನಂಗೇನು"— ಎನ್ನುತ್ತಾ ತಾನು ಅರ್ಧದಲ್ಲಿ ಬಿಟ್ಟು ಬಂದಿದ್ದ ಕೆಲಸವನ್ನ ನೆನಪಿಸಿಕೊಂಡು ಒಳನಡೆದರು ಸತ್ಯಭಾಮ.

ನನಗಿಂತ್ಲೂ ವಯಸ್ಸಾದವ್ರು ಒಬ್ಬರೇ ವಾಕಿಂಗ್ ಹೋಗೋದಿಲ್ವೆ? ಇವ್ಳು ಹೇಳಿ ದ್ಹಾಗೆ ಕೇಳ್ತಾ ಇದ್ರೆ, ಮನೇಲೇ ಕೂರಿಸಿ ಬಿಡ್ತಾಳೆ ಅಷ್ಟೆ. ಇವತ್ತಿಗೂ ಕನ್ನಡಕ ಹಾಕದೆ ಓದಿ, ಬರೀತೇನೆ. ಎಷ್ಟು ನೆಟ್ಟಗೆ ನಡೀತೇನೆ. ತಿಂದದ್ದು ಜೀರ್ಣ ಆಗ್ತದೆ. ನಿದ್ದೇನೂ ಚೆನ್ನಾಗಿ ಬರ್ತದೆ. ಈಗಿನವ್ರಿಗೆ ಆ ಹಾಳು ಟಿ.ವಿ. ಮುಂದೆ ಕುತೂ-ಕೂತೂ ಕನ್ನಡಕ ಬಂದಿದೆ—ಎಂದು ಹೇಳಿಕೊಳ್ಳು ತ್ತಿರುವಾಗಲೇ....ಒಳಗಿನಿಂದ ಮೊಮ್ಮಗಳು

ಅಪರ್ಣಾ ಬಂದವಳೇ...."ಅಜ್ಜಾ ನಿಮ್ಮನ್ನ ಮುದಕ್ರೂಂತ ಯಾರು ಹೇಳ್ತಾರ್ಪ್ದು? ನೀವು ಇವತ್ತಿಗೂ ನಿಮ್ಮ ಮಗಂದ್ರಿಗಿಂತ ಗಟ್ಟಿಯಾಗಿದ್ದೀರಿ. ನಿಮ್ಮ ಆ ಹಾಳು ಮರೆವು ಒಂದನ್ನ ಬಿಟ್ರೆ"—ಎಂದು ರೇಗಿಸಿದಳು. "ಸಾಕು ಸುಮ್ನಿರೆ....ನಿನಗೆ ನನ್ನಷ್ಟು ವಯಸ್ಸಾದಾಗ ತಿಳಿಯುತ್ತೆ. ಈಗ್ಲೇ ನಿಂಗೆ ಇವತ್ತು ಕಲಿತದ್ದು ನಾಳೆಗೆ ನೆನಪಿರೋದಿಲ್ಲ, ನನ್ನನ್ನ ತಮಾಷೆ ಮಾಡ್ತೀಯಾ?"—ಎಂದು ಶಾಸ್ತ್ರಿಗಳು ಹೇಳಿ ಹೊರಗಡಿಇಟ್ಟರು. "ಕೊಡೆ ಮರೆತು ಬರ್ಬೇಡಿ....ಅಜ್ಜಿ ಬೈಯ್ತಾರೆ ಗೊತ್ತಾ" ಎಂದು ತನ್ನ ಪ್ರೀತಿಯ ಅಜ್ಜನನ್ನ ಎಚ್ಚರಿಸಿ ಬೀಳ್ಕೊಟ್ಟಳು ಅಪರ್ಣಾ.

ಶಾಸ್ತ್ರಿಗಳು ಹೊಸ್ತಿಲು ದಾಟುವುದೇ ತಡ, ಎಲ್ಲಿದ್ದನೊ ಪುಟ್ಟನಾಣಿ ಓಡಿ ಬಂದ. "ನಾನೂ....ಬತ್ತೀನೆ, ನಾನೂ ಬತ್ತೀನೆ ಅಜ್ಜಾ...." ಎಂದು ಹಟಹಿಡಿದ. "ಸುಮ್ನೆ ಮನೇಲಿರ್ತೀಯೊ....ಇಲ್ವೋ. ಟಿವಿ ನೋಡ್ತಾ ಇರು ಪುಟ್ಟಾ"—ಎಂದಳು ಅಪರ್ಣಾ. ಹಟ ನಿಲ್ಲದಾದಾಗ, ಒಳಗಿದ್ದವರನ್ನ ಕರೆದಳು. ಬರುವಾಗಲೇ ಗರಿ-ಗರಿ ಚಕ್ಕುಲಿಯನ್ನ ಹಿಡಿದುಕೊಂಡೇ ಬಂದ ನಾಣಿಯ ಅಜ್ಜಿ, ಅವನಿಗೆ ಆಸೆ ತೋರಿಸಿ ಉಳಿಸಿಕೊಳ್ಳಲು ಪ್ರಯತ್ನಿಸಿದರು. ಸೋತು ಹೋದರು. ಅವನಮ್ಮ ಬಂದು ಬಿಸ್ಕತ್ತಿನ ಆಸೆ ತೋರಿಸಿದಳು. ಅಜ್ಜಿಯಿಂದ ಚಕ್ಕುಲಿಗಳನ್ನ ಪಡೆದು ಮುತ್ತನ್ನಿತ್ತು, ಜೇಬಿನೊಳಗೇ ಚಕ್ಕುಲಿಗಳನ್ನ ಹಾಕಿಕೊಂಡಾಗ, "ಥೂ....ನಿನ್ನ ಎಣ್ಣೆ ಆಗ್ತದೆ, ತೆಗಿ ಹೊರಗೆ"—ಎಂದು ಸುಗುಣ ಗದರಿದಳು. ಕಿವಿಗೊಡದ ನಾಣಿ ಅಜ್ಜನ ಹಿಂದೆ ಓಡಿದ, ಗೇಟಿನ ಬಳಿಯಿಂದಲೇ....ತಾನು ಅಂಗಿಒಳಗೆ ಅಡಗಿಸಿಟ್ಟುಕೊಂಡಿದ್ದ ಕಾಗದದ ಎರಡು ದೋಣಿಗಳನ್ನ ಮೇಲೆತ್ತಿ ಅವರಿಗೆ ತೋರಿಸಿದ, ಅವನು ಅವರಿಗೆ ಗೊತ್ತಾಗದಂತೆ ಅಡಗಿಸಿಕೊಂಡ ರೀತಿಯನ್ನ ನೋಡಿ.... ಸುಗುಣಾ...."ಅತ್ತೆ, ಇವ್ನಿಗೆ ಮಾತಾಡ್ಲಿಕ್ಕೆ ಸರಿ ಬರದೆಇದ್ರು ತುಂಟತನ ಮಾತ್ರ ಕಮ್ಮಿಯಾಗಿಲ್ಲ ಅಲ್ವ"....ಎಂದಳು.

ಅಜ್ಜನ ಕೈಹಿಡಿದು ರಸ್ತೆ ಬದಿಯಲ್ಲಿ ಕುಣಿದಾಡುತ್ತಿದ್ದ ನಾಣಿ ದಾರಿಯಲ್ಲಿ, ಸಿಕ್ಕಿದವರಿಗೆಲ್ಲಾ ದೋಣಿಗಳನ್ನು ತೋರಿಸಿದ. ಜೇಬಿನೊಳಗಿದ್ದ ಬಿಗಿಲು (ವಿಷಲ್) ಹೊರತೆಗೆದು ಜೋರಾಗಿ ಊದಿದ. "ಅಜ್ಜಾ.... ನಾ....ಬಿಗಿಲೂದಿದ್ದಕ್ಕೆ ಆ ಮೋಡ....ಹೆದ್ರಿ ಓಯಿ (ಓಡಿ) ಹೋತಲಾ?" ಎಂದು ಚಪ್ಪಾಳೆ ತಟ್ಟಿ ಖುಷಿ ಪಟ್ಟ.

ಅಹ್ಲಾದಕರವಾದ ವಾತಾವರಣದಲ್ಲಿ, ಅಸ್ತಮಿಸಲಡಿಇಡುತ್ತಿರುವ ನೇಸರನ ಹೊಂಬೆಳಕು ಆಗಸಕ್ಕೆಲ್ಲಾ ವಿಶೇಷ ಮೆರುಗನ್ನಿತ್ತಿತು. ಹೋಗಿ ಎಷ್ಟೊತ್ತಾಯ್ತು. ಇನ್ನೂ ಯಾಕೆ ಬರ್ಲಿಲ್ಲ—ಎಂದು ಸತ್ಯಭಾಮ ಪೇಚಾಡಿಕೊಂಡರು. ಅಷ್ಟರಲ್ಲಿಯೇ ಶಾಸ್ತ್ರಿಗಳ ಸವಾರಿ ಆಗಮಿಸಿತು. "ಯಾಕಿಷ್ಟು ತಡ"—ಎಂದು ಕೇಳಿದರು ಸತ್ಯ, ಉತ್ತರಿಸಲೂ ಪುರುಸೊತ್ತಿಲ್ಲದವರಂತೆ ಶಾಸ್ತ್ರಿಗಳು ಜೋರಾಗಿ...."ಏ....ಮಾಣಿ.... ಪುಟ್ಟಾ....ಇಲ್ನೋಡು ನಿಂಗೇಂತ ಗೋಲಿ ಪೆಪ್ಪರ್‌ಮಿಂಟ್ ತಂದಿದ್ದೇನೆ. ಬಾ....ಮರಿ ....ಬೇಗ...." ಎಂದು ಕರೆಯುತ್ತಿದ್ದುದನ್ನ ಕಂಡ ಭಾಮ ಅಚ್ಚರಿಯಿಂದ—"ಅವ್ನೆಲ್ಲಿದ್ದಾನೆ ಮನೇಲಿ? ನಿಮ್ಜೊತೇನೆ ಅವ್ನೂ ಹೋದದ್ದಲ್ವಾ?" ಎಂದರು. ನಾಣಿ ಹೊರ

ಗೆಲ್ಲೊ ಅಡಗಿರಬೇಕೆಂದುಕೊಂಡು—"ಬಾ ....ಪುಟ್ಟಾ....ನಿಂಗೆ ನಾವ್ಯಾರೂ ಬೈಯಲ್ಲ ...."ಎಂದಳು ಹೊರಬಂದ ಸುಗಣ. ಎಲ್ಲವನ್ನು ಕೇಳಿಸಿಕೊಂಡು ಅಪರ್ಣಾ....ಹೊರಗೆಲ್ಲಾ ಹುಡುಕಿ ಒಳಬಂದು...."ಅನ್ನೆಲ್ಲೂ ಅಡಗಿಲ್ಲ. ಎಲ್ಲಿ ಬಿಟ್ಟು ಬಂದಿರಿ ಅಜ್ಜಾ ಅನ್ನನ್ನ....?" ಎಂದಳು.

ಕೂಡಲೇ ಶಾಸ್ತ್ರಿಗಳು.... "ನಾ ನ್ಯಾಕೆ ಬಿಟ್ಟುಬರ್ಲಿ ? ನಾನು ಅನ್ನನ್ನ ಕರ್ಕೊಂಡು ಹೋಗಿದ್ರೆ ತಾನೆ. ನಾನೊಬ್ನೇ ಹೋದದ್ದು ವಾಕಿಂಗ್. ಬಂದದ್ದು ನಾನೊಬ್ನೆ. ಅದ್ಕೇ ಅಲ್ವಾ. ವಾಣಿಗೇಂತ ಗೋಲಿ ಪೆಪ್ಪರ್ ಮಿಂಟ್ ತಂದದ್ದು. ನಿಮ್ಗೆಲ್ಲೋ ಭ್ರಮೆ ಅಷ್ಟೆ." ಎಂದು ತಮ್ಮನ್ನು ಸಮರ್ಥಿಸಿಕೊಂಡರು. "ಅಯ್ಯೋ ದೇವ್ರೆ....ಏನು ಹೇಳ್ತಿದ್ದೀರಿ ಮಾವಯ್ಯ....ಎಲ್ಲಿ ಬಿಟ್ಟು ಬಂದ್ರಿ ಅನ್ನನ್ನ...." ಎಂದಳು ಗದ್ಗದಿತಳಾಗಿ ಸುಗುಣಾ. "ಪಾಪಪದ್ದಕ್ಕೆ ಮಾತು ಬೇರೆ ನಿಧಾನ. ಕರೆದಿದ್ರೂ ನಿಮ್ಗೆ ಕೇಳ್ಸಿತ್ತಾ. ಕಿವಿ ಬೇರೆ ದೂರ....ಎಂಥಾ ಕೆಲ್ಸ ಆಯ್ತು. ನೀವೇ.... ರಸ್ತೇಲಿ ಕೈಹಿಡಿದುಕೊಂಡು, ಕರೆದುಕೊಂಡು ಹೋದದ್ದನ್ನ ನಾವೆಲ್ಲಾ ನೋಡಿದ್ದೇವೆ—ಎಂದರು ಸತ್ಯಭಾಮ ಗಾಬರಿಯಿಂದ "ನೀವೋ....ನಿಮ್ಮ ಮರೆವೋ ....ಎಲ್ಲಿ ಬಿಟ್ರಿ ಆ ಮಗುವನ್ನ ?" ಎಂದು ಪತ್ನಿ ಮತ್ತೊಮ್ಮೆ ದೂಷಿಸುತ್ತಾ ಪ್ರಶ್ನಿಸಿದಾಗ ಶಾಸ್ತ್ರಿಗಳು "ನಾನು ಕರೆದುಕೊಂಡೇ ಹೋಗಿಲ್ಲ" ಎಂದು ದಬಾಯಿಸಿದರು. ಅಜ್ಜನಿಗೆ ನೆನಪು ಮಾಡಿಕೊಟ್ಟು ಸಾಕಾದ ಅಪರ್ಣಾ.... "ನಾವೇ....ಹುಡುಕುವಾ...., ಅಜ್ಜಂಗೆ ಕರ್ಕಂಡ್ಹೋಗಿದ್ದೇ ನೆನಪಿಲ್ಲ"ಎಂದು ಹೊರಗೋಡಿದಳು. ಶಾಸ್ತ್ರಿಗಳು ಮರೆಯದೆ ತಂದ ಕೊಡೆ ಮಾತ್ರ "ನೋಡಿ ನನ್ನನ್ನ ಮಾತ್ರ ಮರೆಯದೆ ತಂದಿದ್ದಾರೆ"—ಎಂದು ತಿಳಿಸಲಿಕ್ಕಾಗಿ ಬಾಗಿಲ ಹಿಂದೆ ಇಟ್ಟದ್ದು ಇದ್ದಕ್ಕಿದ್ದಂತೆ ಬಿತ್ತು.

ಕೊನೆಯ ಪ್ರಯತ್ನವೆಂಬಂತೆ ಸತ್ಯಭಾಮ ಗಂಡನ ಕೈಹಿಡಿದು, "ಎಲ್ಲೆಲ್ಲಿಗೆ ಹೋದ್ರಿ ? ಏನೇನು ಮಾಡಿದ್ರಿ ? ನೆನಪಿಸಿಕೊಳ್ಳಿ"—ಎಂದು ಚಿಕ್ಕ ಮಗುವನ್ನು ಪುಸಲಾಯಿಸುವಂತೆ ಕೇಳಿದರು. ಶಾಸ್ತ್ರಿಗಳು ಸುಮ್ಮನೇ ಇದ್ದಾಗ, "ನೋಡಿ, ಅನ್ನ ಕೈಯಲ್ಲಿ ಇಲ್ಲಿಂದ ಹೋಗುವಾಗ ಚಕ್ಕುಲಿಗಳು, ದೋಣಿಗಳು ಇದ್ದವು. ಹಾರಿಕೊಂಡು, ಖುಷಿಯಿಂದ ನಡೀತಿದ್ದ. ಅಂಗಿಲೆಲ್ಲಾ ಎಣ್ಣೆ ಮಾಡಿಕೊಂಡಿರಬಹುದಲ್ವೆ ?–ನೆನಪಾಯಿತಾ ....ಈಗ್ಲಾದ್ರೂ...." ಎಂದು ಕೇಳಿದರು. "ಚಕ್ಕುಲಿ, ದೋಣಿ" ಎಂದ ಪದಗಳನ್ನು ಕೇಳಿದೊಡನೆಯೇ ಶಾಸ್ತ್ರಿಗಳು ನೆನಪು ಮಾಡಿಕೊಳ್ಳತೊಡಗಿದರು. ಹಾಂ....ಈಗ ನೆನಪಾಯಿತು ನೋಡು....ಹಾಳು ಮರೆವು ನನಗೆ. ಅಂದ್ಹಾಗೆ....ಅವ್ನು ನಂಗೂ ಒಂದು ತುಂಡು ಚಕ್ಕುಲಿ ಕೊಟ್ಟಿದ್ದ....ದಾರಿ ಉದ್ದಕ್ಕೂ ಕೈಹಿಡಿದೆಳೆಯುತ್ತಿದ್ದ.... ಎಲ್ಲೋದ....? ಎಂದು ತಮ್ಮನ್ನೇ ಪ್ರಶ್ನಿಸಿಕೊಂಡರು. ಗಾಬರಿ....ಅವರ ಮಾತು–ಮುಖದಲ್ಲಿ ಸ್ಪಷ್ಟ ಕಾಣಿಸಿತು.

ಈಗ ತತ್ತರಿಸುವ ಸರದಿ ಸತ್ಯಭಾಮರದ್ದಾಯಿತು. ಒತ್ತಿ ಬರುವ ಅಳುವನ್ನು ಹತೋಟಿಯಲ್ಲಿರಿಸಿಕೊಂಡು ಭಾಮ—"ನೋಡಿ.... ಗಾಬರಿ ಆಗ್ಬೇಡಿ. ಎಲ್ಲಿ ಕೂತಿದ್ರಿ ? ಏನೇನು ಮಾಡಿದ್ರಿ ? ಎಷ್ಟೊತ್ನಲ್ಲಿ ಅದಾದರೂ ನೆನಪುಂಟಾ ? ಎಲ್ಲಿರಬಹುದು ಅವನೀಗ ?" ಎಂದು ಗಂಡನನ್ನು ಪ್ರಶ್ನಿಸಿದರು.

"ನಾನೂ....ಅವ್ನೂ ಅದೇ ಕೆರೆ ದಂಡೆಲೀ ಕೂತಿದ್ವಿ. ನಾನು ಕತೆ ಹೇಳ್ತಿದ್ದೆ. ಕತೆ ಮುಗಿಸಿ ನಾನಲ್ಲಿಂದ ಎದ್ದೆ. ಅವ್ನು ಮಾತ್ರ ಅಲ್ಲಿ ಇರ್ಲಿಲ್ಲಾ. ನನ್ಗೆ ಆಗ ನಂಜೊತೆ ನಾಣಿ ಬಂದದ್ದಾ, ಶೀನು ಬಂದದ್ದಾ ಎಂತ್ಲೇ ಗೊತ್ತಾಗ್ಲಿಲ್ಲ. ಶೀನು ದೊಡ್ಡವನಲ್ವಾ? ಮನೆಗೆ ಓಡಿ ಬಂದಿರಬಹುದೆಂದುಕೊಂಡೆ. ನಂಜೊತೆ ನಾಣೀನೇ.... ಇದ್ದದ್ದೂಂತ ಗೊತ್ತಾಗಿದ್ರೆ ಹುಡುಕುತ್ತಿದ್ದೆ. ಹಾಗೇ.... ಬರ್ತಿದ್ನಾ; ಅವನೆಲ್ಲಿ ಅಡಗಿ ಕುಳಿತಿರಬಹುದೂಂತ...." ಎಂದು ಹೇಳಿದ ಶಾಸ್ತ್ರಿಗಳು ತಾವು ಚಪ್ಪಲಿ ಹಾಕಿಕೊಂಡರು.

ನೀವಿಲ್ಲೇ ಇರಿ....ಇನ್ನು ನಿಮ್ಮನ್ನ ಹುಡುಕ್ಲಿಕ್ಕೆ ಯಾರು ಹೋಗ್ಬೇಕು? ಎಂದು ಅವರನ್ನಲ್ಲಿಯೇ ಇರಲು ಹೇಳಿ ಓಡುನಡಿಗೆಯಲ್ಲಿ ಗೇಟು ದಾಟಿದರು ಭಾಮ. ದೇವ್ರೇ ಅವ್ನನ್ನ ಕಾಪಾಡಪ್ಪ. ವಯಸ್ಸಾದವರ ಜತೆ ಅದೂ ಮರೆವೂ ಹೆಚ್ಚಾಗಿದ್ದವರ ಜೊತೆ, ಮಾತು ಸರಿಬಾರದ ಮಗುವನ್ನು ಹೋಗಲು ಬಿಟ್ಟದ್ದು ನಮ್ಮದೇ ತಪ್ಪು. ದೋಣಿ ಹುಚ್ಚು ಅದಕ್ಕೆ. ಪಾಪ....ನೀರಿಗಿಳಿಯದಿದ್ರೆ ಸಾಕು" ಒಂದೇ ಸಮನೆ ದೇವರಲ್ಲಿ ಮೊರೆಯಿಟ್ಟರು. ಹರಕೆ ಕೂಡಾ ಹೊತ್ತರು.

ಸುರಿದ ಮಳೆಯಿಂದಾಗಿ, ತುಂಬಿ ತುಳುಕುತ್ತಿದ್ದ ಕೆನ್ನೀರ ಕೆರೆ ದಂಡೆಯ ಹತ್ತಿರ ಆಗಲೇ ಆಳುಗಳೂ ಸೇರಿಯಾಗಿತ್ತು. "ಮಾಣಿ" ಸಿಕ್ಕಿದ್ನಾ? ಎಂದು ಕೇಳಲು ಬಾಯಿ ತೆರೆದಾಗ ಸೊಸೆ-ಮೊಮ್ಮಗಳು ಅಳುವುದು ಕಂಡಿತು. ಮಾತಾಡಲೂ ಶಕ್ತಿ ಇಲ್ಲದಂತಾಗಿ ಕುಸಿದು ಕುಳಿತರು, ಕಂಬನಿಯು ಕೋಡಿ ಹರಿಸಿದರು. ಅಜ್ಜ ಸತ್ಯಭಾಮ ಅಲ್ಲಿದ್ದ ಕಲ್ಲಿನ ಮೇಲೆ ಅರ್ಧ ತಿಂದಿರಿಸಿದ ಚಕ್ಕುಲಿ.... ಇಲ್ಲಿಯೇ ನಾಣಿ ಕುಳಿತದ್ದು ಎಂದು ಹೇಳಿತು. ಸದಾ ನಾಣಿ ಜತೆಗಿರುತ್ತಿದ್ದ (ಜೇಬಿನೊಳಗಿರುತ್ತಿದ್ದ) ಬಿಗಿಲು, ಅವನ ಪ್ರೀತಿಯ ಕೆಂಪು ಬಣ್ಣದ ಬಿಗಿಲು, ದಿಗಿಲು ಹುಟ್ಟಿಸುವಂತೆ, ಆಳುಗಳ ಕಾಲ್ತುಳಿತಕ್ಕೆ ಸಿಕ್ಕಿ ಪಕ್ಕದಲ್ಲಿ ಪುಡಿ-ಪುಡಿಯಾಗಿತ್ತು. ಕಾಗದದ ದೋಣಿಗಳು ಆಕಾರ ಕಳೆದುಕೊಂಡರೂ.... ಕತೆ ಹೇಳುತ್ತಾ....ತಮ್ಮ ಪುಟ್ಟ ದಣಿ (ಒಡೆಯ) ಇಲ್ಲಿದ್ದಾನೆ ಎಂದು ತೋರಿಸುತ್ತಾ, ಅತ್ತಿತ್ತ ಓಲಾಡುತ್ತಾ ತೇಲುತ್ತಿದ್ದವು. ಸಾವು ತೊಟ್ಟಿಲು ಸೇರಿದ ಮುಗ್ಧ ನಾಣಿಗಾಗಿ ಮರುಗುತ್ತಾ, ನೇಸರನೂ ಮುಳುಗಿದ್ದ ಬಾನಂಚಿನಲ್ಲಿ.

ಯಾವುದಕ್ಕೂ ಅಂಜಬೇಡಿ, ಅದ್ಭುತ ಕೆಲಸಗಳನ್ನು ನೀವು ಮಾಡಬಲ್ಲಿರಿ. ಭಯಪಟ್ಟರೆ ನಿಮ್ಮಿಂದ ಯಾವ ಕೆಲಸವೂ ಆಗುವುದಿಲ್ಲ.

ಯಾವುದಾದರೂ ಕೆಲಸ ಮಾಡುತ್ತಿರುವಾಗ, ಆ ಕೆಲಸದಲ್ಲಿಯೇ ಮಗ್ನರಾಗಿರಬೇಕು, ಅದೇ ಪೂಜೆ ಎಂದು ಭಾವಿಸಬೇಕು.

—ಸ್ವಾಮಿ ವಿವೇಕಾನಂದ

ಸ್ಪೀಡ್ ಬ್ರೇಕರ್ಸ್ ಯಾನೆ ಟೊಂಕ ಮುರುಕಗಳು

ಡಾ|| ಸ. ಜ. ನಾಗಲೋಟಿಮಠ

೨೫ 'ಶಾಂತಾ' ಬಸವ ಕಾಲೋನಿ
ಬೆಳಗಾವಿ-೫೯೦ ೦೧೦

ಜಗತ್ತಿನ ಧಾವಂತಕ್ಕೆ ಬಿರಿಹಾಕುವ ವೇಗ ತಡೆಗಳು ಮೇಲುನೋಟಕ್ಕೆ ಅಪಾಯಕಾರಿಗಳು ಎನ್ನಿಸಿದರೂ ಅವು ವ್ಯಕ್ತಿಯ ಸೃಜನಶೀಲತೆಯ ಉತ್ಕರ್ಷಣೆ ಪ್ರೇರಕಗಳಾಗುವುದೂ ಸಾಧ್ಯವಿದೆ.

ಸ್ಪೀಡ್ ಬ್ರೇಕರ್ಸ್ ಎಂದರೆ ವೇಗ ತಡೆಗಳು ಎಂದು ಅರ್ಥ. ಇವು ರಸ್ತೆಯ ಮೇಲೆ ಅಡ್ಡಲಾಗಿ ಮಲಗಿರುವ ಹಾವಿನಂಥ ಉಬ್ಬುಗಳು. ಯಾರು ಇವನ್ನು ನೋಡಿಲ್ಲ? ಯಾರು ಇವುಗಳ ಪ್ರಸಾದ ಪಡೆದಿಲ್ಲ? ಅಂತಿಂಥ ವ್ಯಕ್ತಿಗಳ ಮಾತು ಬಿಡಿರಿ. ದೊಡ್ಡ ದೊಡ್ಡ ರಾಜಕಾರಣಿಗಳೇ ತಮ್ಮ ಸೊಂಟವನ್ನು ಮುರಿದುಕೊಂಡಿದ್ದಾರೆ! ಅಷ್ಟು ಶಕ್ತಿಯುತವಾದವು ಇವು. ಬೇಡ ಬೇಡ ಎಂದರೂ ಹುಟ್ಟುವ ಮಕ್ಕಳಂತೆ ವೇಗತಡೆಗಳು ಹುಟ್ಟುತ್ತವೆ. ಭಾರತದ ಜನಸಂಖ್ಯೆಯನ್ನು ಖಚಿತವಾಗಿ ಇಷ್ಟೇ ಎಂದು ಹೇಳಲು ಬರುವುದಿಲ್ಲ. ಯಾಕೆಂದರೆ ನೀವು ಹೇಳುವಷ್ಟರಲ್ಲಿ ಅನೇಕ ಶಿಶುಗಳು ಹುಟ್ಟಿರುತ್ತವೆ. ಅಂತೆಯೆ ಸ್ಪೀಡ್‌ಬ್ರೇಕರುಗಳ ಸಂಖ್ಯೆಯನ್ನೂ ಹೇಳಲು ಬರುವುದಿಲ್ಲ.

ಸಮತಾವಾದ

ಮುಂಜಾನೆ ಆ ರಸ್ತೆಯಲ್ಲಿ ಏನೇನೂ ಇರುವುದಿಲ್ಲ. ಸಂಜೆ ಅನ್ನುವಷ್ಟರಲ್ಲಿ ರಸ್ತೆಗೆ ಅಡ್ಡಲಾಗಿ ಹೆಬ್ಬಾವಿನಂತೆ ಮಲಗಿರುತ್ತದೆ. ಅದು ಯಾವಾಗ ಬಂತು, ಎನ್ನುವದು ಒಡೆಯಲಾರದ ಒಗಟು. ನೀವು ನಿತ್ಯ ವಾಯುವಿಹಾರಕ್ಕೆ ಹೋಗುತ್ತಿರಬಹುದು. ಇಂದು ನಸುಕಿನಲ್ಲಿ ಹೋಗಿ ಬಂದಿರಬಹುದು. ನಾಳೆ ನೀವು ಅದೇ ಪರಿಚಿತ ರಸ್ತೆಯಲ್ಲಿ ಚಲಿಸುವಾಗ ಎಡವಿ ಬೀಳುತ್ತೀರಿ. ಏನೆಂದು ನೋಡಿದರೆ ಕರಿಯ ಹಾವು! ನಿಮ್ಮ ಮೊಳಕಾಲು ಮುರಿದಿರುತ್ತದೆ. ನೋವಿನಿಂದ ಬಳಲುತ್ತ ಯಾರು ಇದನ್ನು ಇಲ್ಲಿ ತಂದು ಹಾಕಿದರು ಎಂದು ರೋದಿಸುತ್ತೀರಿ. ನಾನು ನಡೆಯುವುದಿಲ್ಲ. ಯಾವಾಗಲೂ ದ್ವಿಚಕ್ರ ವಾಹನದ ಮೇಲೆ ಸವಾರಿ ಮಾಡುತ್ತೇನೆಂದು ಅನ್ನಬಹುದು. ಆಗಲೋ ಅದು 'ರೊಹಟಾಂಗ ಪಾಸ್' ಎಂದೇ ಹೇಳಿಬೇಕು. ರೊಹಟಾಂಗ ಪಾಸ್ ಎಂದರೆ ಮನಾಲಿಯಿಂದ ಟಿ ಬೆಟ್ಟ ಗೆ ಹೋಗುವ ಒಂದು ದಾರಿ. ಅಲ್ಲಿ ಗಾಳಿ ಅನೇಕ ಸಲ ೮೦ ರಿಂದ ೧೦೦ ಕಿಲೊ ಮೀಟರ್ ಜೋರಿನಿಂದ ಬೀಸುವುದು. ವಾಹನಗಳು ಚಲಿಸುತ್ತಿರುವಾಗ ಗಾಳಿ ಬಂದರೆ ತೀರಿತು. ಅವು ಕಾಗದದ ವಸ್ತು

ಗಳಂತೆ ಹಾರಿ ಹೋಗುತ್ತವೆ. ಇಲ್ಲಿಯೂ ನೀವು ದ್ವಿಚಕ್ರ ವಾಹನದಲ್ಲಿ ವೇಗದಿಂದ ಚಲಿಸಿದರೆ, ನಿಮ್ಮ ವಾಹನ ಗಾಳಿಯಲ್ಲಿ ಹಾರಿ ದೂರ ಹೋಗಿ ಬೀಳುತ್ತದೆ. ದುರ್ದೈವಕ್ಕೆ ಹಿಂದಿನ ಸೀಟಿನಲ್ಲಿ ನಿಮ್ಮ ಮಡದಿಯೋ, ಸ್ನೇಹಿತರೋ ಕುಳಿತಿದ್ದರೆ ಅವರಿಗೆ ನಿಮ್ಮ ವಾಹನದಿಂದ ಸಂಪೂರ್ಣ ಮುಕ್ತಿ. ತಮಗರಿವಿಲ್ಲದಂತೆ ಅವರು ಗಾಳಿಯಲ್ಲಿ ತೇಲಾಡಿ ಎಲ್ಲದಕ್ಕೂ ಕಾರಣವಾದ ಸ್ಪೀಡ್ ಬ್ರೇಕರ್ ಎಂಬ ಕರಿಯ ಹೆಬ್ಬಾವಿನ ಮೇಲೆ ಶೇಷಶಯನಿಗಳಾಗುತ್ತಾರೆ. ಕೈ ಊರಿದ್ದರೆ ಎಲುವು ಮುರಿದಿರುತ್ತದೆ. ನೇರವಾಗಿ ಕುಂಡಿಗಳು ಊರಿದ್ದರೆ ಅವು ಒಡೆದು ಪುಡಿಪುಡಿ ಆಗಿರುತ್ತವೆ. ಅಯ್ಯೋ ನಿಮ್ಮ ಅಧೋಗತಿ ಕಂಡು ಸುತ್ತಲಿನವರು ಮರುಕ ಪಡಬಹುದು. ಇಲ್ಲವೆ ಕುಹಕಿಗಳಿದ್ದರೆ ನಕ್ಕು ಬಿಡಬಹುದು. ಆಟೋ ರಿಕ್ಷಾದ ಪ್ರಯಾಣಿಕರಿಗೆ ಇನ್ನೂ ಒಂದು ಲಾಭವಿದೆ. ಇವರು ಹೊರಗೆ ಬೀಳುವುದಿಲ್ಲ. ಆದರೆ ಛತ್ತಿನಲ್ಲಿರುವ ಕಬ್ಬಿಣದ ಕೊಳವೆಗಳು ಪ್ರೀತಿಯಿಂದ ಆಶೀರ್ವದಿಸಿರುತ್ತವೆ. ಅದರ ಫಲವಾಗಿ ತಲೆಯ ಮೇಲೆ ಒಂದು ಗಂಟು ಏಳುತ್ತದೆ. ಇನ್ನು ನೇರವಾಗಿ ಕುಳಿತಿದ್ದರೆ (ರಿಕ್ಷಾ ಎಂಜಿನನ್ನು ಮುಂದುಗಡೆ ಹೊಂದಿದ್ದರೆ) ನಿಮ್ಮ ಸೊಂಟ ಡೊಂಕಾಗಬಹುದು. ಆಗ ಒಂದು ಕೈ ತಲೆಯ ಬೂಗುಟಿಯ ಮೇಲೆ ಇನ್ನೊಂದು ಸೊಂಟದ ಮೇಲೆ ಇಡಬಹುದು. ಇವೆರಡರ ಸುಖದಲ್ಲಿ ಮುಳುಗಿರುವಾಗ ನಿಮಗೆ ಜಗತ್ತಿನಲ್ಲಿ ಏನೂ ಬೇಡ ಎನಿಸಿ ಎರಡು ಕಣ್ಣುಗಳನ್ನು ಮುಚ್ಚಿರುತ್ತೀರಿ. ಒಬ್ಬೊಬ್ಬರಿಗೆ ಸ್ವರ್ಗವೂ ಕಾಣಿಸುವುದಂತೆ! ಶ್ರೀಮಂತ ಜನರು ತಮ್ಮ ಕಾರಿನಲ್ಲಿ ಚಲಿಸುವರು. ಅವರ ಮುಖಗಳನ್ನು ನೋಡಿದರೆ ಕೆಡುಕೆನಿಸುವುದು. ಕಾರು ಆ ಹೆಬ್ಬಾವಿನ ಮೇಲೆ ಹಾಯ್ದು ದಾಟುವಾಗ ಅವರ ಅರ್ಧ ಜೀವ ಕಾರಿನ ಹೊರಗೇ ಹೋಗಿರುತ್ತದೆ "ದೇವರಿಗೆ ನನ್ನ ಕಾರಿನ ಯಾವುದೇ ಭಾಗ ಮುರಿಯದಂತೆ ಆಶೀರ್ವದಿಸು" ಎಂದು ಕಾರಿನಲ್ಲಿ ಎದುರಿಗೇ ಪ್ರತಿಷ್ಠಾಪಿಸಲ್ಪಟ್ಟ ಗಣಪತಿಗೆ ಪ್ರಾರ್ಥಿಸುತ್ತಾರೆ. ಅಯ್ಯೋ ಅವನ ಗೋಳು ಇವರಿಗೇನು ಗೊತ್ತು. ಇಲಿಯ ಮೇಲಿಂದ ಬಿದ್ದರೆ ಹೊಟ್ಟೆ ಒಡೆದುಕೊಳ್ಳುವ ವ್ಯಕ್ತಿ ಅವನು, ಈಗ ಕಾರಿನಲ್ಲಿಯ ಧಡಿಕೆಯಿಂದ ಅವನ ಹೊಟ್ಟೆಯೇಕೆ? ಹಲ್ಲುಗಳೂ ಮುರಿದು ಹೋಗಬಹುದು. ಗಣಪನ ಎದುರು ಒಂದು ಹಾವು ಹರಿದು ಬಂದದ್ದರಿಂದ ಅವನ ವಾಹನ ಮುಗ್ಗರಿಸಿತು ಎಂದು ಹೇಳುತ್ತಾರೆ. ಇಲ್ಲಿ ಆದ್ದದಾದರೂ ಏನು? ನಮ್ಮ ಸ್ಪೀಡ್ ಬ್ರೇಕರಗಳೂ ಸಹ ರಸ್ತೆಗೆ ಅಡ್ಡಲಾಗಿ ಮಲಗಿದ ಕರಿಯ ಹೆಬ್ಬಾವು. ಬಹುಶಃ ಗಣಪತಿ ತಿರುಗಾಟ ನಡೆಸಿದ್ದಾಗ ಸ್ಪೀಡ್ ಬ್ರೇಕರ್‌ಗಳು (ಪುರಾಣ ಕಾಲದಲ್ಲಿ) ಇರಬೇಕು. ಇದು ಸಂಶೋಧನೆಗೆ ಒಳ್ಳೆಯ ವಿಷಯ. ಕಾರುಗಳೇಕೆ? ದೊಡ್ಡ ದೊಡ್ಡ ಟ್ರಕ್ಕುಗಳು ಅಯ್ಯೊ ರಾಮ! ಎನ್ನುವವು. ಸ್ಪೀಡ್ ಬ್ರೇಕರ್ ಮೇಲೆ ಟ್ರಕ್ಕು ಜೋರಿನಿಂದ ಹೋದರೆ ಯಾರೋ ಬಂದು ಮುಕುಳಿಯ ಮೇಲೆ ಒದ್ದ ಅನುಭವ. ಟ್ರಕ್ಕುಗಳ ಆರ್ತನಾದ ಕೇಳಿದರೆ ಟ್ರಕ್ಕು ಚಾಲಕರಿಗೆ ಕಣ್ಣೀರು ಬರುತ್ತದೆ. ಅಷ್ಟು ನೋವು ಟ್ರಕ್ಕುಗಳಿಗೆ. ಅದಕ್ಕಿಂತ ಹೆಚ್ಚಿನ ನೋವು ಅವುಗಳ ಮಾಲಿಕರಿಗೆ. ಒಂದು ರೀತಿಯಲ್ಲಿ ಸ್ಪೀಡ್ ಬ್ರೇಕರ್ ದಾಟುವುದೆಂದರೆ ವಾಹನ

ಗಳಿಗೆ ಹಾಗು ಅವುಗಳ ಮಾಲಿಕರಿಗೆ ಪ್ರಸವ ವೇದನೆ ಬಂದು ಹೋದಂತೆಯೇ ಅನ್ನಬಹುದು.

ಗೌಪ್ಯಮಾಹಿತಿ

ಕೆಲವೇ ದಿನಗಳ ಹಿಂದೆ ನನಗೆ ಒಬ್ಬರು ಒಂದು ಗೌಪ್ಯ ಮಾಹಿತಿ ಕೊಟ್ಟರು. ಅದು ಸ್ಪೀಡ್ ಬ್ರೇಕರ್‌ಗಳ ಜನನ ವೃತ್ತಾಂತ ತಿಳಿಸುತ್ತದೆ. ಸ್ಪೀಡ್ ಬ್ರೇಕರ್‌ಗಳು ಹುಟ್ಟಬೇಕಾದರೆ ಹಲವಾರು ಜನರ ಪುಣ್ಯಬೇಕು. ಮೂಲತಃ ವಾಹನ ದುರಸ್ತಿ ಮಾಡುವ ಗರಾಜುಗಳ ಮಾಲಿಕರು ಹಾಗು ಎಲವು ಕೀಲು ವೈದ್ಯರೂ ಕೂಡಿ ಚರ್ಚಿಸುತ್ತಾರಂತೆ. ಅವರ ಗುಪ್ತಾಲೋಚನೆಯಲ್ಲಿ ಎಲ್ಲಿ ಯಾವ ಪ್ರಕಾರದ ಎಷ್ಟು ಎತ್ತರಿನ ಸ್ಪೀಡ್ ಬ್ರೇಕರ್‌ಗಳನ್ನು ಹಾಕಿಸಬೇಕೆಂದು ನಿರ್ಣಯಿಸುತ್ತಾರೆ. ಅನಂತರ ಕೂಲಿಗಳನ್ನು ಹುಡುಕಿ ಅಗತ್ಯವೆನಿಸಿದಲ್ಲಿ ಅವುಗಳನ್ನು ನಿರ್ಮಿಸುತ್ತಾರೆ. ಇವರ ಗಿರಾಕಿಗಳು ಕಡಿಮೆ ಆಗಲಿಕ್ಕೆ ಪ್ರಾರಂಭವಾದರೆ ಹೊಸ ಸ್ಪೀಡ್ ಬ್ರೇಕರ್‌ಗಳನ್ನು ಕೂಡ್ರಿಸಲು ಮುಂದಾಗುತ್ತಾರೆ. ಗುಪ್ತವಾಗಿ ಆ ಊರಿನಲ್ಲಿರುವ ಎಲ್ಲ ಸದಸ್ಯರು ವಂತಿಕೆ ಕೂಡಿಸಿ, ಇವುಗಳ ನಿರ್ಮಾಣ ಮಾಡುತ್ತಾರಂತೆ. ನಿರ್ಮಾಣಗೊಂಡಾದ ಮೇಲೆ ದೂರ ನಿಂತು ಉಳಿದವರಿಗೆ ಅರಿವಾಗದಂತೆ ನೋಡುತ್ತ ಖುಷಿಪಡುತ್ತಾರಂತೆ. ಇದೊಂದು ರೀತಿ ಬಲೆ ಬೀಸಿ ದೂರದಲ್ಲಿ ಕುಳಿತು ನೋಡುವ ಬೇಟೆಗಾರರನ್ನು ನೆನಪಿಗೆ ತರುತ್ತದೆ. ತಮ್ಮ ಬಲೆಗೆ ಬಿದ್ದ ಪ್ರಾಣಿಗಳನ್ನು ಅವರು ಹಂಚಿಕೊಳ್ಳುವಂತೆ. ಇವರ ಕಾಯಕ, ಪ್ರಯಾಣಿಕರನ್ನು ಕೈಲಾಸಿಗೆ ಕಳಿಸಬಹುದು. ವ್ಯಾಪಾರ ಹೆಚ್ಚಾದರೆ ಸಂತೋಷ ಕೂಟಗಳನ್ನೂ ಏರ್ಪಡಿಸುವರಂತೆ.

ದೀರ್ಘಾಯುಭವ

ಸ್ಪೀಡ್ ಬ್ರೇಕರ್‌ಗಳ ಆಯುಷ್ಯ ದೊಡ್ಡದು. ಅವುಗಳನ್ನು ದೀರ್ಘಾಯುಗಳೆಂದೇ ಹೇಳಬೇಕು. ಇವುಗಳ ಎರಡು ಬದಿಯ ರಸ್ತೆ ಸಂಪೂರ್ಣ ಹಾಳಾಗಿರಬಹುದು. ತಗ್ಗು ತಗ್ಗಾಗಿರುವ ರಸ್ತೆಯ ಮೇಲಿನ ಜಲ್ಲಿಯೆಲ್ಲ ಚಿಲ್ಲರೆ ನಾಣ್ಯಗಳಂತೆ ಬಿಡಿಬಿಡಿಯಾಗಿರಬಹುದು. ಒಂದೊಂದು ಊರಿನಲ್ಲಿ ರಸ್ತೆಯ ತಗ್ಗುಗಳಲ್ಲಿ ಗಿಡಗಳನ್ನೇ ನೆಟ್ಟಿದ್ದಾರೆಂಬ ಸುದ್ದಿ ಬಂದಿದೆ. ಅಷ್ಟು ಅಧೋಗತಿಗೆ ಅವು ಇಳಿದಿರಬಹುದು. ಆದರೆ ಸ್ಪೀಡ್ ಬ್ರೇಕರ್ ನೋಡಿದರೆ ಪ್ರೀತಿ ಬರುತ್ತದೆ. ಅವು ಹಾಯಾಗಿ ಮಲಗಿರುತ್ತವೆ. ತಮ್ಮ ಕೆಳಗಿನ ರಸ್ತೆಯನ್ನು ಅಪ್ಪಿಕೊಂಡು ಮುತ್ತಿಡುತ್ತ ಮಲಗಿದ ಈ ಉಬ್ಬುಗಳು ಹೆಬ್ಬಾವಿನಂತೆ ಮೈ ಉಬ್ಬಿಸಿ ಬಿದ್ದಿರುತ್ತವೆ. ಅವುಗಳ ದೇಹದಿಂದ ಒಂದು ಹರಳೂ ಉದುರುವುದಿಲ್ಲ. ಅವು ನೋಡಲು ನಿತ್ಯನೂತನ. ಯಾವಾಗಲೂ ನಗುನಗುತ್ತಲೇ ಇರುತ್ತವೆ. ಚಿರಯೌವನಕ್ಕೆ ಮದ್ದು ಕೊಡುವ ವೈದ್ಯರು ಈ ಸ್ಪೀಡ್ ಬ್ರೇಕರ್‌ಗಳಿಂದ ಅದರ ಗುಟ್ಟು ಅರಿತರೆ ಚೆನ್ನ. ಆದರೆ ಸ್ಪೀಡ್ ಬ್ರೇಕರ್ ಅದನ್ನು ಹೇಳಬೇಕಲ್ಲ? ಅಪ್ಪಿಸಿಕೊಂಡು ಕೆಳಗೆ ಮಲಗಿದ ರಸ್ತೆಗೇ ಗುಟ್ಟು ಬಿಡದ ಈ ಸ್ಪೀಡ್ ಬ್ರೇಕರ್‌ಗಳು ನಮಗೆ ತಮ್ಮ ಗುಟ್ಟು ಹೇಳಲಿಕ್ಕಿಲ್ಲ ಎನಿಸುತ್ತದೆ.

ಸ್ಪೀಡ್ ಬ್ರೇಕರ್‌ಗಳು ಪಂಡಿತ ಪುತ್ರರಲ್ಲ. ಇಂಜಿನಿಯರು ನಿಂತು ನಿರ್ಮಾಣ ಮಾಡಿದ ಕೃತಿಗಳಲ್ಲ. ಏನೂ ಕಲಿಯದೆ

ಓದದೇ ಇದ್ದ ಕೂಲಿಗಳು ನಿರ್ಮಿಸಿದ ಕೃತಿಗಳು ಇವು. ಸ್ಪೀಡ್ ಬ್ರೇಕರ್‌ಗಳ ಆಯುಷ್ಯ ಕಡಿಮೆ ಮಾಡಬೇಕೆನಿಸಿದರೆ, ಅವುಗಳನ್ನು ಇಂಜಿನಿಯರರುಗಳ ಕಡೆಗೆ ಒಪ್ಪಿಸಬೇಕು. ಅವರು ಹಲವಾರು ಬಾರಿ ಚಿತ್ರ ತೆಗೆದು, ಲೆಕ್ಕಹಾಕಿ, ಟೆಂಡರ್ ಕರೆದು, ಕಾಂಟ್ರ್ಯಾಕ್ಟರರುಗಳಿಗೆ ಒಪ್ಪಿಸುತ್ತಾರೆ. ಅವುಗಳ ಉದ್ಘಾಟನೆಗೆ ಮಂತ್ರಿಗಳನ್ನು ಕರೆಸಬೇಕಾಗುತ್ತದೆ. ಅಂಥ ಸ್ಪೀಡ್ ಬ್ರೇಕರುಗಳ ಆಯುಷ್ಯ ರಸ್ತೆ ಆಯುಷ್ಯದಷ್ಟಾಗುವುದು. ಅವುಗಳಲ್ಲಿಯೂ ಗುಳಿ ಬೀಳಬಹುದು. ಅವುಗಳ ಬಾಲ ಮುರಿಯಬಹುದು. ಆದರೆ ಇಂಥ ಸರಿಯಾದ ಕ್ರಮ ಮಾಡದೇ ಕೂಲಿಗಳು ನೀವು ಹೇಳಿದಲ್ಲಿ ಸ್ಪೀಡ್ ಬ್ರೇಕರ್‌ಗಳನ್ನು ನಿರ್ಮಿಸಿಬಿಡುತ್ತಾರೆ. ಇದರಿಂದ ಈ ಬಡವರ ಅಶಿಕ್ಷಿತರ ಕೈಯಲ್ಲಿ ಹುಟ್ಟಿದ ಈ ಹಾವುಗಳು ದೀರ್ಘಾಯುಗಳಾಗುತ್ತವೆ.

ಅಶಿಕ್ಷಿತರ ಬಡವರ ಮಕ್ಕಳು ಬಲಿಷ್ಠವಾಗಿರುವಂತೆ ಸ್ಪೀಡ್ ಬ್ರೇಕರ್‌ಗಳು ಗಟ್ಟಿಮುಟ್ಟಾಗಿರುತ್ತವೆ. ಆದರೆ ಅವು ಒಂದೇ ಆಕಾರದವಾಗಿರುವುದಿಲ್ಲ. ಕೆಲವು ಕಡೆ ಈಗಾಗಲೇ ವರ್ಣಿಸಿದಂತೆ ಅವು ರಸ್ತೆಗಳಿಗೆ ಅಡ್ಡಲಾಗಿ ಉಬ್ಬಾಗಿರಬಹುದು. ಇನ್ನು ಕೆಲವು ಕಡೆಗೆ ಎರಡು ಬದಿಗೆ ಇಳಿಜಾರಿದ್ದು ಅವುಗಳ ಬೆನ್ನು ಡುಬುರಿಯಾಗಿರದೇ ಸಮತಟ್ಟಾಗಿರಬಹುದು, ಇನ್ನು ಬೇರೆ ಕಡೆಗೆ ತೆರೆಗಳಂತೆ ಸಾಲಾಗಿ ಮಲಗಿರಬಹುದು, ಒಂದೊಂದೇ ಮಲಗಿದರೆ ಬೇಸರಬರದಂತೆ ಕೆಲವರು ಜೋಡಿ ಸ್ಪೀಡ್ ಬ್ರೇಕರ್‌ಗಳನ್ನು ನಿರ್ಮಿಸುತ್ತಾರೆ. ಒಂದೊಂದು ಕಡೆಗೆ ಇವು ಡುಬರಿಯಂತಿರದೆ ಬಾಗಿಲಿನ ಹೊಸ್ತಿಲದಂತೆ ಚೌಕಾಗಿರಬಹುದು. ಚೌಕಾಕೃತಿಯ ಈ ಉಬ್ಬುಗಳು ವಾಹನಗಳನ್ನೂ ಅವುಗಳ ಮಾಲಿಕರ ತಲೆಬೆನ್ನುಗಳನ್ನೂ ಮುರಿಯುವುವಲ್ಲದೆ ವಾಹನಗಳ ಟಯರುಗಳನ್ನು ಕತ್ತರಿಸುತ್ತವೆ. ಟ್ಯೂಬ್‌ಗಳನ್ನು ಕೂಡ ಹರಿದು ಹಾಕುತ್ತವೆ. ಒಂದು ಮಾತಂತೂ ಸತ್ಯ. ಏನೇ ಮಾಡಿ ತಮಗೆ ನಿಯಮಿಸಿದ ಕಾಯಕವನ್ನು ಇವು ಮಾಡುತ್ತವೆ. ಸರಕಾರಿ ಅಧಿಕಾರಿಗಳಂತೆ ನೆಪಹೇಳಿ ಕೆಲಸ ಮಾಡದೇ ನುಣುಚಿಕೊಳ್ಳುವುದಿಲ್ಲ. ಕರ್ತವ್ಯ ನಿರ್ವಹಣೆಗಾಗಿ ಅವುಗಳನ್ನು ನಾವು ಮೆಚ್ಚಲೇಬೇಕು. ಇತ್ತಿತ್ತಲಾಗಿ ಸ್ಪೀಡ್ ಬ್ರೇಕರ್‌ಗಳ ಮಗ್ಗುಲಿಗೇ ಪೂಜಾಸ್ಥಾನಗಳು ಹುಟ್ಟುತ್ತಲಿವೆ. ಸುರಕ್ಷಿತವಾಗಿ ಅವುಗಳನ್ನು ದಾಟಿದ ಮೇಲೆ ವಾಹನ ತರುಬಿ, ದೇವರಿಗೆ ನಮಸ್ಕರಿಸಿ, ಎಲ್ಲವೂ ನಿಮ್ಮಿಬ್ಬರ ಕೈಲಿದೆ, ಎಂದು ಹೇಳಿ ಹೊರಡುತ್ತಾರೆ.

ನಮ್ಮ ಸಂಸ್ಕೃತಿ

ನನಗಂತೂ ನಮ್ಮ ರಸ್ತೆಗಳನ್ನೂ ಸ್ಪೀಡ್ ಬ್ರೇಕರ್‌ಗಳನ್ನೂ ನೋಡಿದಾಗ ನಮ್ಮ ಜನರ ಸಂಸ್ಕೃತಿ ನೆನಪಾಗುತ್ತದೆ. ಅವರ ಪರಿಚಯವಾದಂತೆ ಅನಿಸುತ್ತದೆ. ನಮ್ಮಲ್ಲಿ ಯಾವುದೇ ವ್ಯಕ್ತಿ ಯಾವುದೇ ಒಂದು ಸಾಧನೆ ಮಾಡಬೇಕೆಂದು ಪ್ರಯತ್ನಿಸತೊಡಗಿದರೆ ಅವನು ಕ್ರಮಿಸುವ ಮಾರ್ಗ ನಮ್ಮ ರಸ್ತೆಗಳಂತೆ ಉಬ್ಬು ತಗ್ಗುಗಳನ್ನು, ತಗ್ಗು-ಕುಣಿಗಳನ್ನು ಹೊಂದಿರುತ್ತದೆ. ಸರಳವಾಗಿ ಮುನ್ನಡೆಯುವುದು ಅಸಾಧ್ಯವೆಂದೇ ಹೇಳಬೇಕು. ಆ ವ್ಯಕ್ತಿ ತನ್ನ ಜಿಗುಟುತನದಿಂದ ಪ್ರಗತಿ ಸಾಧಿಸಲು ಪ್ರಾರಂಭಿಸಿದರೆ ಅವನಿಗೆ ನೂರೆಂಟು ಸ್ಪೀಡ್ ಬ್ರೇಕರ್‌ಗಳು ಎದುರಾಗುತ್ತಾರೆ. ಸ್ಪೀಡ್ ಬ್ರೇಕರ್‌ಗಳು

ಸಮಾಜದಲ್ಲಿದ್ದ ವ್ಯಕ್ತಿಗಳೇ. ಪ್ರಗತಿ ಪಥದಲ್ಲಿಯ ವ್ಯಕ್ತಿ ಒಂದು ವೇಳೆ ಇವರಿಗೆ ಸಲಾಮು ಹೊಡೆಯದೇ ಮುಂದೆ ಹೋದರೆ, ಯಾವಾಗ ಅವನು ಬಿದ್ದು ಕೈಕಾಲು ಮುರಿದುಕೊಳ್ಳುವನೋ, ಜೀವ ಕಳೆದುಕೊಳ್ಳುವನೋ ಹೇಳಲು ಬಾರದು. ಈ ವ್ಯಕ್ತಿಗಳು ಯಾರಿಗೂ ತಿಳಿಯದಂತೆ ಪ್ರಗತಿಯ ಹಾದಿಯಲ್ಲಿ ಸ್ಪೀಡ್ ಬ್ರೇಕರ್‌ಗಳಾಗುತ್ತಾರೆ. ಇವರಿಗೆ ಸ್ಪೀಡ್ ಬ್ರೇಕರ್‌ಗಳಂತೆ ಯಾವುದೇ ತೊಂದರೆ ಆಗದು. ಅವರೂ ಸಹ ನುಣುಪಾಗಿ ಮೈ ಉಬ್ಬಿಸಿದ ಹಾವಿನಂತೆಯೇ ಇರುತ್ತಾರೆ. ಪ್ರಗತಿಯನ್ನು ಸಾಧಿಸಬೇಕಾದ ವ್ಯಕ್ತಿಯನ್ನು ಇಲ್ಲದ ಸಂಕಟಗಳಿಗೆ ಗುರಿ ಮಾಡುತ್ತಾರೆ. ಪ್ರಗತಿಗೆ ಅಡ್ಡ ಬರುತ್ತಾರೆ. ಪ್ರಗತಿಯ ಪಥದಲ್ಲಿ ಸಾಗುತ್ತಿರುವ ವ್ಯಕ್ತಿ ಸ್ವಲ್ಪ ಅಜಾಗರೂಕತೆಯಿಂದ ನಡೆದರೆ ಅವನ ಸೊಂಟ ಮುರಿಯಬಹುದು, ವಾಹನವೇ ಜಖಂ ಆಗಬಹುದು.

ನಮ್ಮ ದೇಶದ ಮಾರ್ಗದಲ್ಲಿ ನಡೆದು ಗುರಿ ಮುಟ್ಟಬೇಕಾದವರು ಸದಾಕಾಲ ಸ್ಪೀಡ್ ಬ್ರೇಕರ್‌ಗಳ ಬಗ್ಗೆ ಜಾಗರೂಕರಾಗಿರಬೇಕು.

ವಿಶ್ವಾಮಿತ್ರನಿಗೆ ಮೇನಕೆ, ಕರ್ಣನಿಗೆ ಕುಂತಿ ಹಾಗೂ ಕೃಷ್ಣ, ಕಿತ್ತೂರ ಚೆನ್ನಮ್ಮನಿಗೆ ಮಲ್ಲಪ್ಪ ಶೆಟ್ಟಿ, ಶ್ರೀ ಬಸವೇಶ್ವರರಿಗೆ ಕೊಂಡಿ ಮಂಚಣ್ಣ ಮೊದಲಾದವರು ಸ್ಪೀಡ್ ಬ್ರೇಕರ್‌ಗಳಾಗಿ ಕಾರ್ಯ ಮಾಡಿದರು. ಸ್ವಾಮಿ ವಿವೇಕಾನಂದ, ಸರ್ ಸಿ. ವಿ. ರಾಮನ್, ಹಾಗೂ ಎಂ. ವಿಶ್ವೇಶ್ವರಯ್ಯನಂಥವರೂ ಸಹ ಸ್ಪೀಡ್ ಬ್ರೇಕರ್‌ಗಳನ್ನು ದಾಟುವಾಗ ಗಾಯಗೊಂಡ ವ್ಯಕ್ತಿಗಳೇ. ಇಂಥವರ ಯಾದಿಯನ್ನು ಯಾರಾದರೂ ಮಾಡಬಹುದು.



ದೇವರ ಪ್ರೀತಿಯನ್ನು ಗಳಿಸಿಕೊಳ್ಳುವುದಕ್ಕೆ ಸುಲಭವಾದ ಮಾರ್ಗವೊಂದಿದೆ. ಅದೆಂದರೆ ದೇವರಿಂದ ಸೃಷ್ಟಿಯಾದ ಎಲ್ಲವನ್ನೂ, ಎಲ್ಲರನ್ನೂ ಪ್ರೀತಿಸುವುದು.

ದಾನವನ್ನು ಮತ್ತು ಪ್ರಾರ್ಥನೆಯನ್ನು ಗುಟ್ಟಾಗಿ ಮಾಡಬೇಕು.

—ಏಸುಕ್ರಿಸ್ತ

ವಿಶಾಲ ತತ್ವದ ರಹಸ್ಯ : ಡಿ. ಎನ್. ಎ.

ಡಾ|| ಎನ್. ಎಸ್. ಲೀಲಾ
ನಂ. ೧೦೫, ವೆಸ್ಟ್‌ಪಾರ್ಕ್ ಅಪಾರ್ಟ್‌ಮೆಂಟ್ಸ್,
೧೪ ಎ, ಅಡ್ಡಬೀದಿ, ಮಲ್ಲೇಶ್ವರಂ
ಬೆಂಗಳೂರು-೦೩

"ಧರ್ಮರಹಿತ ವಿಜ್ಞಾನ ಕುಂಟು, ವಿಜ್ಞಾನರಹಿತ ಧರ್ಮ ಕುರುಡು" ಎಂದರು ಐನ್‌ಸ್ಟೈನ್. ಧರ್ಮಸಹಿತ ಅಥವಾ ವಿಜ್ಞಾನಸಹಿತ ಧರ್ಮ ಋಜುಜೀವನ. ಪ್ರಸ್ತುತ ಲೇಖನದಲ್ಲಿ ಈ ಸಾಮರಸ್ಯದ ರಹಸ್ಯವನ್ನು ಪ್ರಾಣಿ ವಿಜ್ಞಾನ ಪ್ರಾಧ್ಯಾಪಿಕೆಯವರು ವಿಶ್ಲೇಷಿಸಿರುವ ಪರಿ ಋಜುಜೀವನಕ್ಕೆ ಹಿಡಿದಿರುವ ಕನ್ನಡಿ.

ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಜಗತ್ತಿನಾದ್ಯಂತ ಊಹಿಸಲಸದಳವಾದಂತಹ ಸಾಧನೆಗಳು ನಡೆದಿವೆ ಮತ್ತು ನಡೆಯುತ್ತಿವೆ. ಈ ಸಾಧನೆಗಳಿಂದ ಮಾನವನ ಜೀವನಮಟ್ಟ ಏರುತ್ತಿದ್ದರೆ ನೈತಿಕಮಟ್ಟ ಕುಗ್ಗುತ್ತಿದೆ. ಇದು ವೈಯಕ್ತಿಕ ಪತನಕ್ಕೆ ದಾರಿ ಎಂಬುದರಲ್ಲಿ ಸಂಶಯವಿಲ್ಲ. ಇಂದು ನಮ್ಮನ್ನು ಕಾಡುತ್ತಿರುವ ಸಮಸ್ಯೆಗಳಲ್ಲಿ ಮುಖ್ಯವಾದದ್ದು,

೧. ಭೂಗ್ರಹದಲ್ಲಿ ಏರುತ್ತಿರುವ ಕಾವು.
೨. ವಿಜ್ಞಾನದ ಮೊಹರನ್ನು ಛಾಪಿಸುವ ವ್ಯಾಪಾರ ಮತ್ತು ಸುಂಕದ ಸಾಮಾನ್ಯ ಒಪ್ಪಂದ (ಜಿಎಟಿಟಿ—ಜನರಲ್ ಅಗ್ರಿಮೆಂಟ್ ಆನ್ ಟಾರಿಫ್ಸ್ ಅಂಡ್ ಟ್ರೇಡ್).
೩. ಹಿಂದುಳಿದ ರಾಷ್ಟ್ರಗಳ ಸ್ಥಿತಿಗತಿ.

ವಿಜ್ಞಾನಿಗಳು ಸಂಶೋಧನೆಗೆ ಬೇಕಾದ ಆರ್ಥಿಕ ನೆರವು ದೊರಕುತ್ತಿಲ್ಲವೆಂದು ಚಿಂತಿತರಾಗಿದ್ದಾರೆ. ಜನಸಾಮಾನ್ಯರು ಸಂಶೋಧನೆಗಳಿಂದ ಹೆಚ್ಚಿನ ಪ್ರತಿಫಲ ಅಪೇಕ್ಷಿಸುತ್ತಿದ್ದಾರೆ. ಕಣ್ಣೊರೆಸುವ ಸಂಶೋಧನೆಗಳು ಕೆಲವೆಡೆ ನಡೆಯುತ್ತಿವೆ. ಇದರಿಂದ ಜನ ವಿಜ್ಞಾನದಲ್ಲಿ ತಮ್ಮ ನಂಬಿಕೆಯನ್ನು ಕಳೆದುಕೊಳ್ಳುವಂತಾಗಿದೆ. ಸಮಾಜ ಮತ್ತು ವಿಜ್ಞಾನದ ಬಗೆಗಿನ ಸಂಬಂಧಗಳಲ್ಲಿ ಬಿರುಕುಗಳುಂಟಾಗಿವೆ. ಇತ್ತೀಚಿನ ಸಂಶೋಧನೆಗಳು ಭಯ ಮತ್ತು ಆತಂಕಗಳನ್ನು ಹೆಚ್ಚಿಸುತ್ತಿವೆ. ಕ್ಯಾನ್ಸರ್ ರೋಗಕ್ಕೆ ಶಾಶ್ವತ ಪರಿಹಾರ, ಏಡ್ಸ್ ರೋಗಕ್ಕೆ ವ್ಯಾಕ್ಸಿನ್, ಹಸಿವಿನ ಕೊರತೆ ತುಂಬುವಷ್ಟು ಆಹಾರೋತ್ಪಾದನೆ, ಹವಾಮಾನ ನಿಯಂತ್ರಣ, ಪರಮಾಣುಶಕ್ತಿ ಉತ್ಪಾದನೆಯಿಂದ ನಿರಂತರ ವಿದ್ಯುತ್ ಬಳಕೆ —ಹೀಗೆ ಹತ್ತು ಹಲವಾರು ಆಕಾಂಕ್ಷೆಗಳು ಬೆಳೆಯುತ್ತಿವೆ. ವಿಜ್ಞಾನ ಸಾಧನೆಗಳಿಂದ ಜೀವನ ಸರಳವಾಗಿದೆ. ಅವನ್ನು ಬಳಸುತ್ತಿರುವ ರೀತಿಯಿಂದ ಮಾರಕವಾಗಿ ಪರಿಣಮಿಸಬಹುದಾಗಿದೆ. ಹೀಗಾಗಿ ಮಾನವೀಯ ಮೌಲ್ಯ

ಗಳು ಕುಗ್ಗುತ್ತಿವೆ. ಮತ-ಭೇದಗಳು ಹೆಚ್ಚುತ್ತಿವೆ. ರಾಕ್ಷಸ ಪ್ರವೃತ್ತಿ ಬೆಳೆಯುತ್ತಿದೆ.

ಇಂದು ಮಾನವ ಸಂಬಂಧಗಳಲ್ಲಿ ಸೌಹಾರ್ದ ಮೂಡಬೇಕಾಗಿದೆ. ಇದಕ್ಕಾಗಿ ಆರ್ಥಿಕ ಮತ್ತು ರಾಜಕೀಯ ನೀತಿಗಳನ್ನು ಬದಲಿಸಬೇಕಾಗಿದೆ. ಹೀಗಾದಾಗ ವೈಜ್ಞಾನಿಕ ಸಂಶೋಧನೆಗಳು ಮೌಲ್ಯಗಳನ್ನು ಹೆಚ್ಚಿಸಿಕೊಂಡು, ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳ ಬಹುದಾದ ಸಮಾಜ ಸೃಷ್ಟಿಯಾಗಬಲ್ಲದು. ರಾಷ್ಟ್ರಕ್ಕೆ ಈಗ ಬೇಕಾಗಿರುವುದು ಸಾಮಾಜಿಕ ಸುಭದ್ರತೆ. ಆರ್ಥಿಕತೆಯೇ ಪರಮೋಧ್ಯೇಯ ವಾಗಿ ಸಾಮಾಜಿಕ ಮೌಲ್ಯಗಳು ಬೆಲೆ ಕಳೆದುಕೊಂಡು ಮನಃಶಾಂತಿ ಮೂಲೆ ಗುಂಪಾಗಿರುವುದು ಶೋಚನೀಯ. ಒಟ್ಟಾರೆ ಏಳಿಗೆಯ ಹಾದಿಯಲ್ಲಿ ಎಡವುತ್ತಿದ್ದೇವೆ. ಸುಖಜೀವನದಲ್ಲೂ ದುಃಖಿಸುತ್ತಿದ್ದೇವೆ. ಭರವಸೆಗಳ ಮಧ್ಯದಲ್ಲೂ ಹತಾಶರಾಗಿದ್ದೇವೆ. ನೈತಿಕಮಟ್ಟ ಮಾನವನ ಉದ್ಧಾರಕ್ಕಾಗಿ ಏರದಿದ್ದಲ್ಲಿ ಅದು ನಮ್ಮನ್ನು ಎಲ್ಲಿಗೆ ಕೊಂಡೊಯ್ಯುವುದೆಂದು ಕಾಣದಾಗಿದೆ.

ಮಾನವ ತನ್ನ ಕಲ್ಪನಾ ಮತ್ತು ಭಾವನಾತ್ಮಕ ಶಕ್ತಿಗಳಿಂದ ಏನೆಲ್ಲಾ ಸಾಧಿಸಬಲ್ಲವನಾಗಿದ್ದಾನೆ. ರವಿ ಕಾಣದ್ದನ್ನು ಕವಿ ಕಂಡರೆ, ವಿಜ್ಞಾನಿ ಅದನ್ನು ತನ್ನ ಮುಷ್ಟಿಯಲ್ಲಿ ಹಿಡಿಯಬಲ್ಲವನಾಗಿದ್ದಾನೆ. ಅರಿತ ಮತ್ತು ಅರಿಯದ ವಿಷಯಗಳ ಸಮಾಗಮವೇ ಇಂಥ ಉನ್ನತ ಮಟ್ಟ ಏರಲು ಸಾಧ್ಯ ಮಾಡಿದೆ. ಉನ್ನತಿಯ ಹಾದಿಯಲ್ಲಿ ನಡೆಯುವುದು ತಪ್ಪಲ್ಲ. ಆದರೆ ಅದು ಮುಳ್ಳಿನ ಹಾದಿಯಾಗದೇ ಹೂವಿನ ಹಾಸಾಗುವಂತೆ ನೋಡಿಕೊಳ್ಳುವುದು ನಮ್ಮ ಕೈಯಲ್ಲಿದೆ.

ಜೀವ ಮತ್ತು ಜೀವನದ ವೈವಿಧ್ಯಕ್ಕೆ ಕಾರಣವಾದರೂ ಏನು? ನಮ್ಮೆಲ್ಲಾ ಚಟುವಟಿಕೆಗಳ ಸೂತ್ರಧಾರನಾರು? ಎಂದು ಪ್ರಶ್ನಿಸಿದಾಗ ಸಿಗುವ ಉತ್ತರ ನಮ್ಮಲ್ಲಿ ಅಡಕವಾಗಿರುವ ರಾಸಾಯನಿಕ ವಸ್ತು—ಡಿ.ಎನ್.ಎ. (ಡಿ ಆಕ್ಸಿ ರೈಬೋ ನ್ಯೂಕ್ಲಿಕ್ ಆಸಿಡ್). ಇದು ಏಕಕೋಶ ಜೀವಿಗಳಿಂದ ಮಾನವನವರೆವಿಗೂ ಎಲ್ಲ ಜೀವಿಗಳಲ್ಲಿ ಸರ್ವ ವ್ಯಾಪಕವಾಗಿರುವ ವಸ್ತು. ಬೆಳವಣಿಗೆಗೆ, ಜೀವಿಗಳ ಸಕಲ ಕಾರ್ಯಗಳಿಗೆ ನಿರ್ದೇಶನ ನೀಡುತ್ತಾ ಜೀವನ ನಿರ್ವಹಿಸುವ ಅಣು. ಇದು ಸೂತ್ರಧಾರನಂತೆ. ಪರಿಸರದೊಂದಿಗೆ ಹೊಂದಾಣಿಕೆ ಮಾಡಿಕೊಂಡು ತನ್ನದೇ ಆದ ಅನುವಂಶಿಕತೆ ಮತ್ತು ಸಂಸ್ಕೃತಿಯನ್ನು ಜೀವದ ಉಗಮವಾದಂದಿನಿಂದ ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ವಿಕಾಸದ ಹಾದಿಯಲ್ಲಿ ಯಾವ ಸೂತ್ರಧಾರ ಜೀವನವನ್ನು ನಡೆಸಲು ಅರ್ಹನೆಂದು ಪ್ರಕೃತಿ ನಿರ್ಧರಿಸುತ್ತದೋ ಅದು ತನ್ನ ಮೊಹರನ್ನು ಹಾಕಿಕೊಳ್ಳುತ್ತದೆ. ಉಳಿದವು ಅಳಿಯುತ್ತವೆ. ಇದೇ ಜೀವನದ ಸಮಸ್ಯೆಗಳಿಗೆ ಪ್ರಕೃತಿ ಕಂಡುಕೊಂಡಿರುವ ಪರಿಹಾರ. ಯಾವುದು ಉತ್ಕೃಷ್ಟವೆಂದು ಪರಿಗಣಿಸಲಾಗುವುದೋ ಅದು ತನ್ನ ಅಸ್ತಿತ್ವವನ್ನು ರೂಪಿಸಿಕೊಳ್ಳುತ್ತದೆ.

ಈ ಹಿನ್ನೆಲೆಯಿಂದ ಭಗವದ್ಗೀತೆಯಲ್ಲಡಗಿರುವ ವೈಜ್ಞಾನಿಕ ಸತ್ಯವನ್ನು ಅರಿಯಲು ಇಲ್ಲಿ ಪ್ರಯತ್ನಿಸಿದ್ದೇನೆ. ಇಲ್ಲಿ ವೈಜ್ಞಾನಿಕವಾಗಿ ಅಡಗಿರುವ ಅಣುವೇ ಡಿ.ಎನ್.ಎ. ಈ ವಸ್ತುವನ್ನು ತಳಿಶಾಸ್ತ್ರ, ಜೀವವಿಕಾಸ ಮತ್ತು ಪರಿಸರ ವಿಜ್ಞಾನಿಗಳ ದೃಷ್ಟಿಯಿಂದ ಪರಿಗಣಿಸಬಹುದಾಗಿದೆ. ಈ ಪ್ರಯತ್ನ ಒಂದು

ಕಲ್ಪನಾ ದೃಷ್ಟಿಯೇ ಹೊರತಾಗಿ ವಿಜ್ಞಾನಿ ಅಥವಾ ತತ್ವಜ್ಞಾನಿಗಳನ್ನು ಕೆರಳಿಸುವ ಪ್ರಯತ್ನವಲ್ಲ. ವಿಜ್ಞಾನದಲ್ಲಿ ನನಗೆ ನಂಬಿಕೆ ಇಲ್ಲ ಎನ್ನುವ ಅರ್ಥದಲ್ಲಿ ಈ ಕಲ್ಪನೆ ಮಾಡಿಲ್ಲ.

ಪರಮಾಣು ಮತ್ತು ಅಣುಗಳನ್ನು ನಾವು ಗೊಂಬೆಯಾಟದಂತೆ ಬಳಸುತ್ತಿರುವ ರೀತಿ ಸಮಂಜಸವೇ ? ಎಂಬ ಪ್ರಶ್ನೆಗೆ ಇದೊಂದು ಎಚ್ಚರಿಕೆಯ ಸಂದೇಶ. ಇತ್ತೀಚಿನ ತಳಿ-ತಂತ್ರವಿದರು ಜೀವವಿಜ್ಞಾನ ಕ್ಷೇತ್ರದಲ್ಲಿ ಯಕ್ಷಿಣಿ ವಿದ್ಯೆಯಂತೆ ಮಹತ್ತರವಾದದ್ದನ್ನು ಸಾಧಿಸಿದ್ದಾರೆ. ಜೀವದ ಜೀವಾಳವಾದ ಡಿ.ಎನ್.ಎ. ಸರ್ವವ್ಯಾಪಿಯಾಗಿ ನಡೆದು ಬಂದು ತನ್ನ ವಿಶ್ವರೂಪವನ್ನು ಪ್ರದರ್ಶಿಸಿರುವುದು ಅಚ್ಚರಿಯ ಸಂಗತಿಯಂತೂ ಹೌದು.

ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರು ಕ್ರಮವಾಗಿ ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗೆ ಕಾರಣರು. ವೈಜ್ಞಾನಿಕವಾಗಿ ಡಿ.ಎನ್.ಎ. ಅಣುವನ್ನು ಬ್ರಹ್ಮ, ಪರಿಸರವನ್ನು ವಿಷ್ಣು ಮತ್ತು ವೃದ್ಧಾಪ್ಯ ಅಥವಾ ಪರಿಸರ ಮಾಲಿನ್ಯವನ್ನು ಮಹೇಶ್ವರ ಎಂದು ಹೋಲಿಸಬಹುದು.

ಜೀವಿಗಳ ಉಗಮ ಅಚೇತನ ವಸ್ತುವಿನಿಂದ ಚೇತನಗೊಂಡಿರುವುದಕ್ಕೆ ವೈಜ್ಞಾನಿಕ ಪುರಾವೆಗಳಿವೆ :

ಅವ್ಯಕ್ತಾದ್ವ್ಯಕ್ತಯಃ ಸರ್ವಾಃ ಪ್ರಭವಂತ್ಯ
ರಾಗಮೇ।

[ಭಗವದ್ಗೀತೆ, ಅ ೮:೧೮]

ಅವ್ಯಕ್ತದಿಂದ ಎಲ್ಲಾ ಚರಾಚರ ವಸ್ತುಗಳೂ ಹುಟ್ಟುತ್ತವೆ. ಅದೇ ಬ್ರಹ್ಮ ಅಂದರೆ ಡಿ.ಎನ್.ಎ. ನೊಬೆಲ್ ಪ್ರಶಸ್ತಿ ವಿಜೇತ ಹಾಗೂ ಭೌತಶಾಸ್ತ್ರಜ್ಞನಾದ ಎರ್ವಿನ್ ಶ್ರೀ ಡಿಂಗರ್, ಕ್ವಾಂಟಮ್ ಮೆಕಾನಿಕ್ಸ್ ನೊಂದಿಗೆ ತಳಿವಿಜ್ಞಾನವನ್ನು ಹೊಂದಿಸಿ 'ಜೀವ ಎಂದರೇನು ?' ಎಂಬ ಪುಸ್ತಕ ಬರೆದರು. ಇದರಲ್ಲಿ ಜೀವವನ್ನು ಎರಡು ವಿಧದಲ್ಲಿ ಪರಿಗಣಿಸಬಹುದು. ಏಕತೆಯಲ್ಲಿ ವಿಭಿನ್ನತೆ ಮತ್ತು ವಿಭಿನ್ನತೆಯಲ್ಲಿ ಏಕತೆ. ಎರಡರಲ್ಲೂ ಒಂದು ವ್ಯವಸ್ಥಿತ ಸ್ಥಿತಿ ಕಾಣಬಹುದು. ೧೯೩೦ರ ದಶಕದಲ್ಲಿ ಮನಗಂಡಿದ್ದ ಶ್ರೀ ಡಿಂಗರರ ಜೀವರಹಸ್ಯ ವಾಟ್ಸನ್ ಮತ್ತು ಕ್ರಿಕ್ ಎಂಬ ವಿಜ್ಞಾನಿಗಳು ೧೯೫೩ರಲ್ಲಿ ಭೇದಿಸಿದರು. ಅವರು ನೀಡಿದ ಮೂಲಭೂತ ವಸ್ತುವಾದ ಡಿ.ಎನ್.ಎ. ರಚನೆಗಾಗಿ ೧೯೬೨ರಲ್ಲಿ ನೊಬೆಲ್ ಪ್ರಶಸ್ತಿಯೂ ದೊರಕಿತು.

ಏತದ್ಯೋನೀನಿ ಭೂತಾನಿ ಸರ್ವಾಣೀ
ತ್ಯುಪಧಾರಯ ।
ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ
ಪ್ರಲಯಸ್ತಥಾ ॥

[ಭಗವದ್ಗೀತೆ, ಅ ೭:೬]

ಸರ್ವ ಭೂತಗಳೂ ಡಿ.ಎನ್.ಎ.ಯಿಂದ ಉಂಟಾಗಿ, ಸಮಸ್ತ ಜೀವಜಗತ್ತಿನ ಸೃಷ್ಟಿ ಮತ್ತು ಲಯಗಳಿಗೆ ಕಾರಣಕರ್ತನಂತೆ ಸೂತ್ರ ಹಿಡಿದಿದೆ.

ಸೂತ್ರೇ ಮಣಿಗಣಾ ಇವ

[ಭಗವದ್ಗೀತೆ ಅ, ೭ : ೭]

ದಾರದಲ್ಲಿ ಪೋಣಿಸಿದ ಮಣಿಗಳ ಹಾಗೆ ಡಿಎನ್ಎ ನಲ್ಲಿ ಅಡಕವಾಗಿರುವ ಪ್ರತಿಯೊಂದು ನ್ಯೂಕ್ಲಿಯೋಟೈಡ್‌ಗಳು ಒಂದಕ್ಕೊಂದು ಬಂಧಿತವಾಗಿವೆ. ವಂಶವಾಹಿಗಳನ್ನು ಹೊಂದಿರುವ ವರ್ಣತಂತುಗಳನ್ನು ಸೂಕ್ಷ್ಮದರ್ಶಕದಲ್ಲಿ ಕಂಡಾಗ ಅವು ಮಣಿಗಳ ಹಾರದಂತೆಯೇ ಕಾಣುತ್ತವೆ. ಮಣಿಗಳಂತೆ ಕಾಣುವ ಭಾಗವನ್ನು ವಿಜ್ಞಾನಿಗಳು

ಕ್ರೋಮೋಸೋಮ್ ಸಿಯರ್ ಎಂದು ಹೆಸರಿಸಿದ್ದಾರೆ.

ಸಮೋಽಹಂ ಸರ್ವಭೂತೇಷು

[ಭಗವದ್ಗೀತೆ ಅ ; ೯ : ೨೯]

ನಾನು ಸಮಸ್ತ ಭೂತಗಳಲ್ಲಿಯೂ ಸಮವಾಗಿರುತ್ತೇನೆ. ಡಿ. ಎನ್. ಎ. ರಚನೆಯನ್ನು ಭೇದಿಸಿದ ವಾಟ್ಸನ್, "ಕೋಸುಗಡ್ಡೆಯೇ ಆಗಲಿ ರಾಜನೇ ಆಗಲಿ ಜೀವ ರಸಾಯನದ ಆಗುಹೋಗುಗಳು ಸಮಸ್ತ ಜೀವಿಗಳಲ್ಲಿಯೂ ಒಂದೇ" ಎಂದು ವಿವರಿಸಿದ್ದಾನೆ.

ಚತ್ವಾರೋ ಮನ ವಸ್ತಥಾ

[ಭಗವದ್ಗೀತೆ ಅ, ೧೦ : ೬]

ನಾಲ್ಕು ಮನುಗಳು ನನ್ನ ಭಾವವುಳ್ಳವರಾಗಿ ನನ್ನ ಆದೇಶದಂತೆಯೇ ಜನಿಸುವರು. ಈ ನಾಲ್ಕು ಮನುಗಳನ್ನು ಡಿ. ಎನ್. ಎ. ಗೆ ಆಧಾರವಾದ ಅಡಿನೀನ್, ಥೈಮಿನ್, ಸೈಟೋಸಿನ್ ಮತ್ತು ಗ್ವಾನಿನ್‌ಗಳಿಗೆ ಹೋಲಿಸಬಹುದು. ಜೀವನವೆಂಬ ಮೂಲ ಗ್ರಂಥದಲ್ಲಿ ಈ ಸೂತ್ರಧಾರ ಅಡಗಿಕೊಂಡಿದ್ದಾನೆ. ಕೇಶದಲ್ಲಿರುವ ಕೇಂದ್ರಬಿಂದು (ನ್ಯೂಕ್ಲಿಯಸ್)ವೇ ಗ್ರಂಥಾಲಯ. ಈ ಸೂತ್ರಧಾರ ಜೈವಿಕರಚನೆ ಮತ್ತು ಕರ್ತವ್ಯದ ಮೂಲಗಳಾದ ಪ್ರೊಟೀನ್‌ಗಳನ್ನು ಸೃಷ್ಟಿಸುವಲ್ಲಿ ನಿಸ್ಸೀಮ. ಸುಮಾರು ೨೦ ವಿಧದ ಅಮಿನೋ ಆಮ್ಲಗಳ ವೈವಿಧ್ಯಮಯ ಜೋಡಣೆಯಿಂದ ಜೈವಿಕ ಭಾಷೆಯಾದ ಪ್ರೊಟೀನ್ ಜೀವ ಜಗತ್ತಿನಲ್ಲಿ ಸಂಭಾಷಣೆ ನಡೆಸುತ್ತದೆ. ಪ್ರೊಟೀನ್ ಭಾಷೆ ಉದ್ಭವಿಸುವುದು ವರ್ಣಮಾಲೆಯಾದ ೨೦ ಅಮಿನೋ ಆಮ್ಲಗಳಿಂದ. ವರ್ಣಮಾಲೆಯ ಸುಮಾರು ೨೦ ಅಮಿನೋ ಆಮ್ಲಗಳಿಂದ ೪ ನ್ಯೂಕ್ಲಿಯೋಟೈಡ್‌ಗಳು ಸಾರ್ವಭೌಮತ್ವವನ್ನು ಸಾಧಿಸಿವೆ.

ಅಹಂ ಸರ್ವಸ್ಯ ಪ್ರಭವೋ ಮತ್ತಃ ಸರ್ವಂ ಪ್ರವರ್ತತೇ

[ಭಗವದ್ಗೀತೆ ೧೦ : ೮]

ಸಮಸ್ತ ಜೀವ ಜಗತ್ತಿಗೆ ಉತ್ಪತ್ತಿ ಸ್ಥಾನ ಡಿ. ಎನ್. ಎ. ಎಲ್ಲವೂ ಪ್ರವರ್ತಿಸುವುದೂ ಈ ಬೃಹತ್ ಅಣುವಿನಿಂದಲೇ.

ನಾಸ್ತ್ಯಂತೋ ವಿಸ್ತರಸ್ಯಮೇ

[ಭಗವದ್ಗೀತೆ ಅ. ೧೦ : ೧೯]

ನನ್ನ ವಿಸ್ತಾರಕ್ಕೆ ಕೊನೆಯಿಲ್ಲ. ಈ ವಿಸ್ತರಣೆಯಲ್ಲಿ ಪ್ರತಿಯೊಂದು ಜೀವಿಯೂ ತನ್ನದೆ ಆದ ಚೌಕಟ್ಟಿನ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತದೆ. ಜೀವಿ–ನಿರ್ಜೀವಿಗಳ ಮಧ್ಯಂತರದಂತಿರುವ ವೈರಸ್ಸುಗಳಲ್ಲಿ ಕೆಲವೇ ಜೀನುಗಳಿದ್ದು ಅವು ಸುಮಾರು ಸಾವಿರದಷ್ಟು ನ್ಯೂಕ್ಲಿಯೋ ಟೈಡ್‌ಗಳನ್ನು ಹೊಂದಿವೆ. ಅತಿ ಸಾಧಾರಣವಾದ 'ಎಶ್ಚರೀಚಿಯಾ ಕೋಲಿ' ಎಂಬ ಬ್ಯಾಕ್ಟೀರಿಯಾದಲ್ಲಿ ಸುಮಾರು ೩೦೦೦ ಜೀನುಗಳಿರಬಹುದು. ಇವುಗಳಲ್ಲಿ ಸುಮಾರು ೩ ಮಿಲಿಯನ್ ನ್ಯೂಕ್ಲಿಯೋ ಟೈಡ್‌ಗಳನ್ನು ಗುರುತಿಸಬಹುದು. ವೈರಸ್ಸುಗಳಿಗೆ ಹೋಲಿಸಿದರೆ ಅವು ಸಾವಿರಪಟ್ಟು ಹೆಚ್ಚಿನ ಸಂಖ್ಯೆ. ಮಾನವರಲ್ಲಿ ಇಂಥ ಜೆನೆಟಿಕ್ ವ್ಯವಸ್ಥೆ ಕೋಟಿಗಟ್ಟಲೆ ಇರಬಲ್ಲದು. ಇಲ್ಲಿಯವರೆವಿಗೆ ಸುಮಾರು ೨೫೦೦ ಮಾನವ ವಂಶವಾಹಿ (ಜೀನ್) ಗಳನ್ನು ಗುರುತಿಸಿ, ಅವುಗಳ ತಳಪಟ್ಟಿಗಳನ್ನು (ಜೆನೆಟಿಕ್ ಮ್ಯಾಪ್) ತಯಾರಿಸಲಾಗಿದೆ. ಜಗತ್ತಿನಾದ್ಯಂತ ಭಾರಿ ಪ್ರಮಾಣದಲ್ಲಿ ಮಾನವ ಜೀನೋಮ್ ಯೋಜನೆಯ ಸಂಶೋಧನೆಗಳು ನಡೆಯುತ್ತಿವೆ. ಇದರಿಂದಾಗಿ ಡಿ. ಎನ್. ಎ. ಯ ರಹಸ್ಯ

ಗಳು ಹೆಚ್ಚು ಹೆಚ್ಚು ಬಯಲಾಗುತ್ತಿವೆ. ಡಿ.ಎನ್.ಎ. ಬಗೆಗಿನ ಒಗಟುಗಳನ್ನು ಬಿಡಿಸುವಲ್ಲಿ ತೇಪೆದಾರಿ ಕೆಲಸವೂ ಸಾಧ್ಯವೆಂದು ತಿಳಿದು ಬಂದದ್ದರಿಂದ ತಳಿ-ತಂತ್ರ ವಿದ್ಯೆ ವಿಜ್ಞಾನ ಕ್ಷೇತ್ರದಲ್ಲಿಟ್ಟಿರುವ ದಿಟ್ಟ ಹೆಜ್ಜೆಯಾಗಿ ಪರಿಣಮಿಸಿದೆ.

ಯಚ್ಚಾಪಿ ಸರ್ವಭೂತಾನಾಂ ಬೀಜಂ
ತದಹಮರ್ಜುನ
ನ ತದಸ್ತಿ ವಿನಾಯತ್ಸ್ಯಾನ್ಮಯಾ ಭೂತಂ
ಚರಾಚರಮ್
(ಭಗವದ್ಗೀತೆ ಅ ೧೦ : ೩೯)

ಸರ್ವ ಭೂತಗಳಿಗೂ ಆಧಾರವಾಗಿರುವ ಡಿ. ಎನ್. ಎ. ವಿಶ್ವ ವ್ಯಾಪಿಯಾಗಿ ಏನೆಲ್ಲಾ ಸಾಧಿಸಿದೆ. ಈ ವಸ್ತುವಿಲ್ಲದೆ ಚರಾಚರಗಳ ಅಸ್ತಿತ್ವವೇ ಇಲ್ಲ. ವಿಜ್ಞಾನಿಗಳು 'ಡಾಲಿ' ಎಂಬ ಕುರಿಮರಿ, 'ಮಾಲಿ' ಎಂಬ ಕೋತಿಮರಿಗಳನ್ನು ಸೃಷ್ಟಿಸಿದ್ದರೂ ಅದು ಮೂಲತಃ ಡಿ. ಎನ್. ಎ. ನಿಂದಲೇ ಸಾಧ್ಯವಾಗಿರುವುದು.

ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ
ಭಾರತ
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ
ಸೃಜಾಮ್ಯಹಂ
(ಭಗವದ್ಗೀತೆ ಅ. ೪ : ೭)

ಧರ್ಮದ ಅವನತಿಯಾದಂತೆ ಅಧರ್ಮವು ಹೆಚ್ಚುತ್ತದೆ. ಅಧರ್ಮದ ದಮನಕ್ಕಾಗಿ ಬೇರೊಂದು ರೂಪ ತಾಳಬೇಕಾಗುತ್ತದೆ. ಜೀವ ವಿಕಾಸದ ಮೂಲೋದ್ದೇಶವೇ ಉಳಿವಿಗಾಗಿ ಹೋರಾಟ. ಪ್ರಕೃತಿಯ ತತ್ವಕ್ಕೆ ಹೊಂದಾಣಿಕೆ ಮಾಡಿಕೊಳ್ಳುವ ಸಲುವಾಗಿ ಮಾರ್ಪಾಟುಗಳು ಅಗತ್ಯವಾದಾಗ ಬದಲಾವಣೆ ಅನಿವಾರ್ಯವಾಗುತ್ತದೆ. ಈ ಮಾರ್ಪಾಟುಗಳು ಡಿ. ಎನ್. ಎ. ನಿಂದಲೇ ಸಾಧ್ಯ. ಇವು ಎರಡು ಹಂತಗಳಲ್ಲಿ ನಡೆಯಬಹುದು.

೧. ಪರಿಸರ ನೇರವಾಗಿ ಡಿ. ಎನ್. ಎ. ಜೊತೆ ಸ್ಪಂದಿಸಿ ರಚನೆಯಲ್ಲಿ ಪರಿಪೂರ್ಣ ಬದಲಾವಣೆ ಹೊಂದುವುದು.

೨. ಒಂದು ಪ್ರಭೇದ ಅಥವಾ ಪ್ರಭೇದಗಳ ಗುಂಪು ನಿರ್ದಿಷ್ಟ ಪರಿಸರದಲ್ಲಿ ಜೀವಿಸುತ್ತವೆ. ಪರಿಸರ ಬದಲಾವಣೆ ಹೊಂದುತ್ತಲೇ ಇರುತ್ತದೆ. ಬದಲಾವಣೆ ಪ್ರಕೃತಿ ನಿಯಮ. ಈ ಬದಲಾವಣೆಗಳಿಂದ ಕೆಲವೊಂದು ಪ್ರಭೇದಗಳು ಮಾರ್ಪಾಟು ಹೊಂದಬೇಕಾಗುವುದು. ಇದೇ ವಿಕೃತಿ. ಹೆಚ್ಚುತ್ತಿರುವ ಪರಿಸರ ಮಾಲಿನ್ಯ, ಮಾನಸಿಕ ಒತ್ತಡಗಳಿಂದ ಜಗತ್ತಿನೆಲ್ಲೆಡೆ ಡಿ. ಎನ್. ಎ. ಬದಲಾವಣೆಗಳನ್ನು ತರುತ್ತಿವೆ. ಇದರಿಂದಾಗಿ ಹೊಸ ಹೊಸ ರೋಗರುಜಿನಗಳು ತಲೆದೋರುತ್ತಿವೆ.

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ
ನವಾನಿ ಗೃಹ್ಣಾತಿ ನರೋಽಪರಾಣಿ।
ತಥಾ ಶರೀರಾಣಿ ವಿಹಾಯ ಜೀರ್ಣಾನ್ಯ-
ನ್ಯಾನಿ ಸಂಯಾತಿ ನವಾನಿ ದೇಹೀ
(ಭಗವದ್ಗೀತೆ ಅ. ೨ : ೨೨)

ಮಾಸಿದ ಬಟ್ಟೆಗಳನ್ನು ಕಳಚಿ ಹೊಸ ವಸ್ತ್ರ ಧರಿಸುವಂತೆ, ಶರೀರದಲ್ಲಿ ಅಡಕವಾಗಿರುವ ಡಿ. ಎನ್. ಎ. ಜೀರ್ಣವಾಗುತ್ತಿರುವ ಶರೀರವನ್ನು ತ್ಯಜಿಸಿ ಹೊಸ ಶರೀರವನ್ನು ಸೃಷ್ಟಿಸಿಕೊಳ್ಳುವುದೇ ಜೀವನ ಚಕ್ರ. ಹೀಗೆ ವಂಶವಾಹಿಗಳು ರಾಸಾನಿಕ ವೇಗವರ್ಧಕಗಳಂತೆ ಅಮರತ್ವ ಪಡೆದಿವೆ. ಇತರ ಜೈವಿಕ ಪದಾರ್ಥಗಳಿಗೆ ಹೋಲಿಸಿದಾಗ ಡಿ. ಎನ್. ಎ. ತನ್ನದೇ ಆದ ಅಸ್ತಿತ್ವ

ವನ್ನು ಯಥಾವತ್ತಾಗಿ ಉಳಿಸಿಕೊಂಡಿದೆ. ಇವು ಸಾಂಕೇತಿಕ ಭಾಷೆಗಳಾಗಿ ತಲೆಮಾರಿನಿಂದ ತಲೆಮಾರಿಗೆ ಹೊಸ ಹೊಸ ಶರೀರಗಳನ್ನು ಸೃಷ್ಟಿಸುತ್ತಾ ಸಾಗುತ್ತದೆ.

ಕರ್ಮಣಃ ಸುಕೃತಸ್ಯಾಹುಃ ಸಾತ್ವಿಕಂ
ನಿರ್ಮಲಂ ಫಲಮ್।

ರಜಸಸ್ತು ಫಲಂದುಃಖಮಜ್ಞಾನಂ ತಮಸಃ
ಫಲಮ್।

(ಭಗವದ್ಗೀತೆ ಅ. ೧೪ : ೧೬)

ಸಾತ್ವಿಕವಾದ ಕರ್ಮಕ್ಕೆ ನಿರ್ಮಲವೂ, ಸಾತ್ವಿಕವೂ ಆದ ಫಲ. ರಜಸ್ಸಿನ ಫಲ ದುಃಖ, ತಮಸ್ಸಿನ ಫಲ ಅಜ್ಞಾನ. ಅಂದರೆ ಸೃಷ್ಟಿಯ ಮೂಲವಾದ ಡಿ. ಎನ್. ಎ. (ಬ್ರಹ್ಮ), ಪರಿಸರ (ವಿಷ್ಣು) ಪರಸ್ಪರ ಹೊಂದಾಣಿಕೆ ಮಾಡಿಕೊಂಡಾಗ ವಿಶೇಷ ಗುಣ ಲಕ್ಷಣಗಳು ಉಂಟಾಗಬಲ್ಲವು. ಅಂಥ ಹೊಂದಾಣಿಕೆ ಸಾಧ್ಯವಾದಲ್ಲಿ ನಾಶ ಅಥವಾ ಲಯ (ಶಿವಂ) ಹೊಂದಬೇಕಾಗುತ್ತದೆ. ಅಗೋಚರವಾದ ಲಕ್ಷಣಗಳು ತನ್ನ ಹೊಂದಾಣಿಕೆಗನುಗುಣವಾಗಿ ಗೋಚರಿಸುವ ಪ್ರವೃತ್ತಿಗಳನ್ನು ಕಾಣಬಹುದಾಗಿದೆ.

ವೈದ್ಯಕೀಯ ಕ್ಷೇತ್ರದಲ್ಲಿ ಕಣ್ಣು ಹಾಯಿಸಿದಾಗ ಎಂಥ ಚಮತ್ಕಾರಗಳಾಗಿವೆ ಎಂದು ಆಶ್ಚರ್ಯಪಡಬಹುದಾಗಿದೆ. ಶರೀರದ ಆಗು-ಹೋಗುಗಳನ್ನು ಗಣಕ ತೆರೆಯ ಮೇಲೆ ವೀಕ್ಷಿಸಬಹುದು. ರೋಗ ಲಕ್ಷಣಗಳನ್ನು ಪತ್ತೆ ಹಚ್ಚಲು ಸುಲಭ ವಿಧಾನಗಳನ್ನು ಬಳಸಬಹುದು. ಸ್ಟೆತಾಸ್ಕೋಪಿನಿಂದ ಹಿಡಿದು ಎಲೆಕ್ಟ್ರೋ ಕಾರ್ಡಿಯೋಗ್ರಾಫ್-ವರೆವಿಗೂ ಬೆಳವಣಿಗೆಯ ಹಾದಿ ಕಾಣಬಹುದು. ಹೃದಯದ 'ಏರಿಳಿತಗಳ ವ್ಯತ್ಯಾಸ ಕೂಲಂಕುಷವಾಗಿ ಅಭ್ಯಸಿಸಬಹುದು. ರೇಡಿಯೋಗ್ರಾಫಿಕ್ ಪದ್ಧತಿ ಬಳಸಿ ರೋಗದ ಮೂಲವನ್ನು ನಿರ್ದಿಷ್ಟವಾಗಿ ಪತ್ತೆ ಹಚ್ಚಬಹುದು ರಕ್ತದೊತ್ತಡ, ಹೃದಯದ ಕವಾಟಗಳ ತೊಂದರೆಗಳನ್ನು ಶಸ್ತ್ರಚಿಕಿತ್ಸೆಯಿಂದ ಇಲ್ಲವೇ ಶಸ್ತ್ರಚಿಕಿತ್ಸೆಯೂ ಇಲ್ಲದೆಯೇ ಪರಿಹಾರಗಳನ್ನು ಒದಗಿಸಬಹುದು. ರಕ್ತನಾಳಗಳನ್ನೇ ಅಲ್ಲದೆ ಬದಲಿ ಹೃದಯಗಳನ್ನು ಜೋಡಿಸಬಹುದಾದಂಥ ತಂತ್ರವಿದ್ಯೆ ಬೆಳೆದು ಬಂದಿದೆ. ಇಷ್ಟೆಲ್ಲಾ ಸೌಲಭ್ಯಗಳ ನಡುವೆ ಪ್ರಮುಖವಾದ ಎರಡು ಕೊಲೆಗಾರರ ವಿರುದ್ಧ ಹೋರಾಡಬೇಕು. ಒಂದು ಸೋಂಕು, ಮತ್ತೊಂದು ಅಂಗ ಅಥವಾ ಅಂಗಾಂಶ ನಿರಾಕರಣೆ. ಇವೆರಡೂ ಡಿ. ಎನ್. ಎ. ಪ್ರದೇಶದ ವಿರುದ್ಧದ ಹೋರಾಟವೇ.

ಸಂಕರೋ ನರಕಾಯ್ಕೈವ ಕುಲಘ್ನಾನಾಂ
ಕುಲಸ್ಯ ಚ।

ಪತಂತಿ ಪಿತರೋ ಹ್ಯೇಷಾಂ ಲುಪ್ತ-
ಪಿಂಡೋದಕಕ್ರಿಯಾಃ

(ಭಗವದ್ಗೀತೆ ಅ. ೧ : ೪೨)

ಸಂಕರ ತಳಿಗಳು ಹೆಚ್ಚಾದಂತೆ ನಿಸರ್ಗದ ನಿಯಮಗಳು ಬದಲುತ್ತಾ ಹೋಗುತ್ತವೆ.

ಜೀವಿ-ಜೀವಿಗಳ ಪರಸ್ಪರ ಹೊಂದಾಣಿಕೆಗಳಿಂದ ಒಂದು ಸಮತೋಲನದ ಸುವ್ಯವಸ್ಥಿತ ಜಗತ್ತು ಸಾಧ್ಯ, ಒಂದು ಜೀವಿ ಮತ್ತೊಂದಕ್ಕೆ ಆಹಾರವಾಗಿ, ಆಹಾರ ಸರಪಳಿ ಮತ್ತು ಜಾಲಗಳು ಆರೋಗ್ಯಕರ ಜೀವಾವಾಸಗಳನ್ನು ನಡೆಸಬಲ್ಲವು. ತಳಿ ತಂತ್ರವಿದ್ಯೆಯಿಂದ ಸ್ವಾರ್ಥ ದೃಷ್ಟಿ ಬೆಳೆಸಿ-ಕೊಂಡಿರುವ ನಾವು ಕ್ರಿಮಿ ವಿರೋಧಿ ಪೀಡಕ ವಿರೋಧಿ ಸಸ್ಯಗಳನ್ನು ಸೃಷ್ಟಿಸಿದ್ದೇವೆ. ಇದರಿಂದ ಅಸಮತೋಲನ ಉಂಟಾಗಿ ಜಗತ್ತಿನ ನಾಶಕ್ಕೆ ನಾವೇ ಕಾರಣವಾಗುತ್ತೇವೆ.



ಮದ್ಯಪಾನ ಕಳ್ಳತನಕ್ಕಿಂತಲೂ ಹೇಯವಾದದ್ದು

ದೇವರಿಗೆ ಭಯ ಪಡಬೇಕು, ಮನುಷ್ಯರಿಗೆ ಭಯಪಡಬಾರದು

ದುಃಖ ಎನ್ನುವುದು ತ್ಯಾಗವಲ್ಲ, ಯಾವ ತ್ಯಾಗದಿಂದ ಮನುಷ್ಯನಿಗೆ ಆನಂದ ಲಭಿಸುತ್ತದೋ ಅದೇ ನಿಜವಾದ ತ್ಯಾಗ.

—ಮಹಾತ್ಮ ಗಾಂಧಿ

ಸಾಯಲೊಲ್ಲದ ವ್ಯಕ್ತಿ

ನೀರದ ಎನ್ ನಾಗರಾಜರಾವ್

೨೨೩೫, ೨೩ನೇ ಕ್ರಾಸ್, ಬನಶಂಕರಿ ೨ನೇ ಹಂತ
ಬೆಂಗಳೂರು–೫೬೦೦೭೦

ಮಾಗೋ ಎಂಬ ಸಣ್ಣ ಸಮುದ್ರ ತೀರದ ಪಟ್ಟಣವೊಂದು ನ್ಯೂಸೌತ್‌ವೇಲ್ಸ್‌ನಲ್ಲಿದೆ. ಅದು ೩೦೦ ಕಿಲೋಮೀಟರ್ ಸಿಡ್ನಿಗೆ ದಕ್ಷಿಣದಲ್ಲಿದೆ. ಮಾಗೋದಲ್ಲಿನ ಅವರ ಮನೆಯ ಹೊರ ಬಾಗಿಲಿನಲ್ಲಿ ನಿಂತು, "ನೀವು ಇನ್ನೂ ಜಾಸ್ತಿ ದಿನ ರಜದಲ್ಲಿದ್ದಿದ್ದರೆ ಚೆನ್ನಾಗಿತ್ತು ಎಂದು ಜೂಲಿ ತನ್ನ ಗಂಡ ಬೋಲ್ಲರ್‌ನನ್ನು ಅಪ್ಪಿಕೊಡು ಹೇಳಿದಳು. "ನನಗೂ ಹಾಗೇ ಅನ್ನಿಸ್ತಾ ಇದೆ" ಎಂದು ಕಪ್ಪು ಕೂದಲಿನ ೩೦ ವರ್ಷದ ಯುವಕ ಹೇಳುತ್ತಾ ತನ್ನ ಹೆಂಡತಿಗೆ ಮುತ್ತಿಟ್ಟು, ಗುಡ್‌ಬೈ' ಹೇಳಿ ಹೊರಟು ಹೋದ. ಅವನು ವಾರದ ರಜ ಮುಗಿಸಿಕೊಂಡು ಮತ್ತೆ ಕೆಲಸಕ್ಕೆ ಹಾಜರಾಗಲೇಬೇಕಾಗಿತ್ತು.

ಹತ್ತಿರದಲ್ಲೇ ಇದ್ದ ದಕ್ಷಿಣದ ಆಸ್‌ಫಾಲ್ಟ್‌ರ್ಸ್ ಕಾಂಪೆಕ್ಸ್‌ನಲ್ಲಿ ಅವನು ಆಸ್‌ಪ್ಲಾಂಟ್ (ಕಪ್ಪುರಾಳ) ಆಪರೇಟರ್ ಆಗಿದ್ದನು. ಬೋಲ್ಲರ್ ಗಟ್ಟಿಮುಟ್ಟಾಗಿ, ಒಳ್ಳೇಮಾಂಸ ಖಂಡ ಹೊಂದಿದ್ದನು. ಎಷ್ಟೇ ಕಷ್ಟದ ಕೆಲಸವಾಗಲಿ, ಎಷ್ಟೇ ಹೊತ್ತಿನ ಕೆಲಸವಾಗಲಿ ಅವನಿಗೆ ಆಯಾಸವೇ ಆಗುತ್ತಿರಲಿಲ್ಲ. ರಜಕ್ಕೆ ಬರುವ ಮುನ್ನ ಹತ್ತು ವಾರಗಳ ಏಳು ದಿನವೂ ಕೆಲಸ ಮಾಡಿದ್ದನು. ಏಕೆಂದರೆ, ನ್ಯೂ ಸೌತ್‌ವೇಲ್ಸ್ ರೋಡ್‌ನವರು ಮತ್ತು ಟ್ರಾಫಿಕ್ ಆಥಾರಟಿಯವರು ಆ ಕಂಪನಿಗೆ ಬಹಳ ಬೇಕಾದ ಅತಿ ದೊಡ್ಡ ಗಿರಾಕಿಗಳಾಗಿದ್ದರು. ಅವರಿಗೆ ಕೊಡಬೇಕಾದ ೧೦ ಸಾವಿರ ಟನ್ ಆಸ್‌ಫಾಲ್ಟ್‌ನ್ನು ಅವನು ಉತ್ಪನ್ನ ಮಾಡಿಕೊಡಲೇಬೇಕಾಗಿತ್ತು. ಹೀಗೆ ದುಡಿಯುತ್ತಾ ಇರುವುದರಿಂದ, ಗೌನು ತನ್ನ ಸಂಸಾರವನ್ನು ಕಡೆಗಣಿಸುತಿದ್ದೇನೆ ಅಂತ ಅವನಿಗೆ ಆಗಾಗ್ಗೆ ಆತಂಕ ಉಂಟಾಗುತ್ತಿತ್ತು.

ಆದರೆ, ನಮಗೆ ಹಣ ಬೇಕೇಬೇಕಲ್ಲ ಅಂತ ಅವನು ತನಗೆ ತಾನೇ ಸಮಾಧಾನ ಹೇಳಿಕೊಳ್ಳುತ್ತಿದ್ದನು. ಅಡವಿಟ್ಟುಕೊಂಡಿದ್ದ ಎರಡು ಬೆಡ್ ರೂಮಿನ ಮನೆಗೆ ಸಾಲ ತೀರಿಸಲು ಮತ್ತು ಜೆರ್ರಿಕಾಳ ಆಸ್ಪತ್ರೆ ಖರ್ಚಿಗೆ ಅವನಿಗೆ ಬರುತಿದ್ದ ಸಂಬಳ ಸಾಕಾಗುತ್ತಿರಲಿಲ್ಲ. ಅದೂ ಅಲ್ಲದೆ ಮಗಳು ಜೆರ್ರಿಕಾಗೆ ಮೆದುಳಿನ ಅಪಘಾತವೂ ಆಗಿದ್ದರಿಂದ, "ನಾನು ಹೆಚ್ಚಿಗೆ ಮಾಡುವ ಕೆಲಸದಿಂದ ಬರುವ ಸಂಪಾದನೆ ಜೆರ್ರಿಕಾಳ ತಳ್ಳುವ ಗಾಡಿಗಾದರೂ ಆಗುತ್ತೆ" ಎಂದು ಜೂಲಿಗೆ ಮಾತು ಕೊಟ್ಟಿದ್ದನು. ಬೆಳಿಗ್ಗೆ ಏಳು ಗಂಟೆ ಹೊತ್ತಿನಲ್ಲಿ ಬೋಲ್ಲರ್ ಎರಡು ಎಕರೆ ವಿಸ್ತೀರ್ಣದ ಕಪ್ಪುರಾಳದ ಪ್ಲಾಂಟ್‌ನ ರಸ್ತೆಯಲ್ಲಿ ಕಾರನ್ನು ಓಡಿಸಿಕೊಂಡು

ಮೂಲ : ಸೆಪ್ಟೆಂಬರ್ ೧೯೯೬ ರ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಮೆಕ್‌ನುನ್ ಅವರ 'ದ ಮ್ಯಾನ್ ಹೂ ವುಡ್‌ನಾಟ್ ಡೈ' ಲೇಖನ.

ಬಂದನು. ಎಡಕ್ಕೆ ಇದ್ದ ಒಂದು ಸಣ್ಣ ನೀರಿನ ಅಣೆಕಟ್ಟನ್ನು ದಾಟಿ, ಬಲಕ್ಕೆ ಇದ್ದ ಒಂದು ಅಲ್ಯೂಮಿನಿಯಂ ಪ್ಲಾಂಟ್‌ನ ಆಫೀಸನ್ನೂ ದಾಟಿ ಬಂದನು. ೭ ಮೀಟರ್ ಉದ್ದದ ಅಡ್ಡಲಾಗಿರುವ ಕಲೆಸುವಡ್ರಮ್, ಅದರೊಳಗೆ ಕನ್‌ವೇಯರ್ ಬೆಲ್ಟ್ ಮೇಲಿನಿಂದ ಕಾಂಕ್ರೀಟ್ ಕಲ್ಲುಗಳು ಬಂದು ಬೀಳುತ್ತಿದ್ದವು. ಅದರ ಇನ್ನೊಂದು ತುದಿಯಲ್ಲಿ ಟಾರನ್ನು ಶೇಖರಿಸುವ ಟ್ಯಾಂಕ್ ಒಂದಿತ್ತು. ೧೭೦ ಡಿಗ್ರಿ ಉಷ್ಣಾಂಶದಿಂದ ಕೂಡಿದ್ದ ಟಾರಿನಂತಿರುವ ದ್ರವರೂಪ ಅದರೊಳಗೆ ಇರುತಿತ್ತು.

ಬೋಲ್ಲರ್ ತನ್ನ ಕಾರನ್ನು ಆ ಯಂತ್ರದ ಹತ್ತಿರವೇ ನಿಲ್ಲಿಸಿದನು, ನಂತರ ತನ್ನ ಜೊತೆ ಕೆಲಸ ಮಾಡುವವರೊಂದಿಗೆ ಕಾಫಿ ಕುಡಿದನು. ಅವರುಗಳಲ್ಲಿ ಸ್ಟೀಫನ್ ಹಾರಿಸ್ ಎಂಬುವನು ಹೊಸದಾಗಿ ಕೆಲಸಕ್ಕೆ ಸೇರಿಕೊಂಡಿದ್ದ. ಹ್ಯಾರಿಸ್‌ಗೆ ಬೋಲ್ಲರ್ ಎದೆಗಾರಿಕೆ, ಕೆಲಸದಲ್ಲಿ ಅವನಿಗಿದ್ದ ಸ್ಫೂರ್ತಿ ಬಹಳ ಮೆಚ್ಚಿಕೆಯಾಗಿತ್ತು. ಬೋಲ್ಲರ್‌ಗೆ ಆ ದಿನದ ಮೊದಲ ಕೆಲಸವೆಂದರೆ ಟ್ಯಾಂಕ್‌ನ ಮೇಲ್ ಭಾಗದ ಏರ್‌ವೆಂಟ್ ಕೊಳವೆಯನ್ನು ಬದಲಾಯಿಸುವುದಾಗಿತ್ತು. ಆದ್ದರಿಂದ, ಅವನು ಹಗೇವಿನಂಥ ಒಂದು ಟ್ಯಾಂಕ್‌ನ ಮೇಲಿನ ಭಾಗಕ್ಕೆ ಏಣಿಯ ಸಹಾಯದಿಂದ ಹತ್ತಿ, ಕರಿ ತಗಡಿನ ಮೇಲ್ ಛಾವಣಿ ಮೇಲೆ ಕಾಲಿಟ್ಟನು. ಆ ಟ್ಯಾಂಕ್‌ನಿಂದ ಶಾಖ ಹೊರಬೀಳದಿರಲೆಂದು ಬಲವಾದ ರಬ್ಬರ್ ಕವಚದಿಂದ ಮುಚ್ಚಿದರೂ ಸಹ, ಅವನು ಕೆಲಸಕ್ಕಾಗಿಯೇ ಹಾಕಿಕೊಂಡು ಬಂದಿದ್ದ ಬೂಟಿನ ಅಡಿಯಿಂದ ಬಿಸಿ ಒಳ ತೂರಿಕೊಂಡು ಬಂದು ವಿಪರೀತ ಸುಡಲು ತೊಡಗಿತ್ತು. ಟ್ಯಾಂಕ್‌ನೊಳಗಿರುವ ಟಾರು ಅವನನ್ನು ಹುರಿದು ಬಿಡುವಷ್ಟು ಶಕ್ತಿಯಿಂದ ಕುದಿಯುತ್ತಿರುತ್ತೆ ಅಂತ ಅವನಿಗೆ ಚೆನ್ನಾಗಿ ಗೊತ್ತು. ಕೆಳಗೆ ಇಳಿಯುವುದು ಅವನ ಎಣಿಕೆಯಾಗಿತ್ತು.

ಇದ್ದಕ್ಕಿದ್ದಂತೇ ಬೋಲ್ಲರ್‌ಗೆ ಭಾರೀ ಶಬ್ದ ಕೇಳಿಸಿತು. ತಕ್ಷಣ ಅರಿವಾಗಲಿಲ್ಲ. ಸುತ್ತಲೂ ಕತ್ತು ಹೊರಳಿಸಿ ನೋಡಿದಾಗ, ಟ್ಯಾಂಕಿನ ಮಧ್ಯದಲ್ಲಿರುವ ಉಸಿರು ಕೊಳವೆಯಿಂದ ಆವಿ ಬುಸುಗುಟ್ಟುತ್ತಾ ಹೊರಕ್ಕೆ ಬರತೊಡಗಿತ್ತು. ಟ್ಯಾಂಕ್‌ನೊಳಗೆ ಒತ್ತಡ ಬಹಳ ಜಾಸ್ತಿ ಆಗಿಬಿಟ್ಟರೆ ಈ ರೀತಿ ಆವಿ ಹೊರಹೊಮ್ಮುತ್ತೆ ಅಂತ ಅವನಿಗೆ ಚನ್ನಾಗಿ ಗೊತ್ತಿದೆ. ಅಷ್ಟರೊಳಗೆ ಟ್ಯಾಂಕ್ ಕಂಪಿಸ ತೊಡಗಿತು. ಮತ್ತೊಂದು ಕ್ಷಣದಲ್ಲಿ ಟ್ಯಾಂಕ್‌ನ ಎಲ್ಲಾ ಭಾಗಗಳೂ ಗಡಗಡನೆ ಅಲ್ಲಾಡ ತೊಡಗಿದವು. ಬೋಲ್ಲರ್‌ಗೆ ಟ್ಯಾಂಕ್ ಸಿಡಿಯುತ್ತದೆಂದು ತಿಳಿಯಿತು.

ಅವನು ಅಲ್ಲಿಂದ ೧.೫ ಮೀಟರ್ ಕೆಳಗಿರುವ ಛೇಂಬರ್ ಮೇಲಕ್ಕೆ ಹಾರಿದನು. ಇನ್ನೂ ೪.೫ ಮೀಟರಿನಷ್ಟು ಹಾರಿಬಿಟ್ಟಲ್ಲಿ ಸಧ್ಯ ಬಚಾವು ಆಗಬಹುದು. ಆದ್ದರಿಂದ ಆದಷ್ಟೂ ಬೇಗ ನಾನು ಹಾರಿ ಕೆಳಕ್ಕೆ ಹೋಗಬೇಕು. ಅಂತ ಯೋಚಿಸಿ ಕೆಳಗೆ ನೋಡಿದಾಗ, ಅವನ ಎದೆ ಝಗ್ ಎಂದಿತು. ಮುಖ್ಯವಾದ ದೊಡ್ಡ ಟ್ಯಾಂಕ್ ತಳದಲ್ಲಿ ಒಂದು ಸೀಳು ಬಿಟ್ಟುಕೊಂಡು, ಕರಗಿರುವ ಕಪ್ಪು ಟಾರು ನೆಲದಮೇಲೆಲ್ಲಾ ಹರಡಿ ಚೀಸಿಕೊಂಡು ಬರುತ್ತಿತ್ತು.

ಒಂದೇ ಒಂದು ಭರವಸೆ

ನೆಲದ ಮೇಲೆ ದೊಪ್ಪನೆ ಬಿದ್ದಮೇಲೆ ಬೋಲ್ಲರ್‌ಗೆ ತನ್ನೆರಡು ಮೊಣಕಾಲಿನಲ್ಲಿ

ಮೂಳೆಗಳು ಮುರಿದು ಹೋದಂತೆಯೇ ಅನ್ನಿಸಿತು. ಅವನು ಟಾರಿನಲ್ಲಿ ನೆನೆದು ಹೋದನು. ಕಾದಟಾರು ಚರ್ಮದೊಳಕ್ಕೂ ಹರಿದು ಬೆನ್ನೆಲ್ಲ ಹೊಪ್ಪಳೆಯಾಗಿ ಜೀವಸಹಿತ ಬೇಯುವ ಯಾತನೆಯಾಯಿತು. ಟಾರಿನ ಮೇಲಿಂದ ಜಾರುವುದನ್ನು ತಡೆಗಟ್ಟಲು ಸೆಣಸಾಡತೊಡಗಿದನು. ಟಾರುಉಕ್ಕುವ ರಭಸಕಡಿಮೆಯಾಗುವುದರೊಳಗೆ, ಅವನು ಒಂದು ಸೆಂಟಿಮೀಟರಿನಷ್ಟು ದಪ್ಪದ ಟಾರಿನಿಂದ ಮುಚ್ಚಿ ಹೋಗಿದ್ದನು. ಅದು ಅವನ ಕಿವಿ ವಾಪೆಯನ್ನು ತೂತು ಮಾಡಿಬಿಟ್ಟಿತ್ತು. ಬಾಯಿಯನ್ನೆಲ್ಲಾ ಸುಟ್ಟು, ಮೂಗಿನ ಹೊಳ್ಳೆಗಳನ್ನೂ ಸುಟ್ಟುಹಾಕಿಬಿಟ್ಟಿತು. ನೀರಿಗಾಗಿ ಹಾತೊರೆದನು, ಆದರೆ ಆ ನೀರಿನ ಡ್ಯಾಮ್ ಸಹ ೬೦ ಗಜದಷ್ಟು ದೂರದಲ್ಲಿದೆ. ಆದರೆ ಅದು ಒಂದು ಇಳಿಜಾರಿನ ಸ್ಥಳವಾಗಿರುವುದರಿಂದ ಎರಡು ಮೊಣಕಾಲುಗಳಿಂದ ಕಷ್ಟಪಟ್ಟು ಎದ್ದು ನಿಂತು, ಆದಷ್ಟು ಬೇಗ ಓಡಲು ಪ್ರಯತ್ನಿಸಿದನು. ಆದರೆ, ಕೂಡಲೇ ಜಾರಿಬಿದ್ದನು. ಅವನ ಕಾಲಿನಲ್ಲಿದ್ದ ಬೂಡ್ಸುಗಳು ಅವನಿಗೆ ನಡೆದುಕೊಂಡು ಹೋಗಲು ಅವಕಾಶ ಕೊಡಲಿಲ್ಲ. ಆ ಕಪ್ಪು ಟಾರು ಅವನ ಕಾಲಿಗೆ ಮಡುವಿನಂತೆ ಸುತ್ತುಗಟ್ಟಿತ್ತು.

ಬಹಳಷ್ಟು ಬಲವಂತದಿಂದ ಬೋಲ್ಲರ್ ತನ್ನ ಕೆಲಸದ ಲಾರಿ ಬಾಗಿಲಬಳಿಗೆ ಬಂದು ನಿಂತನು, ಅವನ ಎಡಗಣ್ಣಿನ ಮೇಲಿನ ಸ್ವಲ್ಪ ಭಾಗದಲ್ಲಿ ಟಾರು ಸೀಳಿ ಉದ್ದವಾಗಿ ಹರಿದಿದ್ದದ್ದರಿಂದ ಅಷ್ಟಾದರೂ ನೋಡುವುದಕ್ಕೆ ಸಾಧ್ಯವಾಗಿತ್ತು. ಅವನು ಕಷ್ಟಪಟ್ಟು ಡ್ಯಾಮ್ ಇರುವ ಜಾಗವನ್ನೇದೃಷ್ಟಿಸಿ ನೋಡಿದನು. "ನೀನಿನ್ನೂ ಅದನ್ನು ಸೇರಲು ಬಹಳ ಪ್ರಯತ್ನಪಡಬೇಕು" ಎಂದು ಅವನು ತನಗೆ ತಾನೇ ಧೈರ್ಯ ತಂದುಕೊಳ್ಳುತ್ತಾ ಹೇಳಿಕೊಂಡನು.

ಸ್ಟೆಫನ್ ಹ್ಯಾರಿಸ್ ಪ್ಲಾಂಟಿನ ಆಫೀಸಿನ ಹೊರಗಡೆ ನಿಂತಿದ್ದನು. ಆ ಆಫೀಸು ಟ್ಯಾಂಕ್‌ಗೂ, ಡ್ಯಾಮಿಗೂ ಮಧ್ಯದಲ್ಲಿತ್ತು. ಪ್ಲಾಂಟ್‌ಸಿಡಿದು ಆಸ್ಫೋಟನೆ ಶಬ್ದ ಕೇಳಿದಾಗ ಅವನು ತನ್ನ ಯಜಮಾನನ ಹತ್ತಿರ ಬಾಗಿಲ ಒಳಗಿನಿಂದ ಮಾತಾಡುತ್ತಾ ಇದ್ದನು. ೩೮ ವರ್ಷದ ಗಡ್ಡದ ಡ್ರೈವರ್ ಆಶ್ಚರ್ಯದಿಂದ ಆ ಮುರಿದು ಬಿದ್ದು ಹೋದ ಟ್ಯಾಂಕ್‌ನ ಕಡೆಯಿಂದ ಒಂದು ಕಪ್ಪಿನ ಆಕೃತಿಯೊಂದು ಟ್ರಕ್ಕನ್ನು ಒರಗಿಕೊಂಡು ನಿಂತುಕೊಂಡಿದ್ದಂತೆ ನೋಡಿದನು. ಆದರೆ, ಆ ಕಪ್ಪಿನಿಂದ ಮುಚ್ಚಿ ಹೋಗಿದ್ದರಿಂದ ಅವನು ಯಾರಿರಬಹುದು ಎಂದು ಗುರುತು ಹಿಡಿಯಲಾರದವನಾದನು. ಆ, ಆಕೃತಿ ನೋವಿನಿಂದ ಅತಿಯಾಗಿ ನರಳುತ್ತಿರುವುದನ್ನು ಕೇಳಿ, ಹ್ಯಾರಿಸ್ ಓಡಿ ಬಂದು ನೋಡಿದನು.

ಆತನು ಲಾರಿಯಿಂದ ದುಮುಕಿ, ಕೈಯನ್ನು ಚೆನ್ನಾಗಿ ಅಲುಗಾಡಿಸುತ್ತಾ "ಆಂಬ್ಯುಲೆನ್ಸ್‌ಗೆ ಬರಹೇಳಿ" ಎಂದು ಕೂಗಿ ಆಫೀಸಿನ ಒಳಕ್ಕೆ ಹೋದನು. ತಾರಿನಿಂದ ಮುಚ್ಚಿಹೋಗಿದ್ದ ಆ ಆಕೃತಿ ಏಳುತ್ತಾ, ಬೀಳುತ್ತಾ, ನೀರಿನೊಳಕ್ಕೆ ಬಂದು ಬಿದ್ದಿತು. ಆವಿಯಾಗಿ, ಗುಳುಗುಳು ಎಂದು ಗುಳ್ಳೆಗಳನ್ನೆಬ್ಬಿಸುತ್ತಾ ಟಾರು ಡ್ಯಾಮಿನ ಇಳಿಜಾರಿನಲ್ಲಿ ಲಾವಾರಸದಂತೆ ಹರಿದು ಬರತೊಡಗಿತ್ತು.

ಕಳೆದ ಹತ್ತು ವರ್ಷಗಳಿಂದ ಬೋಲ್ಲರ್ ತನ್ನ ದೇಹಧಾರ್ಢ್ಯಕ್ಕಾಗಿ

ತೂಕ ಎತ್ತುವ ಅಭ್ಯಾಸವನ್ನು ತಪ್ಪದೆ ಮಾಡಿಕೊಂಡು ಬಂದಿದ್ದನು. ಆದರೆ, ಈಗ ಯಾವುದೋ ಒಂದು ಅಗೋಚರ ಶಕ್ತಿಯಿಂದ ತನ್ನ ತೋಳ್‌ಬಲವನ್ನೆಲ್ಲಾ ಒಮ್ಮೆಗೇ ಒಟ್ಟುಗೂಡಿಸಿಕೊಂಡು ಅತಿಬಲವಂತದಿಂದ ತಳದಿಂದ ಮೇಲಕ್ಕೆ ಬಂದನು.

ತನ್ನ ಬೂಟ್ಸು ಮತ್ತು ಕೋಟುಗಳನ್ನು ಹಾಕಿಕೊಂಡೇ, ಹ್ಯಾರಿಸ್ ಡ್ಯಾಮ್ ಒಳಗೆ ಬಂದು ನಿಧಾನವಾಗಿ ತನ್ನ ಕೈಗಳನ್ನು ಬೋಲ್ಲರ್ ಕಂಕಳ ಕೆಳಗೆತಂದು ಹಿಡಿದು ಮೇಲೆತ್ತಲು ತೊಡಗಿದನು. ಆದರೆ, ಮೊಸಳೆಯ ಚರ್ಮದಂತಾಗಿದ್ದ, ಬಿಸಿಬಿಸಿಯಾದ ಟಾರು ಅವನ ಕೈಗಳನ್ನೂ ಸುಡುತಿತ್ತು, "ನೀನು ನನ್ನ ಕೈಗೆ ಸಿಕ್ಕಿದ್ದಾಯಿತು ಗೆಳೆಯ" ಎಂದು ಹ್ಯಾರಿಸ್ ಹೇಳುತ್ತಾ, "ಆಂಬ್ಯುಲೆನ್ಸ್ ಬರುವವರೆಗೂ ನಾವು ಹೀಗೆ ನೀರೊಳಗೇ ಇದ್ದುಬಿಡೋಣ" ಎಂದನು. ಈ ವೇಳೆಗಾಗಲೇ ಬೋಲ್ಲರ್‌ಗೆ ಆದ ಅನಾಹುತದ ಬಗ್ಗೆ ಎಲ್ಲರಿಗೂ ಗೊತ್ತಾಗಿ ಹೋಯಿತು. ೩ ಜನಗಳು ಬಂದು ಅಣೆಕಟ್ಟಿನ ಸುತ್ತಲೂ ನಿಂತುಕೊಂಡರು. ಅಷ್ಟರಲ್ಲಿ ಒಬ್ಬನು "ಅಯ್ಯೋ, ಬಿಸಿಬಿಸಿ ಟಾರು ನೀರಿನ ಒಳಕ್ಕೂ ಹರಿದುಕೊಂಡು ಬರುತ್ತಿದೆ" ಎಂದು ಕಿರುಚಿಕೊಂಡನು.

ಹ್ಯಾರಿಸ್ ತಿರುಗಿ ನೋಡಿದಾಗ ಟಾರಿನ ನದಿಯೇ ಹರಿದು ಬರುತ್ತಿರುವುದನ್ನು ಕಂಡು ಬಹಳ ಗಾಬರಿಯಾಯಿತು. ಅದು ನಿಧಾನವಾಗಿ ರಿಸರ್‌ವಾಯರ್ ಒಳಕ್ಕೂ ನುಗ್ಗಿತು. ಜೊತೆಗೆ ಟಾರಿನ ಬಿಸಿಯಿಂದ ನೀರೆಲ್ಲಾ ಕಾದು ಆವಿಯಾಗತೊಡಗಿತ್ತು. ಬುಸ್, ಬುಸ್ ಎಂದು ಕಂದು ಬಣ್ಣದ ನೊರೆ ನೀರಿನ ಮೇಲು ಭಾಗದಲ್ಲಿ ಹರಿಯ ತೊಡಗಿತು. ಹ್ಯಾರಿಸ್ ಮತ್ತು ಬೋಲ್ಲರ್ ತಲೆ, ನೀರಿನಿಂದ ಮೇಲಕ್ಕೆ ಇದ್ದುದರಿಂದ, ಟಾರಿನ ಬಿಸಿ ನೀರಿನೊಳಗಿಂದ ಹೊರ ಬರುತಿದ್ದುದು ಅವರಿಗೆ ತಟ್ಟುತಿತ್ತು.

"ನಾವು ಮುಂದಕ್ಕೆ ಹೋಗೋಣ!" ಎಂದು ಹ್ಯಾರಿಸ್ ಎಚ್ಚರಿಸಿದನು. ಬೋಲ್ಲರ್‌ನ ಮೊಣಕೈಗೆ ಆಸರೆ ಕೊಡುತ್ತಾ ಅವನನ್ನು ಡ್ಯಾಮ್‌ನ ಎದಿರುಭಾಗಕ್ಕೆ ಕರೆದೊಯ್ದನು. ಅದು ೨.೫ ಮೀಟರಿನಷ್ಟು ಎತ್ತರದ ಕಟ್ಟಿಯಿಂದ ಟ್ಯಾಂಕ್ ಹತ್ತಿರ ಕಟ್ಟಿತ್ತು, ಹ್ಯಾರಿಸ್ ಬೋಲ್ಲರ್‌ನ ತೊಡೆಗಳನ್ನು ಕೆಳಗಿನಿಂದ ತಳ್ಳಿದನು. ಬೋಲ್ಲರ್ ಇಳಿಜಾರಿನಲ್ಲಿ ಮೇಲೆ ಹತ್ತಲು ಪ್ರಯತ್ನ ಪಡುತಿದ್ದನು. ಆದರೆ ಟಾರು ಮೆತ್ತಿಕೊಂಡು ಬೆಂದು ಹೋಗಿದ್ದ ಬೆರಳುಗಳು ಅಲ್ಲಿದ್ದ ಜೇಡಿಮಣ್ಣಿನಲ್ಲಿ ಜಾರಿಜಾರಿ ಹೋಗ ತೊಡಗಿತ್ತು. ಇದರಿಂದ ಅವನಿಗೆ ಸರಿಯಾದ ಹಿಡಿತಸಿಕ್ಕದೆ ಬಿದ್ದುಬಿಟ್ಟನು. ೨ ಮೀಟರಿನಷ್ಟು ದೂರದಲ್ಲಿ ಬುರುಗು ಹರಿದುಕೊಂಡು ಬರುತ್ತಲೇ ಇತ್ತು. ದಡದ ಮೇಲಿದ್ದವನೊಬ್ಬನಿಗೆ, "ಅವನನ್ನು ಹೊರಕ್ಕೆ ಎಳಿ" ಎಂದು ಹ್ಯಾರಿಸ್ ಜೋರಾಗಿ ಕಿರುಚುತ್ತಾ ಆದೇಶವನ್ನಿತ್ತನು. ಹಾಗೆಯೇ ಆ ಮನುಷ್ಯ ಮೇಲಕ್ಕೆಳೆದುಕೊಂಡಾಗ ಬೋಲ್ಲರ್ ಯಾತನೆಯಿಂದ ನರಳಿದನು.

ಮೇಲುಸಿರು ಬಿಡುತ್ತಾ ಹ್ಯಾರಿಸ್ ತನ್ನ ಮುಂದೆ ಹಾದುಹೋಗುತ್ತಿದ್ದ ಆಕೃತಿಯನ್ನು ಬಟ್ಟಬಾಯಿ ಬಿಟ್ಟುಕೊಂಡು ನೋಡತೊಡಗಿದನು. ಬೋಲ್ಲರ್‌ನ ಮುಖದಾಕೃತಿ ಟಾರಿನ ಮುಖವಾಡದ ಒಳಗಿನಿಂದ ಸೂಕ್ಷ್ಮವಾಗಿ ಕಾಣುತ್ತಿತ್ತು. ಅವನ ಭುಜಗಳು ಮತ್ತು ಕಾಲುಗಳು ಸಾಮಾನ್ಯವಾಗಿ ಇರು

ವುದಕ್ಕಿಂತ ಮೂರು ಪಟ್ಟು ದೊಡ್ಡದಾಗಿ ಕಾಣುತ್ತಿತ್ತು.

ನೀರಿನಿಂದ ಹೊರಗಡೆ ಬರುತ್ತಿದ್ದ ಹಾಗೇ ಬೋಲ್ಲರ್‌ಗೆ ಮತ್ತೆ ಮೈ ಎಲ್ಲಾ ಉರಿಯ ತೊಡಗಿತು. "ದಯವಿಟ್ಟು ನನ್ನ ಮೈಯನ್ನು ಒದ್ದೆಯಾಗಿರುವಂತೆ ಮಾಡಿರಿ" ಎಂದು ಬೇಡಿ ಕೊಳ್ಳುತ್ತಿದ್ದನು.

ಬೋಲ್ಲರ್ ಅನ್ನು ಅಣೆಕಟ್ಟಿನ ಹತ್ತಿರ ದಲ್ಲೇ ನಿಂತಿದ್ದ ಲಾರಿಯೊಳಕ್ಕೆ ಕರೆದೊಯ್ದು ನೀರಿನ ತುಂತರು ಹನಿಯ ನಲ್ಲಿಯನ್ನು ತಿರುಗಿಸಿಬಿಟ್ಟರು. ಬೋಲ್ಲರ್ "ಇದರಿಂದ ಏನೂ ಪ್ರಯೋಜನವಿಲ್ಲ" ಎಂದು ನರಳಿದನು. ಹ್ಯಾರೀಸ್ "ನೀರಿನ ಪೈಪನ್ನೇ ಬೇಗ ತನ್ನಿ" ಎಂದು ಕೂಗಿದನು. ಒಬ್ಬ ಆಫೀಸಿನವರೆಗೂ ದೌಡಾಯಿಸಿ ತೋಟದ ಪೈಪನ್ನು ನಲ್ಲಿಗೆ ಸಿಕ್ಕಿಸಿ ನಲ್ಲಿ ತಿರುಗಿಸಿದನು. ಆದರೆ, ಅದು ಬೋಲ್ಲರ್ ನಿಂತಿದ್ದ ಜಾಗದವರೆಗೆ ಬರುವಷ್ಟು ಉದ್ದ ವಿರಲಿಲ್ಲ.

ಇದರಿಂದ ಅನನಿಗೆ ಉರಿ ಶಮನವಾಯಿತು. ಆದರೆ ತಡೆದುಕೊಳ್ಳಲಾಗದಂಥ ಚಳಿ ಶುರುವಾಗಿಬಿಟ್ಟಿತು. "ನನಗೆ ಜ್ಞಾನ ತಪ್ತಾ ಇದೆ" ಎಂದು ಹೇಳಿದನು. ತಕ್ಷಣ ಅವನ ಜೊತೆಗಾರರು ಅವನನ್ನು ಒಂದು ಕುರ್ಚಿಯಲ್ಲಿ ಕೂಡಿಸಿ, ಒದ್ದೆ ಕಂಬಳಿ ಯಿಂದ ಮುಚ್ಚಿ, ಅದು ಅವನನ್ನು ಅಂಟಿ ಕೊಳ್ಳದಂತೆ ಮಾಡಿ, ನಂತರ ಅದರ ಮೇಲೆ ನೀರಿನ ಚುರ್ಕೆಯನ್ನು ಬಿಡತೊಡಗಿದರು. ಅಷ್ಟೊಂದು ನೋವಿನಿಂದ ಒದ್ದಾಡುತ್ತಿ ದ್ದರೂ ಬೋಲ್ಲರ್ ಒಂದು ನಗೆಚಟಿಕೆ ಹಾರಿಸಿ "ನನಗೀಗ ಒಂದು ಚೀಲ ಹಕ್ಕಿ ಪುಕ್ಕಗಳ ಆವಶ್ಯಕತೆ ಇದೆ" ಎಂದನು. ಆದರೆ ಅದಕ್ಕೆ ಅವನ ಗೆಳೆಯರಾರೂ ಪ್ರತಿಸ್ಪಂದಿಸಿ ನಗಲಿಲ್ಲ.

ಆ ಸ್ಪೋಟವಾಗಿ ೩೦ ನಿಮಿಷಗಳು ಕಳೆದ ನಂತರ ಆಂಬ್ಯುಲೆನ್ಸ್ ಒಂದರಲ್ಲಿ ಮಲಗಿ ಹತ್ತಿರದಲ್ಲೇ ಇದ್ದ ಒಂದು ಆಸ್ಪತ್ರೆಗೆ ದಾಖಲಾದನು. ದಾರಿ ಯಲ್ಲಿ ಅವನಿಗೆ ಹೆಂಡತಿ ಮಕ್ಕಳ ನೆನಪಾಗಿ ದೇವರೇ, ಅವರಿಗಾಗಿಯಾದರೂ ನನ್ನನ್ನು ಬದುಕಿಸಿ ಕೊಡು ಎಂದು ಪ್ರಾರ್ಥಿಸಿದನು.

ಆಸ್ಪತ್ರೆಯಲ್ಲಿ ಡಾಕ್ಟರ್ ಜಾನ್ ಬೆರಿಕ್ ಬೋಲ್ಲರ್‌ನ ಎಡ ಮೊಣಕೈ ಬಳಿ ಇದ್ದ ಟಾರನ್ನು ಒಂದು ಪದರ ಸುಲಿದುಹಾಕಿ ನಾಲಕ್ಕು ಡ್ರಿಪ್ಸ್‌ನ್ನು ಅವನ ನರದೊಳಕ್ಕೆ ಚುಚ್ಚಿದನು. ಸುಟ್ಟುಗಾಯದ ರೋಗಿಗಳಿಗೆ ಬಹಳ ಬೇಗ ಅತಿ ಹೆಚ್ಚು ಅಂಶದಲ್ಲಿ ರಕ್ತ ಹೆಪ್ಪುಗಟ್ಟಿಕೊಳ್ಳುವುದು ಕಡಿಮೆಯಾಗುವು ದೆಂದು ಡಾಕ್ಟರಿಗೆ ತಿಳಿದ ವಿಷಯವೇ ಆಗಿದೆ: ಏಕೆಂದರೆ ರಕ್ತನಾಳಗಳು ಹಾಳಾಗುವುದೇ ಇದಕ್ಕೆ ಕಾರಣ. ಡಾಕ್ಟರ್ ಬೆರಿಕ್ ಆರು ಲೀಟರ್ ರಾಸಾಯನಿಕ ಲವಣಗಳ ದ್ರಾವಣ ವನ್ನು ಬೋಲ್ಲರ್ ಬಾಡಿಯೊಳಕ್ಕೆ ೩ ಗಂಟೆ ಗಳಷ್ಟು ಹೊತ್ತು ಹೋಗುವಂತೆ ಮಾಡಿ, ಜೊತೆಗೆ ನೋವಿಗೋಸ್ಕರ ಮಾರ್ಫಿನ್ ಇಂಜೆಕ್ಷನ್ನನ್ನು ಸಹಾ ಕೊಟ್ಟರು.

ನರ್ಸ್‌ಗಳು ಬೋಲ್ಲರ್ ಮುಖಕ್ಕೆ ಹಾಕಿದ್ದ ಆಮ್ಲಜನಕದ ಮುಖವಾಡವನ್ನು ತೆಗೆದು, ಅದಕ್ಕಿಂತಲೂ ಉತ್ತಮವಾದ ದ್ದನ್ನು ಅಳವಡಿಸಲು ಪ್ರಯತ್ನಿಸುತ್ತಿದ್ದಾಗ, ಮುಖವಾಡ ಮುಖಕ್ಕೆ ಅಂಟಿಕೊಂಡಿದ್ದುದು ಗೊತ್ತಾಯಿತು. ಆಗ, ಅದನ್ನು ಅವರು ಕತ್ತರಿಸಿ ತೆಗೆದು, ಪ್ಲಾಸ್ಟಿಕ್ ಫಿಲಂ ಅನ್ನು ಅವನ ಮುಖದ ಮೇಲಿರಿಸಿದರು.

ಬೆಳಿಗ್ಗೆ ೮–೯ರ ಹೊತ್ತಿಗೆ ಜೂಲಿಗೆ ಪ್ಲಾಂಟ್‌ನಿಂದ ದೂರವಾಣಿ ಕರೆಬಂದು, ಬೋಲ್ಲರ್ ಆಕ್ಸಿಡೆಂಟ್ ಬಗ್ಗೆ ವಿಚಾರ ತಿಳಿಯಿತು, ಮಕ್ಕಳನ್ನು ನೋಡಿಕೊಳ್ಳುವಂತೆ ತನ್ನ ಸ್ನೇಹಿತೆಯರಿಗೆ ಹೇಳಿ, ಆಸ್ಪತ್ರೆಗೆ ಓಡೋಡಿ ಬಂದಳು. ತುರ್ತು ಪರಿಸ್ಥಿತಿ ವಾರ್ಡ್‌ನ ಹೊರಗಡೆ ತನ್ನ ಗಂಡನ ಕೆಲಸದ ಬೂಡ್ಸುಗಳು ಕಪ್ಪು ಬಣ್ಣ ಮೆತ್ತಿಕೊಂಡಿರುವುದನ್ನು ನೋಡಿದಳು. "ಕೇವಲ ಅವನ ಕಾಲುಗಳು ಮಾತ್ರ ಸುಟ್ಟುಹೋಗಿವೆ, ಓ! ದೇವರೇ ಧನ್ಯವಾದಗಳು' ಎಂದಂದುಕೊಂಡು ಧೈರ್ಯ ತಂದುಕೊಂಡಳು.

ಡಾಕ್ಟರ್ ಬೆಂಕ್ ಬಾಗಿಲು ತಳ್ಳಿಕೊಂಡು ಬಂದು, ಸಪ್ಪೆ ಮುಖದಿಂದ, "ನಿನ್ನನ್ನು ಇನ್ಯಾವ ರೀತಿಯಲ್ಲಿ ಮನಸ್ಸಿಗೆ ಆಘಾತವಾಗದ ಹಾಗೆ, ತಯಾರು ಮಾಡಲು ಆಗುವುದಿಲ್ಲ" ಎಂದರು. ಅದನ್ನು ಕೇಳಿ ಅವಳ ಹೃದಯ ಕುಗ್ಗತೊಡಗಿತು. ಜೂಲಿ ತನ್ನ ಗಂಡನನ್ನು ನೋಡಿದ ಕೂಡಲೇ, ಅವಳಿಗೆ ಉಸಿರು ನಿಂತೇಹೋಯಿತು. ಗುರುತು ಸಿಕ್ಕಲಾರದಷ್ಟು ವಿಕಾರವಾಗಿದ್ದು, ಜೊತೆಗೆ ಅವನ ಮೈಮೇಲಿದ್ದ ಟಾರಿನಿಂದ ಪೆಟ್ರೋಲ್‌ನಂಥ ವಾಸನೆ ಬಡಿಯುತ್ತಿತ್ತು. ಅವಳ ಮುಖದ ಮೇಲೆ ಕಣ್ಣೀರು ಧಾರೆಯಾಗಿ ಹರಿಯುತ್ತಿತ್ತು. ಬೆಚ್ಚಗೆ ಅಂಟು ಅಂಟಾಗಿದ್ದ ಗಂಡನ ಕೈಯನ್ನು ಮೃದುವಾಗಿ ಒತ್ತಿ ಹಿಡಿದುಕೊಂಡಳು. "ನಾನು ಈ ಕುತ್ತಿನಿಂದ ಪಾರಾಗಲು ಪ್ರಯತ್ನಿಸುತ್ತೇನೆ" ಎಂದು ಅಸ್ಪಷ್ಟವಾಗಿ ನುಡಿದನು. "ಹಾಗೊಂದು ಪಕ್ಷ ಆಗದಿದ್ದಲ್ಲಿ, ನೀನು ಮತ್ತು ಮಕ್ಕಳು ಹ್ಯಾಗೆ ಬದುಕಬೇಕೂಅಂತ ನಿನಗೆ ತೋಚುತ್ತೋ ಹಾಗೇ ಮಾಡು. ಮನೆ ಮಾರಿ ಬಿಡು" ಎಂದೂ ಹೇಳಿದನು.

"ಇಲ್ಲದ್ದು ಮನಸ್ಸಿಗೆ ಹಚ್ಚಿಕೋ ಬೇಡ" ಎಂದು ಬಲವಂತ ನಗು ಬರಿಸಿಕೊಂಡು ಹೇಳಿದಳು. "ಆದಷ್ಟೂ ಬೇಗ ವಾಸಿ ಮಾಡಿಕೊಳ್ಳಲು ಪ್ರಯತ್ನಿಸು" ಎಂದಳು.

ಸುಮಾರು ರಾತ್ರಿ ೧೧–೧೨ ಗಂಟೆಯ ಹೊತ್ತಿಗೆ ಬೋಲ್ಲರ್‌ಗೆ ಜ್ಞಾನ ತಪ್ಪಿಸುವ ಅರಿವಳಿಕೆಯನ್ನು ಕೊಟ್ಟು ಹೆಲಿಕಾಪ್ಟರ್‌ನಲ್ಲಿ ಮಲಗಿಸಿ ಸಿಡ್ನಿಯಲ್ಲಿರುವ ಆಸ್ಪತ್ರೆಗೆ ಸಾಗಿಸಿ ಟಾರ್ ಅಂಟಿನಿಂದ ಅವನನ್ನು ಬಿಡಿಸಿಕೊಳ್ಳಲು ಪ್ಯಾರಾಫಿನ್‌ನನ್ನು ಹನಿಸುತ್ತಿದ್ದರು. ಇದರಿಂದ ಟಾರು ನಿಧಾನವಾಗಿ ಸುಲಿಯುತ್ತಾ ಬರತೊಡಗಿತು. ಅವನ ಒಳಭಾಗವೆಲ್ಲಾ ಪೂರ್ತಿ ಸುಟ್ಟುಹೋಗಿತ್ತು. ಅತಿಯಾದ ಮತ್ತಿನೌಷದಿಂದ ಬೋಲ್ಲರ್‌ನ ಶರೀರವೆಲ್ಲಾ ಊದತೊಡಗಿತ್ತು. ಅವನ ತಲೆ ಒಂದು ಕಾಲ್ಚೆಂಡ್‌ನಷ್ಟು ಹಿಗ್ಗಿಬಿಟ್ಟಿತ್ತು.

ಅವನು ಆಸ್ಪತ್ರೆಗೆ ಸೇರಿದ ವಾರನೇ ದಿನ ಆಸ್ಪತ್ರೆಯ ವಿಶೇಷ ಮುಖ್ಯಾಧಿಕಾರಿಗಳಾದ ರೇ. ರೇಪಲ್ ಅವರು ಜೂಲಿಯನ್ನು ಕರೆದು "ಇದಕ್ಕೆ ಮುಂಚೆ ನಾನೆಲ್ಲೂ ಇಂಥ ಸುಟ್ಟ ಗಾಯದ ರೋಗಿಯನ್ನು ನೋಡಿದ್ದೇ ಇಲ್ಲ, ಬದುಕುಳಿಯುವ ಸಾಧ್ಯತೆ ಬಹಳ ಕಡಿಮೆ" ಎಂದೂ ಹೇಳಿಬಿಟ್ಟರು.

ಜೂಲಿ ಲಿಫ್ಟ್‌ನಲ್ಲಿ ಕೆಳಗಿಳಿದು ಆಸ್ಪತ್ರೆಯಲ್ಲಿದ್ದ ಚರ್ಚ್‌ನ ಆರಾಧನಾ ಗೃಹಕ್ಕೆ ಹೋಗಿ ಎರಡು ಗಂಟೆಗಳಷ್ಟು ಹೊತ್ತು ಮೌನವಾಗಿ ಕುಳಿತುಬಿಟ್ಟಳು. "ಒಂದು ಪಕ್ಷ ಮಾರ್ಕ್ ಬದುಕುಳಿದುಕೊಂಡುಬಿಟ್ಟರೆ, ತಿಂಗಳಾನುಗಟ್ಟಲೆ ನೋವು, ಕೀವಿನಿಂದ ನರಳಾಡುತ್ತಾ, ತನಗಾದ ಆಘಾತದ ಬಗ್ಗೆ ಯೋಚಿಸುತ್ತಾ ಇರುವುದರಿಂದ ಅವನು

ಮನೋರೋಗಿಯಾದರೂ ಆಗಬಹುದು" ಎಂದು ನರ್ಸ್‌ಗಳು ಜೂಲಿಗೆ ಹೇಳಿ ಹೆದರಿಸಿ ಬಿಟ್ಟಿದ್ದರು. "ತನಗಾಗಿ ಮತ್ತು ತನ್ನ ಮಕ್ಕಳಿಗಾಗಿ ಮಾರ್ಕ್ ಬದುಕುಳಿಯಲಿ ಎಂದು ಕೊಳ್ಳುವುದು ಸ್ವಾರ್ಥ ಆಗಿಬಿಡುತ್ತೆ. ದೇವರೆ! ಮಾರ್ಕನ್ನು ಬದುಕಿಸಿಕೊಡು" ಎಂದು ಬೇಡಿಕೊಂಡಳು.

ಸುಮಾರು ನಾಲ್ಕು ವಾರಗಳವರೆಗೆ ಚರ್ಮದ ಕಸಿ ಮಾಡುವ ಏಳು ಶಸ್ತ್ರಚಿಕಿತ್ಸೆ ನಡೆಯಿತು. ಎಲ್ಲಾ ಶಸ್ತ್ರಚಿಕಿತ್ಸೆಗಳೂ ನಡೆದಾಗ, ಅವನು ಜೀವನ್ಮರಣದ ಮಧ್ಯೆ ಜೋಕಾಲಿಯಾಡುತ್ತಿದ್ದನು.

ಪ್ರತಿ ಶಸ್ತ್ರಚಿಕಿತ್ಸೆ ನಡೆಯುತ್ತಿದ್ದಾಗಲೆಲ್ಲಾ ಅವನ ತೊಡೆಯ ಚರ್ಮದಿಂದ ೧ ಮಿಲಿ ಮೀಟರ್ ದಪ್ಪದ ಚರ್ಮದ ೬೦೦ ನೂರನೇ ಒಂದು ಭಾಗದಷ್ಟು ಚರ್ಮವನ್ನು ಪದರ ಪದರವಾಗಿ ಕತ್ತರಿಸಿಕೊಳ್ಳುತ್ತಿದ್ದರು. ಅವನ ದೇಹದಲ್ಲಿ ಅದೊಂದೇ ಭಾಗ ಸುಟ್ಟು ಹೋಗದೆ ಉಳಿದಿತ್ತು. ಆ ಕತ್ತರಿಸಿ ತೆಗೆದ ಚರ್ಮದ ಚೂರನ್ನು ಒಂದು ಮಿಷಿನ್‌ನಿಂದ ಒಂಭತ್ತು ಪಟ್ಟು ಅಗಲವಾಗುವಂತೆ ಎಳೆದು ಹದ ಮಾಡಿಕೊಳ್ಳುತ್ತಿದ್ದರು. ಹೀಗೆ ತೊಡೆಯಿಂದ ಚರ್ಮವನ್ನು ಮತ್ತೆ ಮತ್ತೆ ತೆಗೆದುಕೊಳ್ಳಲು, ಡಾಕ್ಟರ್‌ಗಳು ಸ್ವಲ್ಪ ಸಮಯ ಕಾಯಬೇಕಾಗುತ್ತಿತ್ತು. ಏಕೆಂದರೆ ಈ ಹಿಂದೆ ತೆಗೆದುಕೊಂಡ ಚರ್ಮ ಮತ್ತೆ ಸ್ವಲ್ಪ ಮೊದಲಿನಂತಾಗಲು ಸಮಯ ಬೇಕಾಗುತ್ತಿತ್ತು. ಅವನಿಗೆ ಎರಡು ಕಿವಿಯ ಹಾಲೆಗಳನ್ನು ಶಸ್ತ್ರಚಿಕಿತ್ಸೆಯಿಂದ ಮತ್ತೆ ಸೃಷ್ಟಿಸಬೇಕಾಯಿತು. ನಂತರ ಅವನ ಸ್ನಾಯುಗಳಿಗೆ ಬಲ ಬರಲು (ಶಕ್ತಿ ಬರಲು) ಫಿಸಿಯೋಥೆರಾಪಿ ಮಾಡಲಾಯಿತು. ಅವನ ದೇಹದ ಒಳಗಿನ ಭಾಗಗಳಲ್ಲಿ ಆಗಾಗ್ಗೆ ಏರು ಪೇರು ಆಗುತ್ತಲೇ ಇದ್ದರೂ ಸಹ, ಅವನು ಅದನ್ನೆಲ್ಲಾ ಗೆದ್ದು ಬಂದನು. ನಿಧಾನವಾಗಿ ಅವನು ತನ್ನ ಶಕ್ತಿಯನ್ನು ಕೂಡಿಸಿಕೊಂಡನು. ಕೊನೆಗೆ ಐದೂವರೆ ತಿಂಗಳು ಆಸ್ಪತ್ರೆ ವಾಸ ಮಾಡಿ, ಪೂರ್ತಿ ಎಲ್ಲಾ ಗುಣ ಹೊಂದಿದ ಮೇಲೆ ಅಲ್ಲಿಂದ ಹೊರ ಬಂದನು.

ಬೋಲ್ಲರ್ ಮುಖ ಮತ್ತು ಕತ್ತಿನ ಮೇಲೆ ಮಾಡಿದ ಕಸಿ ಶಸ್ತ್ರಚಿಕಿತ್ಸೆಯನ್ನು ಉತ್ತಮವಾಗಿ ಮಾಡಿದ್ದರಿಂದ ಎಲ್ಲೂ ಕಲೆ, ಗಂಟು ಇಲ್ಲದೆ ಸುಂದರವಾಗಿ ಕಾಣುತ್ತಿತ್ತು. ಅವನೀಗ ತನ್ನ ಮನೆಯಲ್ಲಿ ಸ್ವಲ್ಪ ಕುಂಟುತ್ತಾ ನಡೆಯುತ್ತಾನೆ. ಜೊತೆಗೆ ಅವನಿಗೆ ಈಗ ತಲೆಕೂದಲೂ ಸಹ ಮತ್ತೆ ಚೆನ್ನಾಗಿ ಬೆಳೆದಿದೆ. ಈ ಅಪಘಾತಕ್ಕೆ ಕಾರಣವೇನೆಂದು ಕಂಡುಹಿಡಿಯಲು ಒಂದು ತನಿಖಾ ಮಂಡಲಿಯನ್ನೂ ಏರ್ಪಡಿಸಿದೆ.

ಜೂಲಿ ನಗು ನಗುತ್ತಾ ತನ್ನ ಗಂಡನು ಬದುಕುಳಿದಿರುವುದು ಒಂದು ಅದ್ಭುತವೇ ಸರಿ" ಎನ್ನುತ್ತಾಳೆ. "ಅವನು ಜೀವಸಹಿತದಿಂದ ಇಷ್ಟರಮಟ್ಟಿಗೆ ಆರೋಗ್ಯದಿಂದಿರುವುದು ನಮ್ಮಗಳ ಅದೃಷ್ಟ" ಎಂದೂ ಭಾವಿಸಿದ್ದಾಳೆ.

ಪುಸ್ತಕ ಪರಿಚಯ

ಹೇಳು ಹೇಳು ನಾನು ಯಾರು ? (ಮಕ್ಕಳ ಒಗಟಿನ ಸಂಕಲನ), ಲೇಖಕರು: ಜೀನಹಳ್ಳಿ ಸಿದ್ಧಲಿಂಗಪ್ಪ, ಪ್ರಕಾಶಕರು : ಶ್ರುತಿ ಪ್ರಕಾಶನ, ಜೀನಹಳ್ಳಿ ಅಂಚೆ, ನ್ಯಾಮತಿ ಮಾರ್ಗ, ಶಿವಮೊಗ್ಗ ಜಿಲ್ಲೆ-೫೭೭೨೨೩; ಪ್ರಥಮ ಮುದ್ರಣ : ೧೯೯೮, ಪುಟಗಳು : ೭೨, ಬೆಲೆ ೨೫-೦೦ ರೂ.

ಲೇಖಕ ಜೀನಹಳ್ಳಿ ಸಿದ್ಧಲಿಂಗಪ್ಪ ಅವರು, ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಅನುಕೂಲವಾಗಬಹುದಾದ ಸರಳವಾದ ಪದ್ಯ ರೂಪದ ಒಗಟುಗಳನ್ನು ಪುಸ್ತಕದ ರೂಪದಲ್ಲಿ ಮಕ್ಕಳ ಮುಂದಿಟ್ಟಿರುವುದು ಮೆಚ್ಚಿಕೆಯ ಕೆಲಸ. ಈ ಪುಸ್ತಕವನ್ನು ಕೊಂಡ ಪೋಷಕರು, ತಮ್ಮ ಮಕ್ಕಳೊಂದಿಗೆ ಬೆರೆತು, ಈ ಒಗಟುಗಳನ್ನು ಅವರ ಮೇಲೆ ಪ್ರಯೋಗಿಸಿ ವಿನೋದದ ಸಿಹಿಯನ್ನು ಹಂಚಿಕೊಳ್ಳಬಹುದು. ಆ ಸಂತೋಷದಲ್ಲಿಯೇ, ಮಕ್ಕಳಲ್ಲಿರುವ ಸುಪ್ತ ಚಿಂತನೆಯ ಮನಸ್ಸು ಜಾಗೃತವಾಗಿ ಬೌದ್ಧಿಕ ಮಟ್ಟ ಅರಳಲು ಕಾರಣವಾಗುತ್ತದೆ.

ಲೇಖಕರು, ತಾವು ದಿನನಿತ್ಯ ಗಮನಿಸುವ ನಮ್ಮ ಸುತ್ತ-ಮುತ್ತಲಿನ ವಸ್ತುಗಳನ್ನೇ ಆರಿಸಿಕೊಂಡು ಒಗಟುಗಳನ್ನು ರಚಿಸಿರುವುದು ಹೆಚ್ಚು ಆಕರ್ಷಕ. ಪಶು, ಪಕ್ಷಿ, ಪ್ರಾಣಿ, ಸೂರ್ಯ, ಚಂದ್ರ, ಆಕಾಶ, ಮರ, ಗಿಡಗಳು.....ಇತ್ಯಾದಿ ವಸ್ತುಗಳನ್ನು ಮಕ್ಕಳು ಹತ್ತಿರದಿಂದ ಗಮನಿಸಿರುತ್ತಾರೆ. ಅವುಗಳ ಸ್ವರೂಪಗಳನ್ನು ಅರಿತಿರುತ್ತಾರೆ. ಆದ್ದರಿಂದ ಅವುಗಳನ್ನೇ ಒಗಟುಗಳಲ್ಲಿ ಸೆರೆ ಹಿಡಿದಾಗ ಮಕ್ಕಳ ಬೌದ್ಧಿಕ ಚಿಂತನೆಯ ಪ್ರಾಥಮಿಕ ಹಂತ ಇಲ್ಲಿಂದಲೇ ಪ್ರಾರಂಭವಾಗುತ್ತದೆ.

ರಾತ್ರಿ ಊಟವಾದೊಡನೆ, ಬೆಳ್ದಿಂಗಳ ತುಂಬು ಬೆಳಕಿನ ಹಟ್ಟಿಯ ಮುಂದೆ ಚಾಪೆಯನ್ನು ಹಾಸಿ ಮೇಲ್ಮೊಗವಾಗಿ ಮಲಗಿ, ಆಕಾಶದಲ್ಲಿ ಮಿನುಗುತ್ತಿದ್ದ ಸಹಸ್ರಾರು ನಕ್ಷತ್ರಗಳನ್ನು ಎಣಿಸಲು ಹೋಗಿ ಸುಸ್ತಾಗಿ, ಕೊನೆಗೆ ಹುಣ್ಣಿಮೆಯ ಚಂದ್ರನಲ್ಲಿಯ ಜಿಂಕೆಯ ಆಕಾರವನ್ನು ಮನಸ್ಸಿನಲ್ಲಿಯೇ ಊಹಿಸುತ್ತಾ, ವಿಶ್ವ-ವಿಶಾಲವಾದ ಆಕಾಶದ ಭವ್ಯತೆಗೆ ಬೆರಗಾಗುತ್ತೇವೆ. ಒಗಟುಗಳು ತಾವೇ ತಾವಾಗಿ ಬಿಚ್ಚಿಕೊಳ್ಳುತ್ತವೆ. ಆಗ ಪಕ್ಕದಲ್ಲಿಯೇ ಇದ್ದ ಅಕ್ಕ-ತಂಗಿಯರ, ತಮ್ಮಂದಿರ ಅಥವಾ ಗೆಳೆಯರ ಬುದ್ಧಿವಂತಿಕೆಯನ್ನು ಪರೀಕ್ಷಿಸುವ ಚಪಲವುಂಟಾಗು

ತ್ತದೆ. ಅಪ್ಪನ ದುಡ್ಡನ್ನು ಎಣಿಸಲಾರೆ ಅವ್ವನ ಸೀರೆಯ ಮಡಿಚಲಾರೆ ಈ ಒಗಟನ್ನು ಬಿಡಿಸಿ ಹೇಳು ಇಲ್ಲದಿದ್ದರೆ ಬಡಿಗೆ ಏಟು ಎಂಬ ಚಿಕ್ಕಂದಿನ ಸಾರ್ವತ್ರಿಕ ಅನುಭವ ಲೇಖಕರನ್ನು ಬಿಟ್ಟಿಲ್ಲ.

"....ಪ್ರಾಣಿ, ಪಕ್ಷಿ, ಮರ, ಗಿಡ, ಸೂರ್ಯ, ಚಂದ್ರ, ನಕ್ಷತ್ರ, ಆಕಾಶ, ಗಾಳಿ, ನೀರು, ಮೋಡ, ಹಣ್ಣು, ಕಾಯಿ, ವ್ಯಕ್ತಿ, ದೇವರು, ಕವಿ, ರಾಜ, ಶರಣರು, ದಾಸರು, ಪತ್ರಿಕೆ ಮತ್ತು ಇತರ ವಸ್ತುಗಳು ಇಲ್ಲಿನ ಹಾಡುಗಳಿಗೆ ಆಧಾರ. ಪ್ರಶ್ನೋತ್ತರಗಳ ಕುತೂಹಲದಲ್ಲಿ ಮಕ್ಕಳ ಮನಸ್ಸನ್ನು ಚಕಿತಗೊಳಿಸಲು ಯತ್ನಿಸಿದೆ. ಈ ಒಂದು ಪ್ರಯತ್ನವೇ 'ಮಕ್ಕಳ ಸಾಹಿತ್ಯ'ದ ಹೊಸ ಆಯಾಮಕ್ಕೆ ನಾಂದಿ ಹಾಡಬಹುದೆಂದು ಭಾವಿಸುವೆ"-ಎಂಬ ಲೇಖಕರ ಪ್ರಾಮಾಣಿಕ ಪ್ರಯತ್ನವನ್ನು ಕಾಣಬಹುದು.

ಜೀನಹಳ್ಳಿ ಸಿದ್ಧಲಿಂಗಪ್ಪ ಅವರು, ತಮ್ಮ ಕೃತಿಯನ್ನು ಪ್ರಧಾನವಾಗಿ ಎರಡು ಭಾಗಗಳಲ್ಲಿ ಕಂಡಿದ್ದಾರೆ.

೧) ಕೇಳು ಕೇಳು ನನ್ನ ಒಗಟು.

೨) ಕೇಳು ಕೇಳು ನನ್ನ ಉತ್ತರ.

ಮೊದಲನೆಯ ಭಾಗದಲ್ಲಿರುವ ಒಂದು ನೂರು ಒಗಟುಗಳು, ವಸ್ತು ಮತ್ತು ಸ್ವರೂಪದಲ್ಲಿ ವೈವಿಧ್ಯಮಯವಾಗಿದ್ದು, ೫೫ ಪುಟಗಳಲ್ಲಿ ಹರಡಿಕೊಂಡಿವೆ. ಒಗಟಿನ ಪದ್ಯದ ಸಾಲುಗಳು, ಕೆಲವೊಮ್ಮೆ ಅತಿಯಾಯಿತೆಂಬ ಭಾವನೆ ಬರದಿರದು. ಆರು ಸಾಲುಗಳ ಕನಿಷ್ಠ ಪದ್ಯಗಳಿದ್ದರೆ ೨೭ ಸಾಲುಗಳ ಗರಿಷ್ಠ ಪದ್ಯಗಳನ್ನೂ ಕಾಣಬಹುದು. ದೀರ್ಘ ಪದ್ಯಗಳಲ್ಲಿ ಸಿಲುಕಿದ ಮಕ್ಕಳ ಉತ್ಸಾಹ ಗರಿಗೆದರಲು ಸಾಧ್ಯವಾಗುವುದಿಲ್ಲ. ಒಗಟುಗಳು ಚಿಕ್ಕದಾಗಿ ಸ್ಫುಟವಾಗಿದ್ದಷ್ಟೂ ಮಕ್ಕಳಿಗೆ ಹೆಚ್ಚು ಗ್ರಾಹ್ಯವಾಗುತ್ತದೆ.

'ಕೇಳು ಕೇಳು ನನ್ನ ಉತ್ತರ' ಭಾಗದಲ್ಲಿ ಅನುಕ್ರಮವಾಗಿ ಒಗಟುಗಳಿಗೆ ಉತ್ತರಿಸಲಾಗಿದೆ. ಈ ಉತ್ತರಗಳು ೬೭ ನೇ ಪುಟದಿಂದ ಪ್ರಾರಂಭವಾಗಿ ೭೧ ನೇ ಪುಟದಲ್ಲಿ ಕೊನೆಗೊಳ್ಳುತ್ತವೆ. ಕೊನೆಯ ಪುಟವೊಂದರಲ್ಲಿ ಲೇಖಕರ ಇತರ ಕೃತಿಗಳ ಪಟ್ಟಿಯೊಂದನ್ನು ಕೊಡಲಾಗಿದೆ.

ಉತ್ಸಾಹದಬರವಣಿಗೆಯಲ್ಲಿ ಕೆಲವೊಂದು ತಪ್ಪುಗಳು ನುಸುಳುವುದು ಸಹಜ. ಈ ಒಗಟುಗಳನ್ನು ಓದುತ್ತಾ ಹೋದಂತೆ ಓದುಗರಿಗೆ ಅದರ ಅರಿವಾಗುತ್ತದೆ.

ಪ್ರಾರಂಭದ ೨ ನೇ ಒಗಟೊಂದನ್ನು ನೋಡಬಹುದು.

ಮಿರ ಮಿರನೆ ಮಿನುಗಬಲ್ಲೆ
ಫಳಫಳನೆ ಹೊಳೆಯಬಲ್ಲೆ
ರಾತ್ರಿಯಲ್ಲ ಬೆಳಗಬಲ್ಲೆ
ಎಣ್ಣೆ ಬತ್ತಿ ಇಲ್ಲವಲ್ಲೆ
ಬೆಂಕಿ ಹಚ್ಚಿ ಉರಿಸಲಿಲ್ಲೆ
ನನ್ನ ಎಣಿಸಲಾಗಲಿಲ್ಲೆ
ಹೇಳು ಹೇಳು ನಾನು ಯಾರು ?

ಈ ಮೇಲಿನ ಒಗಟಿನ ೩ ನೇ ಸಾಲಿನ ಮೊದಲಿನ ಪದದ ಅರ್ಥ, ರಾತ್ರಿ+ಎಲ್ಲಾ= ರಾತ್ರಿಯೆಲ್ಲಾ ಎಂದು ಇರಬೇಕಾದುದು ಸಹಜ. ಆದರೆ, ರಾತ್ರಿ+ಅಲ್ಲ ಎಂಬ ಅರ್ಥ ಬರುವಂತಿದ್ದು ಗೊಂದಲಕ್ಕೀಡಾಗಿದೆ. ಇಲ್ಲಿ ಕಾಗುಣಿತದ ದೋಷವೂ ಇದ್ದಿರಬಹುದು. ಹಾಗೆಯೇ ೫ ಮತ್ತು ೬ ನೇ ಸಾಲುಗಳ ಅಂತ್ಯ ಪದಗಳನ್ನು ಪ್ರಾಸಕ್ಕಾಗಿ ಬಳಸಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಆ ಸಾಲುಗಳ ಅಂತ್ಯ ಪದಗಳಾದ 'ಉರಿಸಲಿಲ್ಲೆ' ಮತ್ತು 'ಎಣಿಸಲಾಗಲಿಲ್ಲೆ' ಎಂಬುದಕ್ಕೆ ಬದಲಾಗಿ 'ಬೆಂಕಿ ಹಚ್ಚಿ ಉರಿಸಲಿಲ್ಲ', ನನ್ನ ಎಣಿಸಲಾಗಲಿಲ್ಲ' ಎಂಬಲ್ಲಿ ಖಚಿತತೆ ಬರುತ್ತದೆ. ಅಂತ್ಯ ಪ್ರಾಸವಿಲ್ಲದಿದ್ದರೂ, ಒಗಟಿನ ಸೊಗಸು ಹೆಚ್ಚುತ್ತದೆ.

ಔಚಿತ್ಯರಹಿತ ವಾಕ್ಯಗಳು ಮತ್ತು ಪದಗಳು ಅಲ್ಲಲ್ಲಿ ಬಳಕೆಯಾಗಿರುವುದುಂಟು. ಅಂತಹವುಗಳನ್ನು ತೆಗೆದು ಹಾಕಿದರೂ, ಒಗಟಿನ ಒಟ್ಟಂದಕ್ಕೆ ಧಕ್ಕೆಯಾಗದು. ೫ ನೇ ಒಗಟು ಚಂದ್ರನಿಗೆ ಸಂಬಂಧಿಸಿದ್ದು, ೮ ಸಾಲುಗಳನ್ನು ಒಳಗೊಂಡಿದೆ.೩ನೇ ಸಾಲಿನ 'ಕೊಬ್ಬರಿ ಗಿಟುಕಿನಂತಿರುವೆ' ಎಂಬ ವಾಕ್ಯ ಇಲ್ಲಿ ಅನವಶ್ಯಕ ಸೇರ್ಪಡೆಯಾಗಿದೆ. ೫೯ ನೇ ಒಗಟು, ೬ ಸಾಲುಗಳಲ್ಲಿದ್ದು, ಅದು ಕಪ್ಪೆಯನ್ನು ಪ್ರತಿನಿಧಿಸುತ್ತದೆ. ಅದರ ೩ ನೇ ಸಾಲು 'ಘರ್ಜಿಸಲು ನಾ ಹುಲಿಯಲ್ಲ' ಇದು ವಾಕ್ಯೌಚಿತ್ಯರಹಿತಕ್ಕೆ. ಉದಾಹರಣೆನಾಗಿ ದ್ವಿಪದಿಗತಿಯ, ೧೧ ಸಾಲುಗಳ ೬೦ ನೇ ಒಗಟನ್ನು ಗಮನಿಸಿ.

ನನಗೆ ಎರಡು ಚಕ್ರವುಂಟು
ಅದು ಮೋಟಾರಲ್ಲ
ನನ್ನ ಮುಂದೆ ದೀಪವುಂಟು
ಅದು ಶಿವಾಲಯವಲ್ಲ
ನನ್ನ ಬಳಿಕೆ ಗಂಟೆಯುಂಟು
ಅದು ದೇವಾಲಯವಲ್ಲ
ನನ್ನ ಮೇಲೆ ಸವಾರಿಯುಂಟು
ಅದು ಕುದುರೆಯಲ್ಲ
ನನ್ನ ಮೇಲೆ ಏರಿಕುಳಿತರೆ
ಅದು ಚಲಿಸುವುದು
ಹೇಳು ಹೇಳು—ನಾನು ಯಾರು?

ಇಲ್ಲಿ, ಮೊದಲನೆಯ ಪ್ರತಿಯೊಂದು ಸಾಲಿನಲ್ಲಿಯೂ 'ನಾನು' ಎಂಬರ್ಥ ಬರುತ್ತದೆ. ಎರಡನೆಯ ಸಾಲಿಗೆ ಬರುವಷ್ಟರಲ್ಲಿ 'ಅದು' ಎಂಬ ಅನ್ಯ ಪದಾರ್ಥವನ್ನು ಸೂಚಿಸುತ್ತದೆ. 'ಅದು' ಎಂಬುದಕ್ಕೆ ಬದಲಾಗಿ 'ನಾನು' ಎಂದು ಇಟ್ಟುಕೊಂಡಿದ್ದರೂ ಅಥವಾ ಆ ಪದವನ್ನೇ ಬಿಟ್ಟಿದ್ದರೂ ಒಗಟಿನ ಸೌಂದರ್ಯಕ್ಕೇನೂ ಕೊರತೆಯಾಗುತ್ತಿರಲಿಲ್ಲ. ಬದಲಾಗಿ ಇನ್ನಷ್ಟು ರಂಜಿಸುತ್ತಿತ್ತು.

ಇದೇ ರೀತಿ, ೧೯ ನೇ ಒಗಟಿನ ೫, ೬ರ ಸಾಲುಗಳಲ್ಲಿ

"ಕುಡಿಯಲು ಹಾಲನು ಕೊಡಬಲ್ಲೆ
ದೊಡ್ಡಿಯಲ್ಲಿ ಜೀವಿಸಬಲ್ಲೆ"

'ಹಾಲನ್ನು ಕೊಡುವೆ', 'ಜೀವಿಸುವೆ' ಎಂದಿದ್ದರೆ ಸೊಗಸು. ಈ ಬದಲಾವಣೆಯಲ್ಲಿ ಕಾಣಿಸುವ ಸಹಜತೆಯನ್ನು ಮೇಲಿನ ಪದಗಳಲ್ಲಿ ಕಾಣಲಾಗದು. ಬದಲಾಗಿ ಇಷ್ಟಾನುವರ್ತನೆಯನ್ನು ಕಾಣುತ್ತೇವೆ. ಹಾಗೆಯೇ ೨೧ನೇ ಒಗಟಿನ ಮೂರನೆ ಸಾಲಿನ "ನೆಟ್ಟನೆಟ್ಟಗೆ ನೋಡಲಾರಿರಿ" ಎಂಬುದಕ್ಕೆ ಬದಲಾಗಿ ನೇರವಾಗಿ ನೋಡಲಾರಿರಿ ಎಂಬುದನ್ನು ಬಳಸುವುದು ಸೂಕ್ತ

ವಾದೀತು. ಇದು ಸೂರ್ಯನಿಗೆ ಸಂಬಂಧಿಸಿದ ಒಗಟು.

ಪುಸ್ತಕದ ಕೊನೆಯಲ್ಲಿ ಬರುವ ಬಹು ದೀರ್ಘ ಸಾಲುಗಳನ್ನು ಒಳಗೊಂಡ ಒಗಟುಗಳನ್ನು ಗಮನಿಸಬಹುದು. ೮೦, ೮೬, ೮೭, ೮೮, ೮೯, ೯೦, ೯೧, ೯೨; ೯೬, ೯೭, ೯೮ ಈ ಒಗಟುಗಳಲ್ಲಿ ಕವಿ, ಕಾವ್ಯ, ಪತ್ರಿಕೆಗಳಿಗೆ ಸಂಬಂಧಿಸಿದ ವಿಷಯಗಳು ಅಡಕವಾಗಿವೆ. ಮಕ್ಕಳಿಗೆ ಇಂಥ ವಿಷಯ ಪರಿಚಯ ಅವಶ್ಯಕವಾದರೂ ಅವುಗಳ ದೀರ್ಘತೆ ಅನವಶ್ಯಕ. ಪ್ರಾತಿನಿಧಿಕವಾಗಿ, ಕೆಲವೇ ಅಗತ್ಯ ಅಂಶಗಳನ್ನಾಧರಿಸಿದ ಒಗಟುಗಳಿದ್ದಿದ್ದರೆ ಚೆನ್ನಾಗಿರುತ್ತಿತ್ತು.

ಒಟ್ಟಾರೆ ಹೇಳುವುದಾದರೆ, ಲೇಖಕರ, ಪ್ರಯತ್ನ ಸ್ವಾಗತಾರ್ಹ. ಅಲ್ಲಲ್ಲಿ ಕೆಲವು ಉತ್ತಮವಾದ ಒಗಟುಗಳನ್ನು ಕೊಟ್ಟಿದ್ದಾರೆ. ಪುಸ್ತಕದ ಹೊರವೈ ಪುಟಗಳು ಆಕರ್ಷಕವಾಗಿ ಕೃತಿಯೊಳಗಿನ ತಿರುಳನ್ನು ಎತ್ತಿತೋರಿಸುತ್ತವೆ. ಬಳಸಿರುವ ಅಕ್ಷರಗಳೂ ಮಕ್ಕಳಿಗೆ ಉಚಿತವಾದ ಗಾತ್ರದಲ್ಲಿವೆ.

ರಂಗಧಾಮಯ್ಯ
ಬಿ-೯೪, ಸಿಎಫ್‌ಟಿಆರ್‌ಐ ಕಾಲೋನಿ
ಮೈಸೂರು—೫೭೦ ೦೧೩

ಓದುಗರ ಅನಿಸಿಕೆ

ಮಾನ್ಯರೆ,

೯೮ರ ಅಕ್ಟೋಬರ್ 'ಪುಸ್ತಕ ಪ್ರಪಂಚ'ದಲ್ಲಿನ ಡಾ|| ದೇಜಗೌ ಅವರ ದಿಟ್ಟ ಹಾಗೂ ಮೊನಚಾದ ಲೇಖನಗಳು ದೇಶದ ಕರಾಳ ಸ್ಥಿತಿಗತಿ ಕುರಿತ ನೈಜಚಿತ್ರ ನೀಡುತ್ತವೆ. ಮತ್ತೆಮತ್ತೆ ಓದಬೇಕೆನಿಸುತ್ತವೆ.

"ಬೌದ್ಧ ಧರ್ಮವನ್ನು ಗಡೀಪಾರು ಮಾಡಿದಂತೆ, ನಮಗೆ ಸ್ವಾತಂತ್ರ್ಯವನ್ನು ತಂದುಕೊಟ್ಟ ಹುತಾತ್ಮ ಗಾಂಧಿ ಸಿದ್ಧಾಂತವನ್ನೂ ಸಹ ದೇಶದಿಂದಾಚೆಗೆ ದಾಟಿಸುವ ಸನ್ನಾಹ ಸಂಘಟನೆಗೊಳ್ಳುತ್ತಿದೆ." ಎಂಬುದಂತೂ ಸುಸಂಸ್ಕೃತ ಭಾರತೀಯರಾದ ನಾವು ತಲೆತಗ್ಗಿಸುವ ವಿಚಾರ.

ಸರ್ದಾರ್ ವಲ್ಲಭಬಾಯಿ ಪಟೇಲರು ಐನೂರೈವತ್ತಾರು ಸಂಸ್ಥಾನಗಳಲ್ಲಿ ಬಹುಪಾಲು ವಿಲೀನದ ಕರಾರಿಗೆ ಒಪ್ಪಿಸಿದ ಅವರನ್ನು 'ಬಿಸ್ಮಾರ್ಕ್'ನೆಂದು, 'ಉಕ್ಕಿನ ಮನುಷ್ಯ'ನೆಂದು ಕರೆಸಿಕೊಂಡದ್ದು, ಆಗ ಪ್ರಧಾನಿ ನೆಹರೂ ಅವರು ಪಟೇಲರಿಗೆ ಮುಕ್ತ ಹಸ್ತ ನೀಡಿದ್ದರೆ ಕಾಶ್ಮೀರದ ಸಮಸ್ಯೆಯು ಉಳಿಯುತ್ತಿರಲಿಲ್ಲ" ಎಂಬ ಆಗಿನ ಸೇನಾನಿ (ಜನರಲ್ ಕಾರಿಯಪ್ಪ ಇರಬೇಕು) ದೇಜಗೌ ಅವರೊಂದಿಗೆ ಹೇಳಿದ್ದು ನಿಜವೆನಿಸುತ್ತದೆ.

ಇಂಥ ಅಪರೂಪದ ವಿಚಾರಗಳನ್ನು ಜನಸಾಮಾನ್ಯರಿಗೆ ಮುಟ್ಟಿಸಲು ಮುಂದಾದ 'ಪುಸ್ತಕ ಪ್ರಪಂಚ'ಕ್ಕೂ [ಡಾ|| ದೇಜಗೌ ಅವರಿಗೂ ಧನ್ಯವಾದಗಳು.

೧೭೩, ರಮಾವಿಲಾಸ ರಸ್ತೆ
ಮೈಸೂರು ೫೭೦ ೦೨೪

ಪಿ. ಆರ್. ತಿಪ್ಪೇಸ್ವಾಮಿ
ಮಾಜಿ ಅಧ್ಯಕ್ಷರು, ಲಲಿತಕಲಾ ಅಕಾಡೆಮಿ

ಮಾನ್ಯರೆ,

ಪುಸ್ತಕಪ್ರಪಂಚದ ಅಕ್ಟೋಬರ್ ಸಂಚಿಕೆಯಲ್ಲಿ ನನ್ನ 'ಹೊನ್ನ ಬಣ್ಣದ ತೊನ್ನು' ಕೃತಿಯ ಬಗ್ಗೆ ಶ್ರೀಪಾದಭಟ್ಟರು ಬರೆದ ಸಮೀಕ್ಷೆ ಓದಿದೆ. ನನ್ನ ಆಶಯವನ್ನು ಮೆಚ್ಚಿದ ಅವರಿಗೂ, ಈ ವೊಂದು ಸಂದರ್ಭ ಒದಗಿಸಿ, ಪುಸ್ತಕ ಪ್ರಪಂಚದಲ್ಲಿ ವಿಮರ್ಶೆ ಪ್ರಕಟಿಸಿದ ನಿಮಗು ಕೃತಜ್ಞನಾಗಿದ್ದೇನೆ.

ದೇವುಹನೆಹಳ್ಳಿ
ಕಾರ್ಯಕ್ರಮಾಧಿಕಾರಿ

ಆಕಾಶವಾಣಿ
ಮಂಗಳೂರು ೫೭೦ ೦೦೪

ಮಾನ್ಯರೆ,

ಪಿ. ಆರ್. ತಿಪ್ಪೇಸ್ವಾಮಿಯವರು ಬರೆದಿರುವ ಗಾಂಧೀಜಿ ಖಾದಿಗೆ ಕೊಟ್ಟ ಮಹತ್ವ (ಅಕ್ಟೋಬರ್ ೯೮ರ ಸಂಚಿಕೆ) ಎಂಬ ಲೇಖನ ಸರಳವಾಗಿ ಹಾಗೂ ನೇರವಾಗಿ ನಮಗೆ ತಲಪುತ್ತದೆ, ಲೇಖನ ತಿಪ್ಪೇಸ್ವಾಮಿ ಅವರ ಸರಳ ವ್ಯಕ್ತಿತ್ವಕ್ಕೆ ಅನುಗುಣವಾಗಿಯೇ ಇದೆ.

ಈ ಕಿರುಲೇಖನದಲ್ಲಿ ಗಾಂಧೀಜಿಯವರ ಭಾರತದ ಆರ್ಥಿಕ ಕಲ್ಪನೆಗಳನ್ನು ಬಿಡಿಸುತ್ತಲೇ ಲೇಖಕರು ಪರೋಕ್ಷವಾಗಿ ಕರ್ನಾಟಕ ಹಾಗೂ ಗಾಂಧೀಜಿ ಅವರ ಸಂಬಂಧವನ್ನೂ ತಿಳಿಸುತ್ತಾರೆ. ಒಮ್ಮೆ ನಮ್ಮನ್ನು ನಾವು ಅವಲೋಕಿಸುವಂತೆ ಮಾಡಿದೆ ; ಈ ಲೇಖನ. ಅದಕ್ಕಾಗಿ ನಾಡಪ್ರೇಮಿ ತಿಪ್ಪೇಸ್ವಾಮಿ ಅವರಿಗೂ ಲೇಖನ ಪ್ರಕಟಿಸಿದ ತಮಗೂ ಅಭಿನಂದನೆಗಳು.

ಬೃಂದಾವನ ಬಡಾವಣೆ
ಮೈಸೂರು ೫೭೦ ೦೨೦

ಹೊರೆಯಾಲ ದೊರೆಸ್ವಾಮಿ
ಬರಹಗಾರರು

ಮಾನ್ಯರೆ,

ಪುಸ್ತಕ ಪ್ರಪಂಚ ಅಕ್ಟೋಬರ್ ೯೮ರ ಸಂಚಿಕೆಯಲ್ಲಿ ಪ್ರಕಟವಾದ ಸೋದರಿ ಪಿ. ಎಸ್. ದುರ್ಗಾ ಅವರು 'ಮತ್ತೆ ದೊರಕಿದ ಭಾಗ್ಯ' ಕಥೆ ಮನಮುಟ್ಟುವಂತೆ ಇದೆ. ವಾಸ್ತವ ಚಿತ್ರಣವೇನೋ ಅನ್ನುವಷ್ಟರ ಮಟ್ಟಿಗೆ ನಿರೂಪಣೆ ಯಶಸ್ವಿಯಾಗಿ ಬಂದಿದೆ. 'ಅಳುವ ಕಡಲಿನಲಿ ತೇಲಿಬರುತಲಿದೆ ನಗೆಯ ಹಾಯಿ ದೋಣಿ' ಎಂಬ ಕವನಪಂಕ್ತಿಯು ಈ ಕಥಾರೂಪದ ಶಬ್ದ ಚಿತ್ರಕ್ಕೆ ಶಿರೋನಾಮೆಯಂತಿದೆ.

ಶ್ರೀರಾಂಪುರ ೨ನೇ ಹಂತ
ಮೈಸೂರು ೫೭೦ ೦೨೩

ಮಾಧವರಾವ್ ಮುಧೋಳ್

ಮಾನ್ಯ ಸಂಪಾದಕರಿಗೆ,

೯೮ರ ನವೆಂಬರ್ ಸಂಚಿಕೆಯಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ಭಾಷೆ ಸೊಗಸೆಂದರೆ,ಅದು ಕ್ಲೀಷೆಯಾಗಬಹುದು.ಈ ಪತ್ರ ಬರೆಯುವ ನನ್ನ ಮುಂದೆ ಹಿರಿಯರು ಬರೆದ ಪತ್ರ ಇದೆ. ಅದರಲ್ಲಿ 'ಪುಸ್ತಕ ಪ್ರಪಂಚ'ದ ಬಗ್ಗೆ ಹೃದಯ ತುಂಬಿ ಬರೆದಿದ್ದಾರೆ.

ನಾಡಿನ ಓದುಗರಿಗೆ ಕಣ್ಮಣಿಯಾದವರ ಬಗ್ಗೆ ಮುಂದಿನ ಸಂಚಿಕೆಯಲ್ಲಿ ಲೇಖನಗಳನ್ನು ಪ್ರಕಟಿಸುವುದರ ಕುರಿತು ದೇಜಗೌರವರು ಚೆನ್ನಾಗಿ ಟಿಪ್ಪಣಿಯಲ್ಲಿ ತಿಳಿಸಿದ್ದಾರೆ. ಇದರಿಂದ ನನ್ನಂಥವರ ತವಕ ಹೆಚ್ಚಿದೆ.

ನಂಜನಗೂಡು, ವಿದ್ಯಾಪೀಠ

ಎ. ಡಿ. ನಂಜುಂಡಸ್ವಾಮಿ

ಮಾನ್ಯ ಚಂದಾದಾರಲ್ಲಿ ಮನವಿ

ಪುಸ್ತಕ ಪ್ರಪಂಚ ಸದ್ಯದಲ್ಲೇ ಅರ್ಧಶತಮಾನ ದಾಟುತ್ತಿದ್ದು, ಓದುಗ ಬಂಧುಗಳ ಅಭಿಮಾನ, ಲೇಖಕ ಬಳಗದ ಸಹಕಾರ, ಸಂಪಾದಕ ಮಂಡಳಿಯ ಮಾರ್ಗದರ್ಶನ ಈ ಸಾಧನೆಗೆ ಕಾರಣವಾಗಿದೆ.

ವೃದ್ಧಿಸುತ್ತಿರುವ ಓದುಗರ ಮನತಣಿಸಲು 'ಪುಸ್ತಕ ಪ್ರಪಂಚ"ವನ್ನು ಆಕರ್ಷಕವಾಗಿ ಆಫ್‌ಸೆಟ್‌ನಲ್ಲಿ ಮುದ್ರಿಸಲು ಉದ್ದೇಶಿಸಿದೆ. ಈ ಹಿನ್ನಲೆಯಲ್ಲಿ ಮುದ್ರಣ ವೆಚ್ಚದ ಏರಿಕೆ, ಲೇಖಕರ ಗೌರವ ಸಂಭಾವನೆಯ ಹೆಚ್ಚಳ ಮುಂತಾದವನ್ನು ಸರಿದೂಗಿಸಲು ಪುಸ್ತಕ ಪ್ರಪಂಚ ಚಂದಾ ಪರಿಷ್ಕಾರ ಅನಿವಾರ್ಯವಾಗಿದೆ. ಆದ್ದರಿಂದ ದಿನಾಂಕ ೧-೧-೧೯೯೯ ರಿಂದ ಈ ಕೆಳಕಂಡಂತೆ ಪರಿಷ್ಕರಿಸಿದೆ.

೧) ವಾರ್ಷಿಕ ಚಂದಾ	ರೂ. ೧೦೦-೦೦
೨) ಆಜೀವ ಸದಸ್ಯತ್ವ ಚಂದಾ : ವ್ಯಕ್ತಿಗೆ	ರೂ. ೬೦೦-೦೦
೩) ಆಜೀವ ಸದಸ್ಯತ್ವ ಚಂದಾ : ಸಂಸ್ಥೆಗೆ	ರೂ. ೯೦೦-೦೦

ಮೇಲ್ಕಂಡ ಪರಿಷ್ಕೃತ ದರದಲ್ಲಿ ಚಂದಾದಾರರಾಗಿ ಮಾನ್ಯ ಓದುಗರು ಹಿಂದಿನಂತೆ ಪತ್ರಿಕೆಯನ್ನು ಪ್ರೋತ್ಸಾಹಿಸಬೇಕಾಗಿ ಕೋರಿದೆ.

ಡಿ.ಡಿ/ಎಂ.ಒ ಕಳುಹಿಸುವ ವಿಳಾಸ :

ದೂರವಾಣಿ : ೫೧೫೧೨೮
೫೧೫೮೨೮

ಪ್ರಧಾನಸಂಪಾದಕ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
೫/೧ ವಿನೋಬಾ ರಸ್ತೆ
ಮಾನಸಗಂಗೋತ್ರಿ ಆವರಣ
ಮೈಸೂರು-೫೭೦ ೦೦೬

Reg No. KRNN-29 / WPP 6

LICENCE No. 21
LICENCED TO POST WITH PAYMENT

ಆರ್. ಸಿ. ಹಿರೇಮಠ



೧೯೨೦ - ೧೯೯೮

Editeed by Chandrashekhararadhya Printed by Papanna
Printed & Published by Karnataka State Adult Education Council
5/1, Vinoba Road, Manasa Gangothri, Mysore-570 006.